ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೧೧೬
ವಿಚಾರ ಸಾಹಿತ್ಯಮಾಲೆ – ೩೭
ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ
ಸಹಕಾರದೊಂದಿಗೆ

ಪ್ರಧಾನ ಸಂಪಾದಕರು
ಡಾ. ಪ್ರಧಾನ್ ಗುರುದತ್ತ

ಸಂಪಾದಕರು
ಡಾ. ಎ. ವಿ. ನರಸಿಂಹಮೂರ್ತಿ

ಶ್ರೇಷ್ಠ ಚೈತನ್ಯಗಳ ವೈಭವ
(ಶ್ರೇಣಿ ೨)

ಭವನದ ಗ್ರಂಥ ವಿಶ್ವವಿದ್ಯಾನಿಲಯ

ಶ್ರೇಷ್ಠ ಚೈತನ್ಯಗಳ ವೈಭವ
(ಶ್ರೇಣಿ ೨)

ಆನೋ ಭದ್ರಾಃ ಕ್ರತವೋ ಯನ್ತು ವಿಶ್ವತಃ
(ಎಲ್ಲ ಸದ್ವಿಚಾರಗಳು ಎಲ್ಲೆಡೆಯಿಂದಲೂ ಬರಲಿ)
–ಋಗ್ವೇದ, I. ೮೯–೧

ಮೂಲ
ವಿವಿಧ ಲೇಖಕರು
ಅನುವಾದ
ಟಿ. ಎಸ್. ಲಲಿತಾ

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು
ಮತ್ತು
ಭಾರತೀಯ ವಿದ್ಯಾ ಭವನ, ಮೈಸೂರು

Shreshtha Chaitanyagala Vaibhava (Sreni-2): Kannada translation of *Pageant of Great Lives* (Series II); Kannada translation by **T.S. Lalitha;** Editor-in-Chief : **Dr. Pradhan Gurudatta;** Editor of the series : **Dr. A.V. Narasimha Murthy;** published under the joint auspices of **Kuvempu Bhasha Bharati Pradhikara**, Kalagrama, Jnana Bharathi, Behind Bangalore University Campus, Mallattahalli, Bangalore - 560 056, and **Bharatiya Vidya Bhavana,** Mysore; Published by **P. Narayana Swamy,** Registrar, Kuvempu Bhasha Bharathi Pradhikara : 2010; Pp. xxii + 68 ; Price: Rs. 10/-

ಮುದ್ರಣ : ೨೦೧೦
ಪುಟಗಳು : xxii + ೬೮
ಬೆಲೆ : ರೂ. ೧೦/–

ಪ್ರಕಾಶಕರು :
ಪಿ. ನಾರಾಯಣಸ್ವಾಮಿ
ರಿಜಿಸ್ಟ್ರಾರ್
ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ : **ಮಯೂರ ಪ್ರಿಂಟ್ ಆಡ್ಸ್**

ಮುದ್ರಕರು :
ಮೆ॥ ಮಯೂರ ಪ್ರಿಂಟ್ ಆಡ್ಸ್
ನಂ. ೬೯, ಸುಭೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦೦೨೦ ದೂ : ೨೩೩೪೨೭೨೪

ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು – ೫೬೦ ೦೦೧
ದಿನಾಂಕ : ೫–೮–೨೦೦೯
ಸಿಎಂ/ಪಿಎಸ್/೧೪೭/೦೯

ಮೊದಲ ಮಾತು

ಕನ್ನಡ ನಾಡಿನ ಹೆಮ್ಮೆಯ ಮಹಾಕವಿ ಶ್ರೀ ಕುವೆಂಪು ಅವರು ಕನ್ನಡದ ಕೀರ್ತಿಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಎತ್ತಿ ಹಿಡಿದ ಮಹಾಚೇತನ. ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸಂಸ್ಥಾಪಿಸಿರುವ **'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'** ರಾಷ್ಟ್ರೀಯ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಬೇಕೆಂಬುದು ಸರ್ಕಾರದ ಸದಾಶಯ. ಬೆಂಗಳೂರು **'ಜ್ಞಾನಭಾರತಿ'** ಆವರಣದಲ್ಲಿ ನಿರ್ಮಿಸಲಾಗಿರುವ ಬೃಹತ್ ಭವನದ ಸಮುಚ್ಚಯದಲ್ಲಿ ಶಿಕ್ಷಣ, ತರಬೇತಿ ಮತ್ತು ಪ್ರಕಟಣೆಗಳ ರೂಪದಲ್ಲಿ ಬಹು–ಆಯಾಮದ ಅದರ ಚಟುವಟಿಕೆಗಳು ಅರಳಿ ನಿಲ್ಲಲಿವೆ.

ಅದು ಆರಂಭಿಸಲಿರುವ ಭಾಷಾಂತರ ಮತ್ತು ತೌಲನಿಕ ಸಾಹಿತ್ಯ ಸಂಬಂಧವಾದ ವಿಶಿಷ್ಟ ಶಿಕ್ಷಣಗಳು ಆಡಳಿತ ಕ್ಷೇತ್ರ, ನ್ಯಾಯಾಂಗ ಕ್ಷೇತ್ರ ಮತ್ತು ಶಿಕ್ಷಣ ಕ್ಷೇತ್ರಗಳಿಗೆ ಪೂರಕವಾಗಿ, ಕನ್ನಡವನ್ನು ಸರ್ವತೋಮುಖವಾಗಿ ಬೆಳೆಸಲು ಸಹಾಯಕವಾಗಲಿವೆ.

ಭಾರತೀಯ ಭಾಷಾ–ಸಾಹಿತ್ಯಗಳ ಉತ್ತಮೋತ್ತಮ ಕೃತಿಗಳನ್ನು ಮಾತ್ರವಲ್ಲದೆ, ವಿಶ್ವಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳನ್ನು ಜಾಗತಿಕ ಸಾಹಿತ್ಯಕ್ಕೆ ಪರಿಚಯಿಸಿಕೊಡುವ ಕರ್ತವ್ಯದ ಜೊತೆಗೆ, ಜ್ಞಾನ–ವಿಜ್ಞಾನ ಮತ್ತು ತಂತ್ರಜ್ಞಾನದ ಮಹತ್ವದ ಕೃತಿಗಳನ್ನು ಕನ್ನಡಕ್ಕೆ ತರುವ ಮಹತ್ತರ ಕಾರ್ಯವನ್ನೂ ಅದು ಹಮ್ಮಿಕೊಳ್ಳಬೇಕಾದ ಅಗತ್ಯವಿದೆ.

ನಾಡಿನ ಶ್ರೇಷ್ಠ ವಿದ್ವಾಂಸರ ಸಲಹೆ–ಸೂಚನೆ–ಮಾರ್ಗದರ್ಶನಗಳ ಬೆಳಕಿನಲ್ಲಿ ಅದರ ಕೆಲಸ ಕಾರ್ಯಗಳು ಆದರ್ಶಪ್ರಾಯವಾಗಿ ಮೂಡಿಬರಲಿ ಹಾಗೂ ಇದೊಂದು ವಿಶಿಷ್ಟ ಸಂಸ್ಥೆಯಾಗಿ ದೇಶ–ವಿದೇಶಗಳ ಗಮನವನ್ನೂ ಸೆಳೆಯುವಂತಾಗಲಿ ಎಂದು ಹಾರೈಸುತ್ತೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳಲ್ಲಿ ಆಸಕ್ತರೆಲ್ಲರೂ ಪಾಲ್ಗೊಳ್ಳಬೇಕೆಂಬ, ಇದರ ಪ್ರಕಟಣೆಗಳನ್ನು ಜನಸಮುದಾಯ ಆದರ–ವಿಶ್ವಾಸಗಳಿಂದ ಸ್ವೀಕರಿಸುವರೆಂಬ ಆಶಯ ನಮ್ಮದಾಗಿದೆ.

ಭಾರತೀಯ ವಿದ್ಯಾಭವನದಂಥ ರಾಷ್ಟ್ರೀಯ ಮಹತ್ವದ ಸಂಸ್ಥೆಯ ಸಹಯೋಗದೊಂದಿಗೆ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ವಿದ್ಯಾಭವನದ ಗ್ರಂಥ ವಿಶ್ವವಿದ್ಯಾಲಯ ಮಾಲೆಯ ಪುಸ್ತಕಗಳನ್ನು ಹೊರತರುವ ಯೋಜನೆಯನ್ನು ಹಾಕಿಕೊಂಡಿರುವುದು ಸಂತೋಷದ ಬೆಳವಣಿಗೆಯೇ ಆಗಿದೆ. ಈ ಮಾಲೆಯ ಪುಸ್ತಕಗಳು ಕುವೆಂಪು ಭಾಷಾ ಭಾರತಿ ಮತ್ತು ಭಾರತೀಯ ವಿದ್ಯಾಭವನದ ಸಂಯುಕ್ತ ಪ್ರಕಟಣೆಗಳಾಗಿ ಹೊರಬರುತ್ತಿರುವುದೂ ಸಂತೋಷದ ಸಂಗತಿಯೇ ಆಗಿದೆ.

(ಬಿ.ಎಸ್.ಯಡಿಯೂರಪ್ಪ)

ಕರ್ನಾಟಕ ಸರ್ಕಾರ

ಗೋವಿಂದ ಎಂ. ಕಾರಜೋಳ
ಕನ್ನಡ ಮತ್ತು ಸಂಸ್ಕೃತಿ, ಸಣ್ಣ ನೀರಾವರಿ ಹಾಗೂ
ಜವಳಿ ಸಚಿವರು

ವಿಧಾನ ಸೌಧ
ಬೆಂಗಳೂರು – ೦೧

ಶುಭಾಕಾಂಕ್ಷೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಈಗಾಗಲೇ ಖ್ಯಾತಿಯನ್ನು ಗಳಿಸಿದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹತ್ವದ ಸಾಹಿತ್ಯಿಕ, ಐತಿಹಾಸಿಕ, ವೈಜ್ಞಾನಿಕ ಮತ್ತು ಇತರ ಗ್ರಂಥಗಳನ್ನು ಪ್ರಕಟಿಸುವ ಮೂಲಕ ಮತ್ತು ರಾಷ್ಟ್ರೀಯ ವಿಚಾರಸಂಕಿರಣಗಳನ್ನು ಏರ್ಪಡಿಸುವ ಮೂಲಕ ಅಂತರರಾಷ್ಟ್ರೀಯ ಮಟ್ಟದ ಸಂಸ್ಥೆಯಾಗಿ ಬೆಳೆಯುವ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಗಳನ್ನು ಇಡುತ್ತಿರುವುದು ನನಗೆ ತುಂಬ ಸಂತೋಷವನ್ನು ತಂದುಕೊಟ್ಟಿದೆ. ಈ ಮೂಲಕ ಕನ್ನಡ ನಾಡಿನ ಜನತೆಗೆ ಈಗಾಗಲೇ ಮಹತ್ವದ ಕೃತಿಗಳು ಕನ್ನಡದಲ್ಲಿ ದೊರೆಯುವಂತಾಗಿಸುವುದು ಮಾತ್ರವಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳ ಪರಿಚಯ ಇತರ ಭಾಷಾ ಬಾಂಧವರಿಗೂ ಆಗುವಂತೆ ಮಾಡುವ ದಿಕ್ಕಿನಲ್ಲಿ ಈ ಸಂಸ್ಥೆ ಕಾರ್ಯೋನ್ಮುಖವಾಗಬೇಕಾಗಿದೆ. ಈ ಕಾರ್ಯದಲ್ಲಿ ನಾಡಿನ ಖ್ಯಾತ ಲೇಖಕರು, ವಿದ್ವಾಂಸರು, ವಿಮರ್ಶಕರು ಸಹಕರಿಸುತ್ತಿರುವುದು ವಿಶೇಷ ಸಂಗತಿಯೇ ಆಗಿದೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಆಶ್ರಯದಲ್ಲಿ ಮುಂದಿನ ದಿನಗಳಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳು ಪ್ರಾರಂಭವಾಗಲಿರುವುದು ಸಂತೋಷದ ಸಂಗತಿ. ನಮ್ಮ ತರುಣ ಜನಾಂಗವನ್ನು ಈ ಸಾಹಿತ್ಯಿಕ–ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಿದ್ಧಗೊಳಿಸುವ ಕಾರ್ಯ ಇದರ ಮೂಲಕ ನಡೆಯುತ್ತದೆ ಎಂದು ನಂಬಿದ್ದೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಕ್ರಮಗಳಲ್ಲಿ ನಾಡಿನ ಜನತೆ ಸಕ್ರಿಯವಾಗಿ ಭಾಗವಹಿಸಲಿ ಎಂದು ಹಾರೈಸುತ್ತೇನೆ.

ಗೋವಿಂದ ಎಂ. ಕಾರಜೋಳ

ಕರ್ನಾಟಕ ಸರ್ಕಾರ

ರಮೇಶ್ ಬಿ.ಝಳಕಿ, ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ
ವಾರ್ತಾ ಇಲಾಖೆ

ವಿಕಾಸ ಸೌಧ
ಬೆಂಗಳೂರು – ೦೧

ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಂದ ನಮ್ಮ ನಾಡಿನ ಜನಸಮುದಾಯದ ಗಮನವನ್ನು ಸೆಳೆಯುವ ದಿಕ್ಕಿನಲ್ಲಿ ಮುನ್ನಡೆಯುತ್ತಿರುವುದು ತುಂಬ ಸಂತೋಷದ ಸಂಗತಿಯೇ ಆಗಿದೆ. ಪ್ರಾಧಿಕಾರದ ಒಂದು ಭಾಗವೇ ಆಗಿ ಕಲ್ಪಿಸಿಕೊಳ್ಳಲಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯ ಕಾರ್ಯಚಟುವಟಿಕೆಗಳ ಅಂಗವಾಗಿ ಹೊರತರಲಾಗಿದ್ದ ಸುಮಾರು ೬೦ ಗ್ರಂಥಗಳ ಜೊತೆಗೆ, ಪ್ರಾಧಿಕಾರ ಮತ್ತಷ್ಟು ಮಹತ್ವಪೂರ್ಣ ಗ್ರಂಥಗಳನ್ನು ಹೊರತರುತ್ತಿದ್ದು, ಸದ್ಯದಲ್ಲಿಯೇ ಈ ಸಂಖ್ಯೆ ನೂರರ ಗಡಿಯನ್ನು ದಾಟಲಿದೆ. 'ಭಾರತೀಯ ವಿದ್ಯಾಭವನ'ದಂಥ ರಾಷ್ಟ್ರೀಯ ಸಂಸ್ಥೆಯೊಂದಿಗೆ ಸಂಯುಕ್ತ ಕಾರ್ಯಕ್ರಮವನ್ನು ಏರ್ಪಡಿಸಿಕೊಂಡು ಪ್ರಾಧಿಕಾರ ಮುನ್ನಡೆಯಲಿರುವುದು ಪ್ರಾಧಿಕಾರದ ಚಟುವಟಿಕೆಗಳಿಗೆ ಹೊಸ ಆಯಾಮವನ್ನೇ ನೀಡಲಿದೆ ಎಂದು ನಂಬಿದ್ದೇನೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ೧೪ ಸಂಪುಟಗಳ ಕನ್ನಡ ಅನುವಾದದ ಪರಿಷ್ಕರಣ, ೧೫ ರಿಂದ ಮುಂದಿನ ಸಂಪುಟಗಳ ಅನುವಾದ ಕಾರ್ಯ, ಪಂಡಿತ್ ದೀನ್‌ದಯಾಳ್ ಉಪಾಧ್ಯಾಯ ಅವರ ಸಮಗ್ರ ಕೃತಿಗಳ ಕನ್ನಡ ಅನುವಾದದ ಪ್ರಕಟಣೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕನ್ನಡ ಲೇಖಕರ ಸಂಚಯಗಳ ಹಿಂದೀ ಮತ್ತು ಇಂಗ್ಲಿಷ್ ಆವೃತ್ತಿಗಳ ಪ್ರಕಟಣೆ – ಇವೇ ಮೊದಲಾದ ಮಹತ್ವದ ಕಾರ್ಯಕ್ರಮಗಳನ್ನು ಈ ಪ್ರಾಧಿಕಾರ ಹಮ್ಮಿಕೊಂಡಿರುವುದು ಸ್ತುತ್ಯರ್ಹವಾದ ಸಂಗತಿಯೇ ಆಗಿದೆ. 'ಕಾವೇರಿ ನ್ಯಾಯಾಧಿಕರಣ'ದ ತೀರ್ಪಿನ ಕನ್ನಡ ಆವೃತ್ತಿಯೂ ಸದ್ಯದಲ್ಲಿಯೇ ಹೊರಬರಲಿದೆ. ವೈಜ್ಞಾನಿಕ, ತಾಂತ್ರಿಕ ಮತ್ತು ವೈದ್ಯಕೀಯ ಸಾಹಿತ್ಯ ಪ್ರಕಟಣೆಯತ್ತಲೂ ಪ್ರಾಧಿಕಾರ ಗಮನಹರಿಸಿದೆ. ಪ್ರಾಧಿಕಾರದ ಮುನ್ನಡೆಗೆ ಕರ್ನಾಟಕ ಸರ್ಕಾರದ ಎಲ್ಲ ಬಗೆಯ ನೆರವೂ ಲಭಿಸಲಿದೆ.

ಈ ಎಲ್ಲ ಚಟುವಟಿಕೆಗಳು ಕನ್ನಡಿಗರ ಆದರ, ಮೆಚ್ಚಿಕೆ, ಸಂತೋಷಗಳಿಗೆ ಪಾತ್ರವಾಗುತ್ತದೆಂದು ನಂಬಿದ್ದೇನೆ.

(ರಮೇಶ್ ಬಿ.ಝಳಕಿ)

ಕರ್ನಾಟಕ ಸರ್ಕಾರ

ಮನು ಬಳಿಗಾರ್
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

ದಿನಾಂಕ : ೦೭.೦೮.೨೦೦೯

ಪ್ರಾಸ್ತಾವಿಕ ನುಡಿ

ಕುವೆಂಪು ಭಾಷಾ ಭಾರತಿ ಅಂಗವಾಗಿ ಕರ್ನಾಟಕ ಸರ್ಕಾರ ೨೦೦೫ರಲ್ಲಿ ಸ್ಥಾಪಿಸಿದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕೇವಲ ಮೂರು ವರ್ಷಗಳಲ್ಲಿ ಮಾಡಿರುವ ವೈವಿಧ್ಯಮಯವಾದ ಕಾರ್ಯವನ್ನು ನಾನು ಗಮನಿಸಿದ್ದೇನೆ. ಕುವೆಂಪು ಭಾಷಾ ಭಾರತಿಯ ಕಟ್ಟಡ ಸಮುಚ್ಚಯದ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು, ಸನ್ಮಾನ್ಯ ಮುಖ್ಯಮಂತ್ರಿಗಳು ಅದರ ಉದ್ಘಾಟನ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ. ವೈವಿಧ್ಯಮಯವಾದ ಮತ್ತು ವ್ಯಾಪಕವಾದ ಕಾರ್ಯಯೋಜನೆಗಳನ್ನು, ಧ್ಯೇಯೋದ್ದೇಶಗಳನ್ನು ಹೊಂದಿರುವ ಕುವೆಂಪು ಭಾಷಾ ಭಾರತಿ ಕುವೆಂಪು ಅವರ ಹೆಸರಿನಲ್ಲಿಯೇ ಸ್ಥಾಪಿತವಾಗಿದ್ದರೂ ಕುವೆಂಪು ಸಾಹಿತ್ಯದ ಪ್ರಚಾರ ಪ್ರಸಾರಗಳಿಗೆ ಮಾತ್ರವೇ ಸೀಮಿತವಾಗಿರುವುದಿಲ್ಲ. ಕುವೆಂಪು ಮಾಡಿರುವ ಅತ್ಯುಚ್ಚ ಸಾಹಿತ್ಯಿಕ ಸಾಧನೆಯ ಪ್ರತೀಕವಾಗಿ ಈ ಸಂಸ್ಥೆಗೆ ಆ ಹೆಸರನ್ನು ಕೊಡಲಾಗಿದೆ. ಕನ್ನಡ ಭಾಷಾ ಸಾಹಿತ್ಯಗಳ ಹಿರಿಯ ಸಾಧನೆಯನ್ನು ಕನ್ನಡೇತರರಿಗೆ, ದೇಶ–ವಿದೇಶಗಳ ಸಾಹಿತ್ಯಿಕ ಸಾಧನೆಯನ್ನು ಕನ್ನಡಿಗರಿಗೆ ಪರಿಚಯಿಸಿಕೊಡುವುದಲ್ಲದೆ, ಸಾಹಿತ್ಯ, ಜ್ಞಾನ–ವಿಜ್ಞಾನ–ತಂತ್ರಜ್ಞಾನಗಳ ವಿವಿಧ ಕ್ಷೇತ್ರಗಳಲ್ಲಿನ ಸಾಧನೆಗೆ ಕನ್ನಡವನ್ನು ಅಣಿಗೊಳಿಸುವ ಧ್ಯೇಯವನ್ನೂ ಇದು ಇರಿಸಿಕೊಂಡಿದೆ. ಹೀಗೆ ಇದು ಸರ್ವಭಾಷೆಗಳ ಸಾಮರಸ್ಯದ ಪ್ರತೀಕವಾದ ಸಾಹಿತ್ಯಿಕ ಸಂಸ್ಥೆಯಾಗಿ ಕೆಲಸ ಮಾಡಲಿದೆ. ಭಾಷಾಂತರ ಶಿಕ್ಷಣ, ವಿದೇಶ ಭಾಷೆಗಳ ಶಿಕ್ಷಣ, ತೌಲನಿಕ ಸಾಹಿತ್ಯಾಧ್ಯಯನ, ತರಬೇತಿ ಕಾರ್ಯಕ್ರಮಗಳು, ಪ್ರಕಟಣೆಗಳು – ಹೀಗೆ ಬಹುಮುಖವಾದ ಕಾರ್ಯಚಟುವಟಿಕೆಗಳಿಂದ ಕುವೆಂಪು ಭಾಷಾ ಭಾರತಿ ನಾಡಿನ ಹೆಮ್ಮೆಯ ಸಂಸ್ಥೆಯಾಗಿ ಬೆಳೆದು ಬರಬೇಕೆಂಬ ಆಶಯವನ್ನು ಇರಿಸಿಕೊಳ್ಳಲಾಗಿದೆ. ಕುವೆಂಪು ಭಾಷಾ ಭಾರತಿಯ ಅಂಗವಾಗಿ ಈ ಹಿಂದೆ ಸ್ಥಾಪಿತವಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕುವೆಂಪು ಭಾಷಾ ಭಾರತಿಯಲ್ಲಿ ಈಗ ವಿಲೀನಗೊಂಡಿದ್ದು, ಹೆಚ್ಚಿನ ವೈವಿಧ್ಯ ಮತ್ತು ವ್ಯಾಪ್ತಿಯ ಕಾರ್ಯಕ್ರಮಗಳಲ್ಲಿ ಅದು ತನ್ನನ್ನು ತೊಡಗಿಸಿಕೊಳ್ಳಲಿದೆ. ಈ ಅಕಾಡೆಮಿಯ ಮೂರು ವರ್ಷಗಳ ಅಲ್ಪಾವಧಿಯಲ್ಲಿ ಅಭಿನಂದನೀಯವಾದ ಕಾರ್ಯವನ್ನು ಮಾಡಿದ ಹಿರಿಯ ಬಹುಭಾಷಾ ವಿದ್ವಾಂಸರಾದ ಡಾ. ಪ್ರಧಾನ್ ಗುರುದತ್ತ ಅವರನ್ನು ಕುವೆಂಪು ಭಾಷಾ ಭಾರತಿಯ ಪ್ರಥಮಾಧ್ಯಕ್ಷರಾಗಿ ಕರ್ನಾಟಕ ಸರ್ಕಾರ ನೇಮಕ ಮಾಡಿದ್ದು,

ಅವರು ಈ ಸಂಸ್ಥೆಯ ಧ್ಯೇಯೋದ್ದೇಶಗಳನ್ನು ಈಡೇರಿಸಲು ಸಂಕಲ್ಪಬದ್ಧರಾಗಿದ್ದಾರೆ ಎಂದು ನಾನು ಭಾವಿಸಿದ್ದೇನೆ.

ಕುವೆಂಪು ಭಾಷಾ ಭಾರತಿ ತನ್ನ ವಿಶಿಷ್ಟ ಕಾರ್ಯಚಟುವಟಿಕೆಗಳಿಂದ ಕನ್ನಡಿಗರ ಮೆಚ್ಚಿನ ಸಾಹಿತ್ಯಿಕ – ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ. ಸಂಸ್ಥೆಯ ಉದ್ಘಾಟನೆಯ ಹೊತ್ತಿಗೆ ಅದರ ಅನೇಕ ಪ್ರಕಟಣೆಗಳು ಹೊರತರುತ್ತಿರುವುದು ಅದರ ಕಾರ್ಯಚಟುವಟಿಕೆಗಳ ಪ್ರತೀಕವಾಗಿದೆ. ಈ ಸಂಸ್ಥೆ ಇತೋಪ್ಯತಿಶಯವಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

ಭಾರತೀಯ ಸಂಸ್ಕೃತಿ, ಇತಿಹಾಸ ಸಾಹಿತ್ಯ ಕ್ಷೇತ್ರಗಳಿಗೆ ತನ್ನ ಪ್ರಕಟಣೆಗಳ ಮೂಲಕ ಹಾಗೂ ಶೈಕ್ಷಣಿಕ ಕಾರ್ಯಗಳ ಮುಖೇನ ಸ್ಮರಣೀಯ ಸೇವೆಯನ್ನು ಸಲ್ಲಿಸುವ ಮೂಲಕ ಭಾರತೀಯ ವಿದ್ಯಾ ಭವನ ನಾಡಿನ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಒಂದಾಗಿ ಪರಿಣಮಿಸಿದೆ. 'ಹಿಸ್ಟರಿ ಅಂಡ್ ಕಲ್ಚರ್ ಆಫ್ ದಿ ಇಂಡಿಯನ್ ಪೀಪಲ್' ಮಾಲೆಯ ಸಂಪುಟಗಳ ಮೂಲಕ ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಗಳ ನೈಜ ಚಿತ್ರಣವನ್ನು ಮುಂದಿರಿಸಿದ ಹಿರಿಮೆಯೂ ಅದರದಾಗಿದೆ. ಜನಸಾಮಾನ್ಯರನ್ನು ದೃಷ್ಟಿಯಲ್ಲಿರಿಸಿಕೊಂಡು ರಚಿಸಲಾದ ಅದರ 'ಬುಕ್ ಯೂನಿವರ್ಸಿಟಿ' ಮಾಲೆಯ ಪುಸ್ತಕಗಳ ಕನ್ನಡ ಆವೃತ್ತಿ ಭಾರತೀಯ ವಿದ್ಯಾಭವನ ಮತ್ತು ಕುವೆಂಪು ಭಾಷಾ ಭಾರತಿಯ ಸಂಯುಕ್ತ ಪ್ರಕಟಣೆಗಳಾಗಿ ಹೊರಬರುತ್ತಿರುವುದು ವೈಯಕ್ತಿಕವಾಗಿಯೂ ನನಗೆ ಸಂತೋಷ ಸಮಾಧಾನಗಳನ್ನು ತಂದಿದೆ. ಈ ಪುಸ್ತಕಗಳನ್ನು ಕನ್ನಡ ಜನತೆ ಎಂದಿನಂತೆ ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

(ಮನು ಬಳಿಗಾರ್)

ಪೀಠಿಕೆ

ಶ್ರೀ ಕುವೆಂಪು ಅವರು ಕನ್ನಡ ನಾಡಿನ ಹೆಮ್ಮೆಯ ರಾಷ್ಟ್ರಕವಿ. ಕನ್ನಡದ ಇನ್ನೊಬ್ಬ ವರಕವಿಗಳಾದ ಬೇಂದ್ರೆಯವರಿಂದಲೇ ಯುಗದ ಕವಿ, ಜಗದ ಕವಿ ಎಂದು ಕೀರ್ತಿತರಾಗಿದ್ದಂಥವರು. ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ತರಗಳಲ್ಲಿ ಎತ್ತಿ ಹಿಡಿದ ಮಹಾಚೇತನವೂ ಅವರಾಗಿದ್ದರು. ಸಾಹಿತ್ಯದ ಅನೇಕ ಪ್ರಕಾರಗಳಿಗೆ ಮಹತ್ವಪೂರ್ಣ ಕೊಡುಗೆಗಳನ್ನು ನೀಡಿರುವ ಹಿರಿಮೆಯೂ ಅವರದಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿಯವರೆಗೆ ರಾಷ್ಟ್ರಮಟ್ಟದ ಬಹುತೇಕ ಗೌರವ ಪ್ರಶಸ್ತಿಗಳೆಲ್ಲ ಅವರದಾಗಿವೆ. ರಾಷ್ಟ್ರಮಟ್ಟದ ಈ ಗೌರವ ಪ್ರಶಸ್ತಿಗಳೆಲ್ಲ ಕನ್ನಡದಲ್ಲಿ ಮೊದಲ ಬಾರಿಗೆ ಅವರನ್ನು ಅರಸಿಬಂದವು. ದೇಶ–ವಿದೇಶಗಳ ವಿಶ್ವವಿದ್ಯಾನಿಲಯಗಳ ಹಾಗೂ ಪ್ರತಿಷ್ಠಿತ ಸಾಹಿತ್ಯಿಕ ಸಂಸ್ಥೆಗಳ ಗೌರವಾದರಗಳಿಗೂ ಅವರು ಪಾತ್ರರಾಗಿದ್ದರು. ಶ್ರೀ ಕುವೆಂಪು ಅವರ ಶೈಕ್ಷಣಿಕ–ಸಾಹಿತ್ಯಿಕ ಹಿರಿಮೆ ಸಾಧನೆಗಳನ್ನು ಗುರುತಿಸಿ, ಅವರ ಹೆಸರಿನಲ್ಲಿ ಅಧ್ಯಯನ ಸಂಸ್ಥೆಗಳನ್ನು ಮಾತ್ರವಲ್ಲದೆ, ವಿಶ್ವವಿದ್ಯಾನಿಲಯವೊಂದನ್ನೂ ಸ್ಥಾಪಿಸಲಾಗಿದೆ. ಶ್ರೀ ಕುವೆಂಪು ಅವರ ಮಹಾಕಾವ್ಯವಾದ 'ಶ್ರೀ ರಾಮಾಯಣ ದರ್ಶನಂ' ಸೇರಿದಂತೆ ಅವರ ಸಾಹಿತ್ಯದ ಬಹ್ವಂಶ ಇಂಗ್ಲಿಷ್‌ನಂಥ ವಿದೇಶಿ ಭಾಷೆಗೆ ಮಾತ್ರವಲ್ಲದೆ ಹಿಂದಿಯಂಥ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ ಎಂಬುದು ಗಮನಾರ್ಹವಾದ ಸಂಗತಿಯಾಗಿದೆ. ಶ್ರೀ ಕುವೆಂಪು ಅವರ ಈ ಹೈಮಾಚಲೋಪಮ ಸಾಧನೆಗೆ ಯೋಗ್ಯವಾದ ರಾಷ್ಟ್ರೀಯ ಮಹತ್ವದ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬುದು ಮತ್ತು ಅದು ಭಾರತೀಯ ಸಾಹಿತ್ಯಿಕ ಸಾಂಸ್ಕೃತಿಕ ಲೋಕದ ಹೆಮ್ಮೆಯ ಪ್ರತೀಕವಾದ ಸಂಸ್ಥೆಯಾಗಬೇಕೆಂಬುದು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆಯ ಮೂಲ ರೂವಾರಿ ಪ್ರೊ. ದೇ. ಜವರೇಗೌಡ ಅವರು, 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಆರಂಭಿಸಲಾಗಿದ್ದ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಈಗ ವಿಧ್ಯುಕ್ತವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'ದಲ್ಲಿ ವಿಲೀನಗೊಳಿಸಲಾಗಿದ್ದು, ಅದರ ಎಲ್ಲ ಕಾರ್ಯಚಟುವಟಿಕೆಗಳೂ ಇನ್ನಷ್ಟು ವ್ಯಾಪ್ತಿ–ವೈವಿಧ್ಯಗಳೊಂದಿಗೆ ಮುಂದುವರಿಯಲಿವೆ. 'ಕುವೆಂಪು ಭಾಷಾ ಭಾರತಿ' ಕುವೆಂಪು ಸಾಹಿತ್ಯದ ಪ್ರಚಾರ–ಪ್ರಸಾರಗಳಿಗೆ ಮಾತ್ರವೇ ಮೀಸಲಾದ ಸಂಸ್ಥೆಯಾಗಿರದೆ, ಕನ್ನಡ ಸಾಹಿತ್ಯದ ಹಿರಿಮೆ–ಗರಿಮೆಗಳನ್ನು ರಾಷ್ಟ್ರೀಯ–ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಸುವ, ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಉತ್ಕೃಷ್ಟ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಮಹದಾಶಯವನ್ನು ಹೊಂದಿದೆ.

ಬೆಂಗಳೂರು ವಿಶ್ವವಿದ್ಯಾನಿಲಯದ ಜ್ಞಾನಭಾರತಿ ಆವರಣದಲ್ಲಿ ಎರಡು ಎಕರೆಗಳಷ್ಟು ವಿಶಾಲವಾದ ಸ್ಥಳದಲ್ಲಿ 'ಕುವೆಂಪು ಭಾಷಾ ಭಾರತಿ'ಯ ಕಟ್ಟಡದ

ಶಿಲಾನ್ಯಾಸ ಕಾರ್ಯಕ್ರಮ ದಿನಾಂಕ: ೦೧–೦೯–೨೦೦೫ರಂದು ಅಂದಿನ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎನ್. ಧರ್ಮಸಿಂಗ್ ಅವರಿಂದ ನೆರವೇರಿತು. 'ವಿಶ್ವಚೇತನ' ಮತ್ತು 'ಕಾಜಾಣ' ಎಂದು ಹೆಸರಿಸಲಾಗಿರುವ ಎರಡು ಬೃಹತ್ ಕಟ್ಟಡಗಳ ಸಮುಚ್ಚವನ್ನು ಒಳಗೊಂಡಿರುವ ಕುವೆಂಪು ಭಾಷಾ ಭಾರತಿಯ ಕಟ್ಟಡದ ನಿರ್ಮಾಣಕ್ಕೆ ಸುಮಾರು ಎರಡೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದ್ದು, ೨೦೦೯ರಲ್ಲಿ ಇದರ ಕಾಮಗಾರಿ ಪೂರ್ಣಗೊಂಡಿದೆ. ಇದೇ ದಿನಾಂಕ: ೧೯–೦೮–೨೦೦೯ರ ಬೆಳಗ್ಗೆ ೧೧–೦೦ ಗಂಟೆಗೆ ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ ಅವರು ಈ ಕಟ್ಟಡ–ಸಮುಚ್ಚಯದ ಉದ್ಘಾಟನ ಸಮಾರಂಭವನ್ನು ಹಾಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆಗಳ ಮೊದಲ ಕಂತಿನ ಹತ್ತು ಪುಸ್ತಕಗಳ ಬಿಡುಗಡೆ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳ ಸ್ವರೂಪ ಮೂರು ಮುಖದ್ದಾಗಿರುತ್ತದೆ :

(ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು
(ಆ) ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು
(ಇ) ಪ್ರಕಟಣೆಗಳು

(ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು :

(i) "ಕನ್ನಡ ಸಾಹಿತ್ಯ ಹಿರಿಮೆ–ಗರಿಮೆಗಳಲ್ಲಿ ಯಾವ ಭಾರತೀಯ ಸಾಹಿತ್ಯಕ್ಕೂ ಕಡಿಮೆಯಾಗಿಲ್ಲ. ಅದರ ಮಹತ್ವವನ್ನು ಎತ್ತಿತೋರಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿದೆ ಅಷ್ಟೇ" ಎಂಬುದಾಗಿ ಕುವೆಂಪು ಅವರು ಉದ್ಘೋಷಿಸಿದ್ದರು. ಈ ಹಿನ್ನೆಲೆಯಲ್ಲಿ ಶೈಕ್ಷಣಿಕ ಚಟುವಟಿಕೆಗಳ ಅಂಗವಾಗಿ ಅನುವಾದ, ತೌಲನಿಕ ಸಾಹಿತ್ಯ, ವಿದೇಶಿ ಭಾಷೆಗಳ ಶಿಕ್ಷಣಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡ ಶಿಕ್ಷಣ ಕ್ರಮಗಳನ್ನು ಆರಂಭಿಸಬೇಕೆಂದು ಯೋಜಿಸಲಾಗಿದೆ :

(೧) ಭಾಷಾಂತರ ಡಿಪ್ಲೊಮಾ ಶಿಕ್ಷಣ – ಮೊದಲ ಹಂತದಲ್ಲಿ ಇಂಗ್ಲಿಷ್, ಹಿಂದೀ, ಕನ್ನಡ, ತೆಲುಗು, ತಮಿಳು, ಮಲಯಾಳಂ, ಬಂಗಾಳಿ, ಮರಾಠಿ ಭಾಷೆಗಳಲ್ಲಿ ವಿಶೇಷ ತರಬೇತಿಗೆ ಒತ್ತುಕೊಟ್ಟು ಈ ಶಿಕ್ಷಣವನ್ನು ಪ್ರಾರಂಭಿಸಲಾಗುತ್ತದೆ.
(೨) ಭಾಷಾಂತರದಲ್ಲಿ ಎಂ.ಫಿಲ್ ಶಿಕ್ಷಣ : ವಿಶೇಷ ವಿಷಯಕ್ಕೆ ಒತ್ತುಕೊಟ್ಟು
(೩) ಪತ್ರಿಕೋದ್ಯಮ ಮತ್ತು ಭಾಷಾಂತರ
(೪) ಕಾನೂನುಶಾಸ್ತ್ರ, ಆಡಳಿತ ಭಾಷೆ ಮತ್ತು ಭಾಷಾಂತರ
(೫) ವಿಜ್ಞಾನ ಮತ್ತು ಮಾನವಿಕಶಾಸ್ತ್ರ ಕೃತಿಗಳು ಮತ್ತು ಭಾಷಾಂತರ ; ಮತ್ತು
(೬) ತೌಲನಿಕ ಸಾಹಿತ್ಯ
(೭) ವಿದೇಶೀ ಭಾಷೆಗಳ ಶಿಕ್ಷಣ (ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ)

(ii) ಕನ್ನಡ ಸಾಹಿತ್ಯವನ್ನು ವಿಶ್ವಸಾಹಿತ್ಯದ ಮಟ್ಟದಲ್ಲಿ ಪ್ರಚುರಪಡಿಸಬೇಕಾದರೆ – ಜಾಗತಿಕ ಪ್ರಾಚುರ್ಯದ ವಿದೇಶಿ ಭಾಷೆಗಳಿಗೆ ಕನ್ನಡದ ಶ್ರೇಷ್ಠ ಕೃತಿಗಳನ್ನು

ಕೊಂಡೊಯ್ಯುವ ಮಹತ್ವದ ಕಾರ್ಯವನ್ನು ಕೈಗೊಳ್ಳಬೇಕಾಗುತ್ತದೆ. ಹೀಗಾಗಿ ಮೊದಲ ಹಂತದಲ್ಲಿ ಸ್ಪ್ಯಾನಿಷ್, ಜಪಾನಿ, ಫ್ರೆಂಚ್, ರಷ್ಯನ್, ಜರ್ಮನ್, ಚೀಣೀ, ಆಫ್ರಿಕನ್ ಭಾಷೆಗಳು – ಈ ಎಲ್ಲ ಶಿಕ್ಷಣಗಳಿಗೆ ಸಂಬಂಧಿಸಿದಂತೆ, ತಜ್ಞರೊಂದಿಗೆ ಸಮಾಲೋಚಿಸಿ ಕಾರ್ಯಕ್ರಮಗಳನ್ನು ರೂಪಿಸುವುದು, ಶಿಕ್ಷಣಕ್ಕೆ ಮತ್ತು ತರಬೇತಿಗೆ ವ್ಯವಸ್ಥೆಯನ್ನು ಕಲ್ಪಿಸುವುದು ಮೊದಲಾದ ಕಾರ್ಯಗಳನ್ನು ಸಮರೋಪಾದಿಯಲ್ಲಿ ಕೈಗೊಳ್ಳಲಾಗುತ್ತದೆ. ವಿದೇಶಿ ದೂತಾವಾಸಗಳ ನೆರವಿನೊಂದಿಗೆ ಈ ಶಿಕ್ಷಣ ಕ್ರಮಗಳನ್ನು ಯೋಜಿಸಲಾಗುತ್ತದೆ.

ವಿವಿಧ ಭಾಷೆಗಳಲ್ಲಿ ಪರಿಣತಿಯನ್ನು ಪಡೆದಿರುವಂಥ ತರುಣ ಪ್ರತಿಭೆಗಳನ್ನು ಗುರುತಿಸಿ, ಅವರಿಗೆ ತರಬೇತಿ ನೀಡಿ ಪ್ರಕಟಣಾವಕಾಶಗಳನ್ನು ಕಲ್ಪಿಸಿಕೊಡಲು ಅನುಕೂಲವಾಗುವಂತೆ ವಿಚಾರಗೋಷ್ಠಿಗಳು, ವಿಚಾರಸಂಕಿರಣಗಳು, ಕಾರ್ಯಶಿಬಿರಗಳು ಮುಂತಾದ ವೈವಿಧ್ಯಮಯ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ಶ್ರೀ ಕುವೆಂಪು ಅವರು ಸಾಹಿತ್ಯ ಮತ್ತು ವಿಜ್ಞಾನ–ತಂತ್ರಜ್ಞಾನಗಳನ್ನು ಮಾನವ ಸಂಸ್ಕೃತಿಯ ಕಣ್ಣುಗಳೆಂದೇ ಭಾವಿಸಿದ್ದವರು. ಹೀಗಾಗಿ, ಜ್ಞಾನದ ಇತರ ಕ್ಷೇತ್ರಗಳತ್ತಲೂ ಕುವೆಂಪು ಭಾಷಾಭಾರತಿ ಕೈಚಾಚಲಿದೆ. ಈ ದೃಷ್ಟಿಯಲ್ಲಿ ಕನ್ನಡವನ್ನು ಸರ್ವಾಂಗ ಸಮೃದ್ಧವಾಗಿ ಬೆಳೆಸುವ ಅವರ ಆಶಯ ಕಾರ್ಯರೂಪಕ್ಕೆ ಬರಬಹುದಾಗಿದೆ.

ಕೇಂದ್ರ ಸರ್ಕಾರದ ರಾಷ್ಟ್ರೀಯ ಅನುವಾದ ಮಿಶನ್ ಯೋಜನೆ ಕಾರ್ಯರೂಪಕ್ಕೆ ಬರಲಿರುವ ಹಿನ್ನೆಲೆಯಲ್ಲಿ, ಇಂಥ ಶಿಕ್ಷಣಗಳನ್ನು ಪ್ರಾರಂಭಿಸುವುದಕ್ಕೆ ಹೆಚ್ಚಿನ ಅರ್ಥ ಮತ್ತು ಔಚಿತ್ಯ ದೊರೆಯುವಂತಾಗುತ್ತದೆ.

(ಆ) ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು :

ಕೇಂದ್ರ ಸಾಹಿತ್ಯ ಅಕಾಡೆಮಿ ರವೀಂದ್ರನಾಥ ಠಾಗೂರ್ ಅವರ ಪ್ರಾತಿನಿಧಿಕ ಸಂಕಲನಗಳನ್ನೊಳಗೊಂಡ 'ರವೀಂದ್ರ ಸಂಚಯ'ವನ್ನು ಹೊರತಂದಿರುವ ರೀತಿಯಲ್ಲಿಯೇ 'ಕುವೆಂಪು ಸಂಚಯ' ಮತ್ತು 'ಪು.ತಿ.ನ ಸಂಚಯ'ಗಳನ್ನು ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ಹೊರತರಲಾಗುತ್ತದೆ. ಮುಂಬರುವ ದಿನಗಳಲ್ಲಿ ಜಿ. ಎಸ್. ಶಿವರುದ್ರಪ್ಪ ಮೊದಲಾದ ಕನ್ನಡದ ಮಹತ್ವದ ಕವಿಗಳ ಸಂಕಲನಗಳನ್ನು ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ತರುವ ಯೋಜನೆಗಳನ್ನು ಹಾಕಿಕೊಳ್ಳಲಾಗುತ್ತದೆ. ಇದೇ ರೀತಿಯಲ್ಲಿ ಭಾರತೀಯ ಜ್ಞಾನಪೀಠ ಮತ್ತು ಇತರ ರಾಷ್ಟ್ರಮಟ್ಟದ ಪ್ರಶಸ್ತಿಗಳನ್ನು ಗಳಿಸಿರುವ ಶ್ರೇಷ್ಠ ಸಾಹಿತಿಗಳ ಪ್ರಾತಿನಿಧಿಕ ರಚನೆಗಳನ್ನು ಒಳಗೊಂಡ ಸಂಚಯ ಕೃತಿಗಳನ್ನು ಹೊರತರಲೂ ಕ್ರಮಕೈಗೊಳ್ಳಲಾಗುತ್ತದೆ. ಉದಾ: ಮೈಥಿಲಿ ಶರಣಗುಪ್ತ ಸಂಚಯ, ಜಯಶಂಕರ ಪ್ರಸಾದ್ ಸಂಚಯ (ಹಿಂದೀ), ವಿಶ್ವನಾಥ ಸಂಚಯ (ತೆಲುಗು), ಆಶಾಪೂರ್ಣಾದೇವಿ ಸಂಚಯ (ಬಂಗಾಳಿ), ಶಿವಶಂಕರ ಪಿಳ್ಳೈ ಮತ್ತು ಎಂ. ಟಿ. ವಾಸುದೇವ ನಾಯರ್ ಸಂಚಯ (ಮಲಯಾಳಂ) ಇತ್ಯಾದಿ.

ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯ ಮತ್ತು ಜಾಗತಿಕ ಸ್ತರಗಳಲ್ಲಿ ಪ್ರಚುರಪಡಿಸಲು ವಿಚಾರಗೋಷ್ಠಿಗಳನ್ನು ಸಮಾರಂಭಗಳನ್ನು ಏರ್ಪಡಿಸುವಂತೆಯೇ, ಇತರ ಭಾರತೀಯ ಭಾಷಾಸಾಹಿತ್ಯ ಮತ್ತು ವಿಶ್ವಸಾಹಿತ್ಯಕ್ಕೆ ಸಂಬಂಧಪಟ್ಟಂತಹ ಇದೇ ಬಗೆಯ ಅರ್ಥಪೂರ್ಣ ಕಾರ್ಯಕ್ರಮಗಳನ್ನೂ ರೂಪಿಸಲಾಗುತ್ತದೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಧ್ಯೇಯೋದ್ದೇಶಗಳಿಗೆ

ಪೂರಕವೂ–ಪ್ರೇರಕವೂ ಆಗುವಂತೆ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರೂಪಿಸುತ್ತದೆ. ಅಂತೆಯೇ, ರಾಷ್ಟ್ರಮಟ್ಟದ ಸಾಹಿತ್ಯಿಕ ಸಂಘ–ಸಂಸ್ಥೆಗಳಾಗಿರುವ ಕೇಂದ್ರ ಸಾಹಿತ್ಯ ಅಕಾಡೆಮಿ, ನ್ಯಾಷನಲ್ ಬುಕ್ ಟ್ರಸ್ಟ್, ಬಿರ್ಲಾ ಪ್ರತಿಷ್ಠಾನ ಮೊದಲಾದವುಗಳಲ್ಲಿನ ಕಾರ್ಯಕ್ರಮಗಳ ಪುನರಾವರ್ತನೆಯಾಗದಂತೆ ವಿಶಿಷ್ಟ ರೀತಿಯಲ್ಲಿ ಕುವೆಂಪು ಭಾಷಾಭಾರತಿ ಕಾರ್ಯಯೋಜನೆಗಳನ್ನು ರೂಪಿಸಲಾಗುತ್ತದೆ.

ರಾಷ್ಟ್ರೀಯ ಪ್ರಶಸ್ತಿ : ರಾಷ್ಟ್ರಮಟ್ಟದಲ್ಲಿ ಕುವೆಂಪು ಅವರ ಹೆಸರಿನಲ್ಲಿ ರಾಷ್ಟ್ರಮಟ್ಟದ ಪ್ರಶಸ್ತಿಯೊಂದನ್ನು ಸ್ಥಾಪಿಸಿ, ನಾಡಿನ ಶ್ರೇಷ್ಠ ಸಾಹಿತಿಗಳನ್ನು ಗುರುತಿಸಿ ಸನ್ಮಾನಿಸಲು ಹಾಗೂ ಅಂತಹವರ ಪ್ರಮುಖ ಕೃತಿಗಳನ್ನು ಕನ್ನಡದಲ್ಲಿ ಹೊರತರಲು ಯೋಜನೆಗಳನ್ನು ರೂಪಿಸಲಾಗುತ್ತದೆ.

ತರುಣ ಪ್ರತಿಭೆಗಳಿಗೆ ಪ್ರೋತ್ಸಾಹ : ತರುಣ ಪ್ರತಿಭೆಗಳನ್ನು ಗುರುತಿಸಿ, ವಿವಿಧ ಭಾರತೀಯ ಭಾಷೆಗಳಲ್ಲಿ ವಿಶೇಷ ತರಬೇತಿ ಲಭ್ಯವಾಗುವಂತೆ ಮಾಡಿ, ಮುಂದೆ ಸಾಹಿತ್ಯಿಕ ಕೊಳು–ಕೊಡೆ ಕಾರ್ಯದಲ್ಲಿ ಅವರು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲು ವಿವಿಧ ರಾಜ್ಯಸರ್ಕಾರಗಳ ನೆರವಿನೊಂದಿಗೆ ಶಿಷ್ಯವೇತನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕೆಂದು ಯೋಜಿಸಲಾಗಿದೆ.

(ಇ) ಪ್ರಕಟಣೆಗಳು :

'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಸ್ಥಾಪಿಸಲಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕಳೆದ ವರ್ಷವಷ್ಟೇ ೫೬ ಪುಸ್ತಕಗಳನ್ನು ಹೊರತಂದಿದ್ದು, ಕಳೆದ ೮ ತಿಂಗಳ ಅವಧಿಯಲ್ಲಿ ಸುಮಾರು ೧೦.೦೦ ಲಕ್ಷ ರೂಗಳನ್ನು ಮಾರಾಟದ ಮೂಲಕವೇ ಗಳಿಸಿಕೊಂಡಿದೆ. ಮುಂದೆ ಹಮ್ಮಿಕೊಳ್ಳಲಿರುವ ಹಾಗೂ ಮುನ್ನಡೆಯುತ್ತಿರುವ ಮಹತ್ವದ ಯೋಜನೆಗಳಲ್ಲಿ ಜೆ. ಡಿ. ಬರ್ನಾಲ್ ಅವರ 'ಸೈನ್ಸ್ ಇನ್ ಹಿಸ್ಟರಿ' ಗ್ರಂಥದ ನಾಲ್ಕು ಸಂಪುಟಗಳು, ವಿಲ್ ಡ್ಯೂರಾಂಟ್ ಅವರ 'ಸ್ಟೋರಿ ಆಫ್ ಸಿವಿಲಿಜೇಷನ್'ನ ಎಂಟು ಸಂಪುಟಗಳು (೪ರಿಂದ ೧೧), ವಿಜ್ಞಾನ–ತಂತ್ರಜ್ಞಾನಗಳಿಗೆ ಸಂಬಂಧಿಸಿದ ಸುಮಾರು ೧೦೦ ಗ್ರಂಥಗಳು, ಸೋಮದೇವನ 'ಕಥಾಸರಿತ್ಸಾಗರ'ದ ಐದು ಸಂಪುಟಗಳು (೬ರಿಂದ ೧೦) – ಇವನ್ನು ಮುಖ್ಯವಾಗಿ ಹೆಸರಿಸಬಹುದಾಗಿದೆ. 'ಭಾರತೀಯ ವಿಜ್ಞಾನ ಸಂಸ್ಥೆ'ಯಂಥ ಅಂತರರಾಷ್ಟ್ರೀಯ ಖ್ಯಾತಿಯ ಸಂಶೋಧನ ಸಂಸ್ಥೆಯ ಸಹಕಾರದೊಂದಿಗೆ ಇಂಗ್ಲಿಷ್ ಮತ್ತು ಜಾಪನೀಸ್ ಭಾಷೆಗಳಲ್ಲಿ ಮಾತ್ರ ಲಭ್ಯವಿರುವ 'ಶಾಕ್ ವೇವ್ಸ್'ನಂಥ ಗ್ರಂಥವೂ ಕನ್ನಡದಲ್ಲಿ ಹೊರಬರಲಿದೆ. ಭಾರತೀಯ ವಿದ್ಯಾಭವನದ ಗ್ರಂಥ ವಿಶ್ವವಿದ್ಯಾನಿಲಯ ಮಾಲಿಕೆಯ ಮೊದಲಕಂತಿನಲ್ಲಿ ಈ ಮಾಲಿಕೆಯ ೨೫ ಪುಸ್ತಕಗಳು ಸಂಯುಕ್ತ ಪ್ರಕಟಣೆಗಳಾಗಿ ಬರಲಿವೆ. 'ಅಂತರರಾಷ್ಟ್ರೀಯ ಕನಕದಾಸ ಮಿಷನ್' ಸಂಸ್ಥೆಯ ನೆರವಿನೊಂದಿಗೆ ಕನಕದಾಸರ ಸಾಹಿತ್ಯದ ಅನುವಾದ ಕಾರ್ಯವೂ ಆರಂಭಗೊಳ್ಳಲಿದೆ. ಹೀಗಾಗಿ, ಕನ್ನಡ ಪ್ರಕಾಶನದ ಕ್ಷೇತ್ರದಲ್ಲಿಯೂ, ಮಹತ್ವದ ಹೆಜ್ಜೆ ಗುರುತುಗಳನ್ನು ಕುವೆಂಪು ಭಾಷಾ ಭಾರತಿ ಮೂಡಿಸುತ್ತ ಮುನ್ನಡೆಯಲಿದೆ.

ಖಾಸಗಿ ಪ್ರಕಾಶಕರ ಸಹಭಾಗಿತ್ವ : ಖಾಸಗಿ ಪ್ರಕಾಶಕರ ಸಹಾಯ–ಸಹಕಾರಗಳೊಂದಿಗೆ ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯ ಮಟ್ಟದಲ್ಲಿ ಪ್ರಚುರಗೊಳಿಸುವ

ಸಲುವಾಗಿ ರಾಜ್ಯ ಸರ್ಕಾರ ವಿಶೇಷ ಯೋಜನೆಯೊಂದಕ್ಕೆ ಅನುಮತಿ ನೀಡಿದೆ. ಅದರ ಮೇರೆಗೆ ಕನ್ನಡ ಸಾಹಿತ್ಯ ಕೃತಿಗಳನ್ನು ಇತರ ಭಾರತೀಯ ಮತ್ತು ವಿದೇಶೀ ಭಾಷೆಗಳಲ್ಲಿ ಹೊರತರುವ ಪ್ರತಿಷ್ಠಿತ ಪ್ರಕಾಶನ ಸಂಸ್ಥೆಗಳಿಗೆ ಪ್ರಕಟಣೆಯ ಮೂಲಧನವನ್ನು ಮುಂಗಡವಾಗಿ ನೀಡಿ, ಮೂರು ವರ್ಷಗಳಲ್ಲಿ ಅವರು ಈ ಮುಂಗಡ ಹಣವನ್ನು ಹಿಂದಿರುಗಿಸುವಂತೆ ಈ ಕಾರ್ಯಕ್ರಮ ರೂಪಿಸಲಾಗಿದೆ. ಇತರ ಕ್ಷೇತ್ರಗಳಿಗೆ ಸರ್ಕಾರಗಳು ಅನೇಕ ರೀತಿಯಲ್ಲಿ ನೆರವಾಗುತ್ತಿದ್ದರೂ, ಪ್ರಕಟಣ ಕ್ಷೇತ್ರಕ್ಕೆ ಈ ಬಗೆಯ ನೆರವು ಇಲ್ಲದಿದ್ದರಿಂದ ಇದೊಂದು ಬಗೆಯ ವಿನೂತನ ಯೋಜನೆ ಆಗಿದೆ ಎಂದೂ, ಇಂಥ ಯೋಜನೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದಾಗಿಯೂ ಅನೇಕ ಪ್ರಕಾಶನ ಸಂಸ್ಥೆಗಳು ಈಗಾಗಲೇ ಮುಂದೆ ಬಂದಿವೆ. ಈ ದಿಕ್ಕಿನಲ್ಲಿ ವ್ಯವಸ್ಥಿತ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. ಹೀಗೆ ಪ್ರಕಟಣೆಯ ಕಾರ್ಯ ಕೈಗೊಳ್ಳುವ ಮೂಲಕ ಕನ್ನಡೇತರ ಭಾಷಾ–ಸಾಹಿತ್ಯ ವಲಯಗಳಲ್ಲಿ ಕನ್ನಡದ ಮೇರು ಕೃತಿಗಳು ಪರಿಚಯಗೊಳ್ಳಲೂ, ಜನಪ್ರಿಯವಾಗಲೂ ಸಹಾಯವಾಗುತ್ತದೆಂದು ನಂಬಲಾಗಿದೆ.

ಕರ್ನಾಟಕ ಸರ್ಕಾರದ ಉದಾರ ನೆರವಿನಿಂದ ಇಂಥ ಮಹತ್ವದ ಮತ್ತು ಬಹು ಆಯಾಮದ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ಭಾರತೀಯ ಮತ್ತು ವಿದೇಶಿ ಭಾಷೆಗಳ ನಡುವೆ ಒಂದು ಸಾಂಸ್ಕೃತಿಕ ಸೇತುವೆಯಾಗಿ, ಮಿನಿ ವಿಶ್ವವಿದ್ಯಾನಿಲಯವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ' ಕಾರ್ಯ ನಿರ್ವಹಿಸಲಿದೆ. ನಾಡಿನ ಗಣ್ಯ ವಿದ್ವಾಂಸರ ಸಹಾಯ–ಸಹಕಾರಗಳನ್ನು ಪಡೆದುಕೊಂಡು ಈ ಕಾರ್ಯ ನಿರ್ವಹಿಸಲಾಗುತ್ತದೆ. ಹೀಗಾಗಿ, ಕುವೆಂಪು ಭಾಷಾ ಭಾರತಿ ಕನ್ನಡ ನಾಡಿನ ಇತಿಹಾಸದಲ್ಲಿ ಮಾತ್ರವಲ್ಲದೆ, ಭಾರತೀಯ ಸಾಹಿತ್ಯಿಕ–ಸಾಂಸ್ಕೃತಿಕ ಕ್ಷೇತ್ರದಲ್ಲಿ ಒಂದು ಮಹತ್ವದ ಸಂಸ್ಥೆಯಾಗಿ ರೂಪುಗೊಳ್ಳಲಿದೆಯೆಂದೂ, ಕನ್ನಡ ನಾಡಿನ ವಿದ್ವತ್‌ವಲಯಕ್ಕೆ, ಸಾಹಿತ್ಯ ಪ್ರೇಮಿಗಳಿಗೆ, ಕುವೆಂಪು ಅವರ ಅಭಿಮಾನಿಗಳಿಗೆ ಇದು ಸಂತಸದ ಸಂಗತಿ ಆಗಲಿದೆ ಎಂದೂ ನಂಬಿದ್ದೇವೆ.

ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರ ಡಾ. ಎ. ವಿ. ನರಸಿಂಹ ಮೂರ್ತಿ ಅವರ ದಕ್ಷ ಮಾರ್ಗದರ್ಶನದಲ್ಲಿ ಮಹತ್ವದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಕನ್ನಡ ನಾಡಿನ ವಿದ್ವತ್ ಸಮುದಾಯದ ಹಾಗೂ ಸಾಹಿತ್ಯ ಸಂಸ್ಕೃತಿ ಇತಿಹಾಸ ಪ್ರಿಯರ ಮೆಚ್ಚುಗೆಯನ್ನು ಸೂರೆಗೊಂಡಿದೆ. ಕನ್ನಡ ಸಾಹಿತ್ಯ ಲೋಕದ ಹಿರಿಯ ಚೇತನಗಳನ್ನು ಪರಿಚಯಿಸಿಕೊಡುವ ಅದರ ಮಾಲಿಕೆ ಪ್ರಾದೇಶಿಕ ಭಾಷಾ ಸಂಸ್ಕೃತಿ–ಸಾಹಿತ್ಯಗಳ ಬಗೆಗಿನ ಅದರ ಬದ್ಧತೆಗೂ ಸಾಕ್ಷಿಯಾಗಿದೆ. 'ಭವನ್ಸ್ ಬುಕ್ ಯೂನಿವರ್ಸಿಟಿ' ಮಾಲೆಯಲ್ಲಿ ಶ್ರೀಸಾಮಾನ್ಯರಿಗೆ ಮಾತ್ರವಲ್ಲದೆ, ಸಾಹಿತ್ಯ ಸಂಸ್ಕೃತಿ ಇತಿಹಾಸಗಳ ಬಗ್ಗೆ ಆಸಕ್ತರಾಗಿರುವ ಎಲ್ಲರಿಗೂ ಬೋಧಪ್ರದವಾಗಿರುವಂಥ ಕಿರುಹೊತ್ತಿಗೆಗಳನ್ನು ಹೊರತರಲಾಗಿದೆ. ಆಕಾರದಲ್ಲಿ ಕಿರಿದಾದರೂ ಮಹತ್ವದಲ್ಲಿ ಏನೂ ಕಡಿಮೆ ಇಲ್ಲದ ಈ ಪುಸ್ತಕಗಳನ್ನು ಕನ್ನಡದಲ್ಲೂ ಹೊರತರುವ ಯೋಜನೆಯಲ್ಲಿ ಭಾಗಿಯಾಗುವುದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಹೆಮ್ಮೆಯ ವಿಷಯವಾಗಿದೆ. ಭಾಗೀದಾರಿಕೆಯ ಈ ಸಲಹೆಗೆ ವ್ಯಾವಹಾರಿಕವೂ, ಕಾರ್ಯಾತ್ಮಕವೂ ಆದ ರೂಪವನ್ನು ನೀಡುವಲ್ಲಿ ಪ್ರಧಾನ ಪಾತ್ರವಹಿಸಿರುವ ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ ಅಧ್ಯಕ್ಷರಾಗಿರುವ

ಡಾ. ಎ.ವಿ. ನರಸಿಂಹಮೂರ್ತಿ ಅವರಿಗೂ, ಕನ್ನಡ ಪ್ರಕಾಶನ ಕಾರ್ಯಕಾರಿ ಮಂಡಳಿಯ ಅಧ್ಯಕ್ಷರಾಗಿರುವ ಶ್ರೀ ಎನ್. ರಾಮಾನುಜ ಅವರಿಗೂ ವಿದ್ಯಾ ಭವನದ ಬೆಂಗಳೂರು ಶಾಖೆಯ ಕಾರ್ಯಕಾರಿ ನಿರ್ದೇಶಕರಾಗಿರುವ ಪದ್ಮಶ್ರೀ ಡಾ. ಮತ್ತೂರು ಕೃಷ್ಣಮೂರ್ತಿ ಅವರಿಗೂ, ಕಾರ್ಯಕ್ರಮ ಮತ್ತು ಯೋಜನೆಗಳ ನಿರ್ದೇಶಕರಾಗಿರುವ ಶ್ರೀ ಎಚ್.ಎನ್. ಸುರೇಶ್ ಅವರಿಗೂ ಭಾರತೀಯ ವಿದ್ಯಾಭವನದ ಕೇಂದ್ರ ಕಛೇರಿಯ ಪದಾಧಿಕಾರಿಗಳಿಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ.

ಅರುವತ್ತರ ದಶಕದಲ್ಲಿ ಈ ಮಾಲೆಯನ್ನು ಆರಂಭಿಸಿದಾಗ ಇದನ್ನು 'ಒಂದು ರೂಪಾಯಿ ಮಾಲೆ' ಎಂದೇ ಕರೆಯಲಾಗಿತ್ತು. ಈಗಲೂ ಜನಸಾಮಾನ್ಯರಿಗೆ ಸುಲಭ ದರದಲ್ಲಿ ಈ ಪುಸ್ತಕಗಳನ್ನು ತಲುಪಿಸುವ ಉದ್ದೇಶದಿಂದ ಈ ಮಾಲೆಯ ಎಲ್ಲ ಪುಸ್ತಕಗಳಿಗೂ ಹತ್ತು ರೂ.ಗಳ ಸಾಂಕೇತಿಕ ದರವನ್ನೇ ಗೊತ್ತು ಪಡಿಸಲಾಗಿದೆ. ಪ್ರಕಟಣೆಯ ವೆಚ್ಚದ ಒಂದು ಭಾಗವನ್ನು ವಿದ್ಯಾಭವನ ಭರಿಸಿರುವುದು ಇದಕ್ಕೆ ಕಾರಣವಾಗಿದೆ. ಈ ಸೌಹಾರ್ದತೆಗಾಗಿಯೂ ನಾವು ವಿದ್ಯಾಭವನದ ಎಲ್ಲ ಪದಾಧಿಕಾರಿಗಳಿಗೆ ವಂದನೆಗಳನ್ನು ಸಲ್ಲಿಸಬಯಸುತ್ತೇವೆ.

ಈ ಮಾಲೆಯ ೨೫ ಪುಸ್ತಕಗಳು ಒಮ್ಮೆಗೇ ಹೊರ ಬರುತ್ತಿರುವುದಕ್ಕೆ ಬೆಂಗಳೂರು ಕೇಂದ್ರದ ತ್ರಿಮೂರ್ತಿಗಳ ಸಹಾಯ ಸಹಕಾರ ಮತ್ತು ಮಾರ್ಗದರ್ಶನಗಳು ಮಾತ್ರವಲ್ಲದೆ ಡಾ. ಎ. ವಿ. ನರಸಿಂಹಮೂರ್ತಿಯವರ ದಕ್ಷ ಸಂಪಾದಕತ್ವ ಮತ್ತು ಕಾರ್ಯಪಟುತ್ವಗಳು ಕಾರಣವಾಗಿವೆ. ಇದು ನಮಗೆ ಸಂತೋಷವನ್ನೂ ಹೆಮ್ಮೆಯನ್ನೂ ತಂದುಕೊಟ್ಟಿದೆ. ಇವನ್ನು ಸುಂದರವಾಗಿ ಹೊರತರುವಲಿಯೂ ಅವರಿಂದ ನಮಗೆ ಸಲಹೆ ಸೂಚನೆಗಳು ದೊರೆತಿವೆ. ಈ ಎಲ್ಲ ಕೃಪೆಗಾಗಿ ನಾನು ಆ ಎಲ್ಲ ಮಹನೀಯರಿಗೂ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಲ್ಲಿಸಬಯಸುತ್ತೇನೆ.

ಈ ಪುಸ್ತಿಕೆಯ ಕನ್ನಡ ಆವೃತ್ತಿಯನ್ನು ಸಿದ್ಧಪಡಿಸಿ ಕೊಟ್ಟಿರುವ ಶ್ರೀಮತಿ ಟಿ.ಎಸ್. ಲಲಿತ ಅವರಿಗೂ, ಕರಡುಗಳ ಪರಿಶೀಲನೆಯಲ್ಲಿ ಸಹಕರಿಸಿರುವ ಶ್ರೀ ಎಚ್.ಎಸ್. ಹರಿಶಂಕರ್ ಅವರಿಗೂ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ. ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಬೆಂಗಳೂರು – ೫೬

ಪ್ರಧಾನ್ ಗುರುದತ್ತ
ಅಧ್ಯಕ್ಷ

ಅರಿಕೆ

ಭಾರತೀಯ ವಿದ್ಯಾಭವನದ ಸ್ಥಾಪಕರಾದ ಕುಲಪತಿ ಡಾ. ಕೆ. ಎಂ. ಮುನ್ಷಿಯವರು ಜನಸಾಮಾನ್ಯರಲ್ಲಿ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುವ ದೃಷ್ಟಿಯಿಂದ ಭವನ್ಸ್ ಬುಕ್ ಯೂನಿವರ್ಸಿಟಿ ಹಾಗೂ ಅದರಲ್ಲೇ ಸೇರಿಕೊಂಡಿರುವಂತೆ ಒಂದು ರೂಪಾಯಿ ಪುಸ್ತಕ ಮಾಲಿಕೆಯನ್ನು ಆರಂಭಿಸಿದರು. ಇವು ಜನಪ್ರಿಯವಾಗಿ ಅನೇಕ ಶ್ರೇಷ್ಠ ಲೇಖಕರ ಕೃತಿಗಳು ಈ ಮಾಲಿಕೆಯಲ್ಲಿ ಪ್ರಕಟಗೊಂಡಿವೆ. ಅನೇಕ ಈ ಪುಸ್ತಕಗಳು ನಾಲ್ಕಾರು ಮುದ್ರಣಗಳನ್ನು ಕಂಡಿವೆ.

ಇಂತಹ ಶ್ರೇಷ್ಠ ಪುಸ್ತಕಗಳು ಕನ್ನಡ ಭಾಷೆಯಲ್ಲಿ ಲಭ್ಯವಿಲ್ಲದುದನ್ನು ಗಮನಿಸಿದ ಭಾರತೀಯ ವಿದ್ಯಾಭವನ ಇದಕ್ಕಾಗಿ ಒಂದು ಯೋಜನೆಯನ್ನು ಹಾಕಿಕೊಂಡಿದೆ. ಇದರಲ್ಲಿ ಡಾ. ಮತ್ತೂರು ಕೃಷ್ಣಮೂರ್ತಿಗಳ ಪಾತ್ರ ಹಿರಿದಾದುದು; ಅವರು ಅನೇಕ ಸೂಚನೆ, ಸಲಹೆಗಳನ್ನು ನೀಡಿದ್ದಾರೆ. ಇದರಿಂದಾಗಿ ಶ್ರೇಷ್ಠ ಲೇಖಕರ ಚಿಂತನೆಗಳು ಕನ್ನಡ ಜನಗಳಿಗೆ ದೊರಕುವ ಹಾಗೂ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳ ಪರಿಚಯ ಕರ್ನಾಟಕದ ಓದುಗರಿಗೆ ಆಗುವಂತೆಯೂ ಆಯಿತು. ಭಾರತೀಯ ವಿದ್ಯಾಭವನದ ಮುಂಬಯಿ ಪ್ರಧಾನ ಕೇಂದ್ರದ ಎಕ್ಸಿಕ್ಯುಟಿವ್ ಸೆಕ್ರೆಟರಿ ಹಾಗೂ ಡೈರೆಕ್ಟರ್ ಜನರಲ್ ಆಗಿರುವ ಶ್ರೀ ಎಚ್. ಎನ್. ದಸ್ತೂರ್ ಅವರು ಈ ಯೋಜನೆಗೆ ಅನುಮತಿ ನೀಡಿ ಸಹಕರಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಬೆಂಗಳೂರು ಮತ್ತು ಮೈಸೂರಿನ ಭಾರತೀಯ ವಿದ್ಯಾಭವನಗಳ ಎಲ್ಲ ಪದಾಧಿಕಾರಿಗಳೂ ಈ ಯೋಜನೆಯಲ್ಲಿ ಆಸಕ್ತಿ ವಹಿಸಿದ್ದಾರೆ. ಕರ್ನಾಟಕದ ಖ್ಯಾತ ಲೇಖಕರು ಈ ಕನ್ನಡ ಕೈಂಕರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಭಾಷಾಂತರಗಳನ್ನು ಮಾಡಿಕೊಟ್ಟಿದ್ದಾರೆ.

ಖ್ಯಾತ ಕನ್ನಡ ವಿದ್ವಾಂಸರೂ, ಕುವೆಂಪು ಕನ್ನಡ ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಡಾ. ಪ್ರಧಾನ್ ಗುರುದತ್ತ ಅವರು ಈ ಪುಸ್ತಕಗಳ ಪ್ರಕಟಣೆಯ ಭಾರವನ್ನು ವಹಿಸಿಕೊಂಡು ನಮಗೆ ಉಪಕರಿಸಿದ್ದಾರೆ. ಇಷ್ಟು ಶೀಘ್ರದಲ್ಲಿ ಈ ಪುಸ್ತಕಗಳು ಪ್ರಕಟವಾಗುತ್ತಿರುವುದಕ್ಕೆ ಅವರ ಆಸಕ್ತಿ ಮತ್ತು ಕಾರ್ಯಶೀಲತೆಯೇ ಮುಖ್ಯ ಕಾರಣ. ಅವರಿಗೆ ಭಾರತೀಯ ವಿದ್ಯಾಭವನದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಪ್ರಸ್ತುತ, 'ಶ್ರೇಷ್ಠ ಚೈತನ್ಯಗಳ ವೈಭವ' (ಶ್ರೇಣಿ ೨) ಎಂಬ ಪುಸ್ತಕ ಖ್ಯಾತ ಲೇಖಕಿ ಶ್ರೀಮತಿ ಟಿ. ಎಸ್. ಲಲಿತಾ ಅವರ ಸಮರ್ಥ ಅನುವಾದ. ಅವರಿಗೆ ನಮ್ಮ ಕೃತಜ್ಞತೆಗಳು. ಈ ಪುಸ್ತಕವನ್ನು ಕನ್ನಡಿಗರು ಆದರದಿಂದ ಬರಮಾಡಿಕೊಳ್ಳುತ್ತಾರೆಂದು ನಾವು ಆಶಿಸುತ್ತೇವೆ.

ಎನ್. ರಾಮಾನುಜ
ಅಧ್ಯಕ್ಷರು
ಭಾರತೀಯ ವಿದ್ಯಾಭವನ, ಕರ್ನಾಟಕ

ಎ. ವಿ. ನರಸಿಂಹಮೂರ್ತಿ
ಅಧ್ಯಕ್ಷರು, ವಿದ್ಯಾಭವನ, ಮೈಸೂರು
ಪ್ರಧಾನ ಸಂಪಾದಕ

ಮೂಲ ಸಂಪಾದಕರ ಪ್ರಸ್ತಾವನೆ

ಭವನ್ಸ್ ಬುಕ್ ಯೂನಿವರ್ಸಿಟಿ ಮಾಲಿಕೆಯ ಪುಸ್ತಕಗಳು ವಿಶೇಷ ಸಾಫಲ್ಯವನ್ನು ಕಂಡಿವೆ. ಈ ಹನ್ನೊಂದು ವರ್ಷಗಳಲ್ಲಿ ಸುಮಾರು ಒಂದೂಕಾಲು ಮಿಲಿಯನ್ ಪುಸ್ತಕಗಳು ಮಾರಾಟಗೊಂಡಿವೆ. ಆದರೂ ಭವನವು ಆಗಾಗ್ಗೆ ಪ್ರಕಾಶನಗೊಳಿಸುತ್ತಿರುವ ಕಡಿಮೆ ಬೆಲೆಯ ಕೆಲವು ಬಿಡಿ ಪುಸ್ತಕಗಳಿಗೆ ವಿಶೇಷ ಬೇಡಿಕೆ ಇದೆ. ಇದನ್ನು ಪೂರೈಸುವ ದೃಷ್ಟಿಯಿಂದ ಹೊಸ ಒಂದು ರೂಪಾಯಿ ಪುಸ್ತಕಗಳನ್ನು ಹಾಗೂ ಭವನ್ಸ್ ಬುಕ್ ಯೂನಿವರ್ಸಿಟಿ ಮಾಲಿಕೆಯ ಪುಸ್ತಕಗಳನ್ನೂ ಒಟ್ಟೊಟ್ಟಿಗೆ ಪ್ರಕಟಿಸಲು ತೀರ್ಮಾನಿಸಿದೆ.

ಈ ಹೊಸ ಒಂದು ರೂಪಾಯಿ ಮಾಲಿಕೆಯ ಪುಸ್ತಕಗಳು, ಇತರ ಮಾಲಿಕೆಯ ಪುಸ್ತಕಗಳಂತೆ ಸಾಫಲ್ಯವನ್ನು ಪಡೆದು ಭಾರತೀಯ ಸಂಸ್ಕೃತಿಯ ಮೌಲ್ಯದಲ್ಲಿ ಆಸಕ್ತಿ ಇರುವವರಿಗೆ ಇಷ್ಟವಾಗಿ, ಹೆಚ್ಚಿನ ಓದುಗರನ್ನು ತಲಪುತ್ತದೆ ಎಂದು ನಾನು ಭಾವಿಸಿದ್ದೇನೆ.

ಭಾರತೀಯ ವಿದ್ಯಾಭವನ
ಚೌಪಾಟಿ ರೋಡ್, ಬೊಂಬಾಯಿ–೭ **ಕೆ. ಎಂ. ಮುನ್ಷಿ**
ವಿಜಯದಶಮಿ, ಸೆಪ್ಟೆಂಬರ್ ೨೮, ೧೯೬೩

ಪ್ರಕಾಶಕರ ಟಿಪ್ಪಣಿ

ತಾವು ಮರಣಿಸಿದ ನಂತರ ಕಾಲದ ಮರಳಿನ ಮೇಲೆ ತಮ್ಮ ಹೆಜ್ಜೆಯ ಗುರುತುಗಳನ್ನು ಬಿಟ್ಟುಹೋಗುವುದು ಪ್ರತಿಯೊಬ್ಬರಿಗೂ ಸಾಧ್ಯವಿಲ್ಲ. ಆದರೆ ಮಹಾತ್ಮರ ಜೀವನಗಳ ಅಧ್ಯಯನವು. ಯಾರಿಗಾದರೂ ತಮ್ಮ ಜೀವನವನ್ನು ಸಾರ್ಥಕಗೊಳಿಸಿಕೊಳ್ಳುವಂತೆ ನೆನಪಾಗಿಸಲು, ನಿಜವಾಗಿಯೂ ಪ್ರಯೋಜನಕಾರಿಯಾಗಿರುತ್ತದೆ. ಮನುಷ್ಯನ ಜೀವನವನ್ನು ರೂಪಿಸಲು ಸಹಾಯಕವಾಗುವ ಪ್ರಭಾವಗಳಲ್ಲಿ ಪ್ರಮುಖವಾಗಿರುವುದು ಸತ್ಸಂಗ. ಎಂದರೆ ತಮ್ಮ ಶ್ರೇಷ್ಠತೆಯಲ್ಲಿ ಉತ್ತಮರೂ, ಉಪಕಾರಿಗಳೂ ಆಗಿರುವ ಮಹಾ ಪುರುಷರೊಡನೆ ಮಾನಸಿಕ ಸಂಬಂಧ. ಅವರ ಸಮಕಾಲೀನರೆಲ್ಲರೂ ಅಂಥ ಗಣ್ಯಪುರುಷರೊಂದಿಗೆ ಸ್ವಂತ ಸಂಬಂಧಗಳನ್ನು ಇಟ್ಟುಕೊಂಡಂಥ ಅದೃಷ್ಟವಂತರಾಗಿರುವಾಗ, ಭವಿಷ್ಯದ ಪೀಳಿಗೆಯವರೂ ಅವರ ಬಗ್ಗೆ ಏನನ್ನು ಹೇಳಲಾಗಿದೆಯೋ ಮತ್ತು ಅವರು ತಾವಾಗಿ ಏನನ್ನು ತಿಳಿಸಿದ್ದಾರೆಯೋ, ಅದನ್ನು ಓದಿಕೊಂಡು ತೃಪ್ತರಾಗಬೇಕು.

ಶತಮಾನಗಳಿಂದಲೂ, ಪ್ರಪಂಚದೆಲ್ಲೆಡೆಯಲ್ಲಿಯೂ ಅಂಥ ಮಹಾಪುರುಷರು ಎಂದಿಗೂ ಕಡಿಮೆ ಇರಲೇ ಇಲ್ಲ. ಅವರು ದಿವ್ಯತ್ವದ ಒಂದು ಭವ್ಯ ದೃಶ್ಯ ಹಾಗೂ ಸತ್ಯ, ಶೇಯಸ್ಸು ಮತ್ತು ಆಕರ್ಷಣೆಗಳ ಒಂದು ಮೆರವಣಿಗೆ. ನೈತಿಕ ಮತ್ತು ಆಧ್ಯಾತ್ಮಿಕ ಅಸಮತೋಲನದಿಂದ, ವಿಶ್ವದಲ್ಲಿ ಏರುಪೇರು ಆದಾಗ, ಭಗವಂತನು ಅವತರಿಸುತ್ತೇನೆಂದು ಭಾಷೆಯನ್ನಿತ್ತಿದ್ದರಿಂದ, ತಮ್ಮ ತಮ್ಮ ಕಾಲದಲ್ಲಿ ಪರಿಸ್ಥಿತಿಗಳಿಗನುಸಾರವಾಗಿ, ತಮಗೆ ಹೊಂದಿದ ರೀತಿಯಲ್ಲಿ ಅವರೆಲ್ಲರೂ ಹುಟ್ಟಿ ಬಂದು, ಜನರಿಗೆ ಸಾಂತ್ವದ ನೀಡಲು, ಉಪದೇಶಿಸಲು, ಎಚ್ಚರಿಸಲು ಮತ್ತು ಮಾರ್ಗದರ್ಶನ ನೀಡಲು ಬಂದರು.

ಭವನದ ನಿಯತಕಾಲಿಕೆಯಲ್ಲಿ (ಭವನ್ಸ್ ಜರ್ನಲ್) ಮಾನವತೆಯ ಇಂಥ ಶಾಶ್ವತ, ಅಮರ ಆಪದ್ಬಾಂಧವರ ಜೀವನಗಳ ಬಗ್ಗೆ ಸಂಕ್ಷಿಪ್ತ ಮಾಹಿತಿಗಳನ್ನು ಕ್ರಮಬದ್ಧವಾಗಿ ಧಾರಾವಾಹಿಯಾಗಿ ಪ್ರಕಟಿಸಲಾಗಿತ್ತು. ಅವುಗಳನ್ನೇ ಇದರಲ್ಲಿ ಮತ್ತು ಇದರೊಂದಿಗಿನ ಸಂಪುಟಗಳಲ್ಲಿ ಒಟ್ಟಿಗೆ ಸೇರಿಸಲಾಗಿದೆ. ಈ ವೈಭವದ ಮೆರವಣಿಗೆಯು ಜಾರತುಷ್ಟ್ರರಿಂದ ಆರಂಭವಾಗಿ, ದೀರ್ಘಾವಧಿ ಪ್ರಯಾಣಮಾಡಿ, ಕೊನೆಗೆ ಸರೋಜನಿ ನಾಯ್ಡು ಅವರಿಂದ ಕೊನೆಗೊಳ್ಳುತ್ತದೆ.

ವಿಶ್ವದ ಈ ಶ್ರೇಷ್ಠ ಪ್ರತಿಷ್ಠಿತ ವ್ಯಕ್ತಿಗಳ ಖ್ಯಾತಿವಂತ ಸಮೂಹದ ಮಂಡಲಿಗೆ ಬಂದು, ಅವರು ತಮ್ಮಲ್ಲಿ ಸಂಕೇತಿಸಿರುವ ಉನ್ನತ ಭಾವನೆಗಳು ಮತ್ತು ಉಚ್ಚತಮ ಸಾಹಸಗಳ ಭವ್ಯ ಅನುವಂಶಿಕ ಪ್ರಾಪ್ತಿ ಪಡೆಯಲು ಓದುಗನಿಗೆ ಆಹ್ವಾನವಿದೆ.

ಪರಿವಿಡಿ

Blank Page

ಶ್ರೇಷ್ಠ ಚೈತನ್ಯಗಳ ವೈಭವ

(ಶ್ರೇಣಿ ೨)

೧. ನಮ್ಮಾಳ್ವಾರ್

–ಡಾ. ವಿ.ಎ. ದೇವಸೇನಾಪತಿ

ತಮಿಳು ನಾಡಿನ ಭಕ್ತಿ ಚಳವಳಿ ವೈಷ್ಣವ ಧರ್ಮದ ಆಳ್ವಾರರಿಂದಲೂ, ಶೈವಧರ್ಮದ ನಾಯನ್ಮಾರರಿಂದಲೂ ಸ್ಫೂರ್ತಿ ಪಡೆದಿದೆ. 'ಆಳ್ವಾರ್' ಎಂಬ ಪದಕ್ಕೆ ಭಗವಂತನ ಮಂಗಳಕರ ಲಕ್ಷಣವಾದ ಸಂತೋಷ ಪ್ರಜ್ಞೆಯಲ್ಲಿ ಮುಳುಗಿದವನು ಎಂದರ್ಥ. ಹೀಗೆ ಆಳ್ವಾರರೆಂದರೆ ದೇವರ ಅಮಲಿನಲ್ಲಿರುವ ಆತ್ಮಗಳಾಗಿದ್ದವು.

ಹನ್ನೆರಡು ಆಳ್ವಾರರಲ್ಲಿ ನಮ್ಮಾಳ್ವಾರ್ ಅತ್ಯಂತ ಹಿರಿಯರೆಂದು (ಗೌರವಾನ್ವಿತರೆಂದು) ಪರಿಗಣಿಸಲ್ಪಡುತ್ತಾರೆ. ಆಳ್ವಾರರನ್ನು 'ಅಖಂಡವಾಗಿ' ತೆಗೆದುಕೊಂಡಾಗ, ನಮ್ಮಾಳ್ವಾರ್ ಅವರ ಆತ್ಮವೆಂದು ಪರಿಗಣಿಸಲ್ಪಡುತ್ತಾರೆ. 'ನಮ್ಮಾಳ್ವಾರ್' ಎಂಬ ಆ ಪದವೇ (ನಮ್ಮ ಆಳ್ವಾರ್ ಎಂಬರ್ಥ ಕೊಡುವ) ವೈಷ್ಣವರಿಂದ, ಅವರೆಷ್ಟು ಗೌರವಿಸಲ್ಪಡುತ್ತಿದ್ದರು ಹಾಗೂ ಗೌರವಿಸಲ್ಪಡುತ್ತಿದ್ದಾರೆ ಎಂಬುದನ್ನು ತೋರಿಸುತ್ತದೆ. ಇನ್ನೂ ಮುಂದುವರಿದು ಹೇಳುವುದಾದರೆ, ಕೇವಲ ವೈಷ್ಣವರಷ್ಟೇ ಅಲ್ಲ ಯಾರ ಹೃದಯಗಳು ಮುಮುಕ್ಷುಗಳ ಹೇಳಿಕೆಗಳಿಂದ ರೋಮಾಂಚನಗೊಳ್ಳುತ್ತವೆಯೋ ಅಂಥವರೆಲ್ಲಾ ನಮ್ಮಾಳ್ವಾರ್‌ರವರು ನಮ್ಮವರೆಂದು ಹಕ್ಕು ಸಾಧಿಸಬಹುದು.

ಲೌಕಿಕವಾಗಿಯಾಗಲೀ, ಆಧ್ಯಾತ್ಮಿಕವಾಗಿ ಆಗಲಿ ನಿರ್ದಿಷ್ಟ ದೇಶದಲ್ಲಾಗಲೀ ಅಥವಾ ನಿರ್ದಿಷ್ಟ ಸಮಯದಲ್ಲಾಗಲೀ ಮೇಲೆದ್ದು ತೋರಬಹುದಾದ ಮೇಧಾವಿತನ ಮನುಕುಲದ ಸಾರ್ವತ್ರಿಕ ಸ್ವತ್ತು. ಧಾರ್ಮಿಕ ಮೇಧಾವಿಗಳಾದ ಮುಮುಕ್ಷುಗಳು, ಸ್ಥಳ ಹಾಗೂ ಕಾಲದ ಮಿತಿಯನ್ನು ಮೀರಿ ಮೇಲೇರಿದವರು. "ಮುಮುಕ್ಷುಗಳ ಉತ್ತಮ ಸಾಹಿತ್ಯಕ್ಕೆ ಹುಟ್ಟುಹಬ್ಬವಾಗಲೀ ಅಥವಾ ಹುಟ್ಟುನೆಲವಾಗಲೀ ಇಲ್ಲ. ಭಗವಂತನೊಂದಿಗಿನ ಐಕ್ಯತೆಯನ್ನು ನಿರಂತರವಾಗಿ ಬೋಧಿಸುವ ಅವರ ಮಾತುಗಳು ಕಾಲಾತೀತವಾದುವು ಹಾಗೂ ಎಂದಿಗೂ ಹಳತಾಗದಂಥವು" ಎಂದು ಹೇಳಿದ ವಿಲಿಯಂ ಜೇಮ್ಸ್‌ನ ಮಾತುಗಳು ಮತ್ತೆ ನೆನಪಿಸಿಕೊಳ್ಳಲು ಯೋಗ್ಯವಾಗಿವೆ.

ದಕ್ಷಿಣ ಭಾರತದ ತಿರುನಲ್ವೇಲಿ ಜಿಲ್ಲೆಯ ತಿರುಕ್ಕುರಂಗೂರಿನಲ್ಲಿ (ನಮ್ಮಾಳ್ವಾರರ ಆಗಮನಾನಂತರ 'ಆಳ್ವಾರ್ ತಿರುನಗರಿ' ಎಂದು ಕರೆಯಲ್ಪಡುವ) ಕಾರಿಯಾರ್ ಎಂಬ ಹೆಸರಿನ ಮುಖ್ಯಸ್ಥನೊಬ್ಬನಿದ್ದ. ಆತ ಉಡೈಯನ್ ನಂಗೈಯಾರ್‌ಳನ್ನು

ವಿವಾಹವಾದ. ದಂಪತಿಗಳು ತಿರುಕ್ಕುರನ್ ದೇವಾಲಯದ ವೈಷ್ಣವ ಗುಡಿಯೊಂದಕ್ಕೆ ಭೇಟಿಕೊಟ್ಟಾಗ ಒಂದು ಮಗುವಿಗಾಗಿ ಪ್ರಾರ್ಥಿಸಿದರು. ಅಲ್ಲಿನ ಮುಖ್ಯ ದೇವತೆ ಸಂತೋಷದಿಂದ ತಾನೇ ಸ್ವತಃ ಅವರ ಮಗನಾಗಿ ಹುಟ್ಟುತ್ತೇನೆಂದು ಅಲ್ಲಿನ ದೇವಾಲಯದ ಅರ್ಚಕರ ಮೂಲಕ ತಿಳಿಯಪಡಿಸಿತು.

ಕಾಲಾಂತರದಲ್ಲಿ ಭವಿಷ್ಯದಲ್ಲಿ ನಮ್ಮಾಳ್ವಾರ್ ಎಂದು ಕರೆಯಲ್ಪಟ್ಟ ಮಗನೊಬ್ಬ ಹುಟ್ಟಿದ. ಇದು ಕಲಿಯುಗದ ೪೩ನೇ ದಿನವಾಗಿತ್ತೆಂದು ಹೇಳಲ್ಪಡುತ್ತದೆ. (ಕ್ರಿ.ಪೂ. ೩೧೦೨) ಆಧುನಿಕ ಸಂಶೋಧನಾ ವಿದ್ವಾಂಸರು ನಮ್ಮಾಳ್ವಾರರ ಜನನ ಕ್ರಿ.ಶ. ೭ ಹಾಗೂ ೯ನೇ ಶತಮಾನದ ನಡುವೆ ಎಂದು ಗೊತ್ತುಪಡಿಸಿದ್ದಾರೆ.

ನಮ್ಮಾಳ್ವಾರ್ – ಶಡಗೋಪ, ಮಾರನ್ ಹಾಗೂ ಪರಾಂಕುಶನ್ ಎಂಬಿತ್ಯಾದಿ ಹೆಸರುಗಳಿಂದಲೂ ಕರೆಯಲ್ಪಡುತ್ತಾರೆ. ಮಗುವಾಗಿದ್ದಾಗಿನಿಂದಲೂ ಅವನು ಇತರ ಮಕ್ಕಳಿಗಿಂತ ಭಿನ್ನ ಸ್ವಭಾವದವನಾಗಿದ್ದು ಅವನನ್ನು 'ಮಾರನ್' (ಇತರರಿಂದ ಬೇರೆಯಾದ) ಎಂದು ಕರೆಯಲಾಯ್ತು. ಮಕ್ಕಳು ಹುಟ್ಟುವ ಸಮಯದಲ್ಲಿ ಅವರ ಜಾಣ್ಮೆಯನ್ನು ಮಹತ್ವದ ಹವೆಯೊಂದು ಮುಸುಕಿರುತ್ತದೆ ಎಂದು ಹೇಳಲಾಗುತ್ತದೆ. ಆದರೆ ನಮ್ಮಾಳ್ವಾರ್ ವಿಷಯದಲ್ಲಿ ಅದು ಶಕ್ತಿಹೀನವಾಗಿತ್ತು. ಹಾಗಾಗಿ ಅವನು 'ಶಡಗೋಪ'– ಆ ಹವೆಯನ್ನು ಖಂಡಿಸಿ ಅದನ್ನು ನಿಷ್ಕ್ರಿಯಗೊಳಿಸಿದವನು ಎಂದು ಕರೆಯಲ್ಪಟ್ಟ. ಮಗು ಅಳಲಿಲ್ಲ. ಕೈಕಾಲುಗಳನ್ನಾಡಿಸಲಿಲ್ಲ. ಅಥವಾ ಆಹಾರದ ಆವಶ್ಯಕತೆಯೂ ಅದಕ್ಕಿರಲಿಲ್ಲ. ಆದರೂ ಅದು ದೇದೀಪ್ಯಮಾನವಾಗಿ ಕಾಣುತ್ತಿತ್ತು. ದಿಗ್ಭ್ರಮೆಗೊಂಡ ತಂದೆತಾಯಿಗಳು ಸ್ಥಳೀಯ ದೇವಾಲಯಕ್ಕೆ ಮಗುವನ್ನು ಕೊಂಡೊಯ್ದು ಅಲ್ಲಿನ ಮುಖ್ಯ ದೇವತೆಯನ್ನು ಪೂಜಿಸಿ ಹೊರಬಂದು ಹುಣಸೆಯ ಮರವೊಂದರ ಕೆಳಗಿದ್ದ ಶ್ರೇಷ್ಠ ಹರಳುಗಳಿಂದ ಕೂಡಿದ ಚಿನ್ನದ ತೊಟ್ಟಿಲಲ್ಲಿ ಬಿಟ್ಟು ಬಂದರು. ಆ ಮರವನ್ನೇ ಹೋಲುವಂಥ ಹುಣಸೆಯ ಮರವೊಂದನ್ನು ಇಂದಿಗೂ ಅಲ್ಲಿ ಕಾಣಬಹುದೆಂಬ ವಿಷಯ ಪರಂಪರಾಗತವಾಗಿ ರೂಢಿಗೆ ಬಂದಿದೆ.

ನಮ್ಮಾಳ್ವಾರ್ ಹದಿನಾರು ವರ್ಷಗಳವರೆಗೂ ಸಮಾಧಿ ಸ್ಥಿತಿಯಲ್ಲಿದ್ದರು. ಅವರು ಕಣ್ಣು ತೆರೆಯಲಿಲ್ಲ ಅಥವಾ ಯಾರೊಂದಿಗೂ ಮಾತಾಡಲಿಲ್ಲ. ಆದರೆ ಕಾಲಕ್ರಮದಲ್ಲಿ ನಮ್ಮಾಳ್ವಾರರ ಗಮನಕ್ಕೆ ಅರ್ಹನಾದಂಥ ವ್ಯಕ್ತಿಯೊಬ್ಬ ಬಂದ.

ಈತ ಉತ್ತರಕ್ಕೆ ಯಾತ್ರೆ ಹೋಗಿದ್ದ ಮಧುರ ಕವಿ. ಅಯೋಧ್ಯೆಯಲ್ಲಿರುವಾಗ ಒಂದು ರಾತ್ರಿ ಮಧುರ ಕವಿ ದಕ್ಷಿಣದಲ್ಲಿ ಪ್ರಕಾಶಮಾನವಾದ ಬೆಳಕೊಂದನ್ನು ಕಂಡ. ಆ ಬೆಳಕಿನ ದಿಕ್ಕಿನಲ್ಲೇ ಪಯಣಿಸುತ್ತ, ಅಂತಿಮವಾಗಿ ನಮ್ಮಾಳ್ವಾರರು ಸಮಾಧಿಸ್ಥಿತಿಯಲ್ಲಿದ್ದ ತಿರುಕ್ಕುರುಂ ಗೂರಿನ ಹುಣಸೆಮರವನ್ನು ತಲುಪಿದ.

ಅವರು ಎಚ್ಚರವಾಗಿದ್ದಾರೋ ಇಲ್ಲವೋ ಎಂಬುದನ್ನು ಮಧುರಕವಿ ತಿಳಿಯಬೇಕಿತ್ತು. ಆದ್ದರಿಂದ ಪ್ರತಿಕ್ರಿಯೆಯನ್ನು ವೀಕ್ಷಿಸಲು ಆತ ಕಲ್ಲೊಂದನ್ನೆಸೆದ.

ಸದ್ದು ಕೇಳಿ ನಮ್ಮಾಳ್ವಾರ್ ಕಣ್ತೆರೆದರು. ನಮ್ಮಾಳ್ವಾರ್ ಮಾತಾಡಬಲ್ಲರೇ ಎಂದು ಮಧುರ ಕವಿ ತಿಳಿಯಬೇಕಿತ್ತು. ಹಾಗಾಗಿ ಆತ "ಪರಿಮಿತವಾಗಿರುವುದು (ಜ್ಞಾನದಲ್ಲಿ) ದೇಹದಲ್ಲಿ ಸಂಯೋಜಿತವಾದಲ್ಲಿ ಅದೆಲ್ಲ ನೆಲಸುತ್ತದೆ ಮತ್ತು ಅದು ಏನನ್ನು ಅನುಭವಿಸುತ್ತದೆ?" ಎಂದು ಪ್ರಶ್ನಿಸಿದ. ತಕ್ಷಣವೇ ನೇರವಾದ ಉತ್ತರ ಬಂತು. "ಅದು ಅಲ್ಲೇ ವಾಸಿಸುತ್ತದೆ ಮತ್ತು ಅದನ್ನೇ ಅನುಭವಿಸುತ್ತದೆ." ನಮ್ಮಾಳ್ವಾರರ ಹಿರಿಮೆಯನ್ನು ಅರ್ಥಮಾಡಿಕೊಂಡ ಮಧುರ ಕವಿ ತನ್ನನ್ನು ಶಿಷ್ಯನಾಗಿ ಸ್ವೀಕರಿಸುವಂತೆ ಬೇಡಿದ. ಅವನ ಕೋರಿಕೆಯನ್ನು ನೆರವೇರಿಸಲು ನಮ್ಮಾಳ್ವಾರ್ ಸಂತೋಷದಿಂದ ಒಪ್ಪಿದರು.

ಗರುಡನನ್ನೇರಿದ ಭಗವಂತ ತನ್ನ ಮಡದಿಯೊಡಗೂಡಿ ನಮ್ಮಾಳ್ವಾರರೆದುರು ಪ್ರತ್ಯಕ್ಷನಾದ. ಪ್ರಾಪಂಚಿಕತೆಯ ಸೋಂಕೂ ಇಲ್ಲದೆ ನಮ್ಮಾಳ್ವಾರ್ ತಮ್ಮ ಮೂವತ್ತೈದನೆ ವರ್ಷದಲ್ಲಿ ಈ ಪ್ರಪಂಚವನ್ನು ಬಿಡುವವರೆಗೂ ಭಗವಂತನ ಇರುವಿಕೆಯ ಸುಖವನ್ನು ನಿರಂತರವಾಗಿ ಅನುಭವಿಸಿದರು. ನಮ್ಮಾಳ್ವಾರರ ಜೀವನ ಈ ವಿಷಯದಲ್ಲಿ ಅದ್ವಿತೀಯವಾದದ್ದು. 'ನಮ್ಮ ಹುಟ್ಟು ಕೇವಲ ಒಂದು ನಿದ್ರೆ ಹಾಗೂ ಒಂದು ಮರೆವು. ಕಾರಾಗೃಹದ ನೆರಳು ಬೆಳೆಯುತ್ತಿರುವ ಹುಡುಗನನ್ನು ಮುಸುಕುತ್ತಿದೆ' ಎಂದು ಅವನ ಬಗ್ಗೆ ಹೇಳುವಂತಿಲ್ಲ. ಬದಲಿಗೆ ಅವನು ಬೆಳಕನ್ನು ನೋಡುತ್ತಾನೆ. ಯಾವಾಗ ಅದು ಹರಿಯುತ್ತದೋ ಆ ಬೆಳಕನ್ನು ತನ್ನ ಸಂತೋಷದಲ್ಲಿ ಕಾಣುತ್ತಾನೆ.

ಮತ್ತು ಭವ್ಯವಾದ ಕಾಣ್ಕೆ
ಅವನ ಹಾದಿಯಲ್ಲಿದೆ."

ನಮ್ಮಾಳ್ವಾರರ ಕೃತಿಗಳು, ಅವರ ಆಳವಾದ ಧಾರ್ಮಿಕ ಅನುಭವಗಳಿಗೆ ಸಾಕ್ಷಿಯಾಗಿವೆ. ಆಳ್ವಾರರ ಪವಿತ್ರ ಕವನಗಳ ಸಂಗ್ರಹವಾದ ದಿವ್ಯ ಪ್ರಬಂಧಮ್‌ನಲ್ಲಿ ನಾಲ್ಕು ನಮ್ಮಾಳ್ವಾರರವು. ಅವುಗಳು (೧) ತಿರುವಿರುತ್ತಂ (೨) ತಿರುವಾಶಿರಿಯಂ (೩) ಪೆರಿಯ ತಿರುವಂಡಾಡಿ ಮತ್ತು (೪) ತಿರುವಾಯ್‌ಮೊಳಿ. ಇವುಗಳು ಅನುಕ್ರಮವಾಗಿ ನಾಲ್ಕು ವೇದಗಳ ಸಾರಸಂ ಗ್ರಹವೆಂದು ಪರಿಗಣಿಸಲ್ಪಟ್ಟಿವೆ.

ನಮ್ಮಾಳ್ವಾರರ ಬಗ್ಗೆ ಮಧುರ ಕವಿಯ ಭಕ್ತಿ ಸಂಪೂರ್ಣ ಹಾಗೂ ನಿರ್ವಿವಾದವಾಗಿತ್ತು. ನಮ್ಮಾಳ್ವಾರರನ್ನು ಸ್ವಯಂ ಭಗವಂತನೇ ಎಂದು ಪರಿಗಣಿಸಿದ್ದ. "ನಮ್ಮಾಳ್ವಾರರ ಹೊರತು ನನಗೆ ಬೇರೊಬ್ಬ ಭಗವಂತನ ಅರಿವಿಲ್ಲ" ಎಂದಿದ್ದಾನೆ.

ದಿವ್ಯ ಪ್ರಬಂಧಮ್‌ನಲ್ಲಿ ಆತನ ಒಂದು ಒಂದು ಕೃತಿ ಇದೆ. ಅದರಲ್ಲಿ ಮಧುರಕವಿಗೆ ನಮ್ಮಾಳ್ವಾರರ ಬಗ್ಗೆ ಇದ್ದ ತೀವ್ರ ಭಕ್ತಿಯ ನಾಡಿ ಮಿಡಿತವಿದೆ.

ಇದೇ ರೀತಿ ಹಿರಿಯ ಆಚಾರ್ಯರಾದ ಶ್ರೀ ರಾಮಾನುಜರ ತತ್ವಜ್ಞಾನ ನಮ್ಮಾಳ್ವಾರರ ಕೃತಿಗಳಿಂದ ಸ್ಫೂರ್ತಿಗೊಂಡಿದೆ. ದೇಹದೊಳಗಿನ ಆತ್ಮದಂತೆ ಅಗೋಚರವಾಗುಳಿದ ಎಲ್ಲದರಲ್ಲೂ ಭಗವಂತ ಪರಿಪೂರ್ಣವಾಗಿ ವ್ಯಾಪಿಸಿದ್ದಾನೆಂದು

ನಮ್ಮಾಳ್ವಾರರ ಮಾತುಗಳಲ್ಲೇ ಬ್ರಹ್ಮಸೂತ್ರ ಹಾಗೂ ಭಗವದ್ಗೀತೆಯ ಬಗ್ಗೆ ಅರ್ಥವಿವರಣೆ ನೀಡುತ್ತಾರೆ ರಾಮಾನುಜಾಚಾರ್ಯರು. ಹಾಗಾಗಿ ನಮ್ಮಾಳ್ವಾರ್ ವೈಷ್ಣವ ಕುಲಪತಿ ಎಂದು ಪರಿಗಣಿಸಲ್ಪಟ್ಟು ಅವರ ಕೃತಿಗಳು ತಮಿಳು ವೇದಗಳೆಂದು ಸಾರಲ್ಪಟ್ಟಿವೆ.

ಒಮ್ಮೆ ರಾಮಾನುಜರು ನಮ್ಮಾಳ್ವಾರರ ಹುಟ್ಟೂರಿಗೆ ಭೇಟಿಕೊಟ್ಟಾಗ ಅಗಸನೊಬ್ಬ ತನ್ನ ಮಕ್ಕಳನ್ನು ನಮ್ಮಾಳ್ವಾರರ ಬೇರೆ ಬೇರೆ ಹೆಸರುಗಳಲ್ಲಿ ಕರೆಯುತ್ತಿದ್ದುದನ್ನು ಕೇಳಿದರು. ರಾಮಾನುಜ ಗೃಹಸ್ಥನಾಗಿ ನಮ್ಮಾಳ್ವಾರರ ಹೆಸರಿಟ್ಟು ಕರೆಯಬಹುದಾದ ಮಕ್ಕಳನ್ನು ಪಡೆಯುವ ಅವಕಾಶ ಹೊಂದುವ ಬದಲು ಸನ್ಯಾಸಿಯಾದ ಬಗ್ಗೆ ಪಶ್ಚಾತ್ತಾಪಪಟ್ಟರು ಎಂದೊಂದು ಕಥೆ ಇದೆ.

ಶ್ಲೋಕಗಳಲ್ಲಡಗಿರುವ ಸಂಪತ್ತನ್ನು ನಮಗೆ ತೆರೆದು ತೋರಿಸುವ ತಿರುವಾಯ್‌ಮೊಳಿಯ ಮೇಲೆ ಐದು ಪಾಂಡಿತ್ಯಪೂರ್ಣ ವ್ಯಾಖ್ಯಾನಗಳಿವೆ. ಈ ತಿರುವಾಯ್‌ಮೊಳಿಯ ಸಹಾಯದಿಂದಲೇ ಆತ ಇದುವರೆಗೂ ತನ್ನರಿವಿಗೆ ಬಾರದ ವೇದಗಳ ಆ ಭಾಗವನ್ನು ಅರ್ಥ ಮಾಡಿಕೊಳ್ಳಲು ತನಗೆ ಸಾಧ್ಯವಾಯಿತೆಂದೂ ಹಾಗೂ ವೈಷ್ಣವ ಆಚಾರ್ಯ ಶ್ರೀ ವೇದಾಂತ ದೇಶಿಕರ ಹೇಳಿಕೆಯ ಪ್ರಾಮುಖ್ಯತೆವನ್ನು ಅರ್ಥಮಾಡಿಕೊಳ್ಳಲು ನಮಗೆ ಸಾಧ್ಯವಾಯ್ತೆಂದೂ ತಿಳಿದು ಬರುತ್ತದೆ.

ತಿರುವಾಯ್‌ಮೊಳಿಯ ವಿಷಯ ಮುಂದಿನ ಐದು ಭಾಗಗಳಿಗೆ ಸಂಬಂಧಪಟ್ಟುದಾಗಿದೆ : (೧) ಭಗವಂತ (೨) ಆತ್ಮ (೩) ಮೋಕ್ಷ ಪಡೆಯುವ ಸಾಧನಗಳು (೪) ಮೋಕ್ಷದ ಹಾದಿಯಲ್ಲಿನ ಅಡಚಣೆಗಳು ಮತ್ತು (೫) ಬಿಡುಗಡೆಯ ಸ್ಥಿತಿ.

ಭಗವಂತನಲ್ಲಿ ಸಂಪೂರ್ಣ ಶರಣಾಗತಿಯೇ ತಿರುವಾಯ್‌ಮೊಳಿಯ ಪ್ರಮುಖ ಸಂದೇಶವಾಗಿದೆ. ಸಂಪೂರ್ಣ ಶರಣಾಗತಿಯ ಈ ಹಾದಿಯನ್ನು ಪ್ರಪತ್ತಿ ಎಂದು ಕರೆಯಲಾಗುತ್ತದೆ. ಇದು 'ನಾನು', 'ನನ್ನದು' ಎಂಬ ಎಲ್ಲ ಮಮಕಾರವನ್ನೂ ಬಿಟ್ಟುಕೊಡುವ ಎಲ್ಲ ವಿಷಯಸುಖಗಳನ್ನು ಪರಿತ್ಯಜಿಸಿ ಭಗವಂತನ ಪಾದಗಳಲ್ಲಿ ಆಶ್ರಯ ಬೇಡುತ್ತ ಸದಾ ಅವನ ಪ್ರೀತಿ ಗಳಿಸಿಕೊಳ್ಳಲು ಅವನ ಬಗೆಗೇ ಯೋಚಿಸುವುದನ್ನೊಳಗೊಂಡಿದೆ. ವಾಸ್ತವಿಕವಾಗಿ ಸುಳ್ಳು ವ್ಯಾಮೋಹ ಅಂತ್ಯಗೊಂಡ ಕ್ಷಣದಲ್ಲೇ ಮುಕ್ತಿ ನಿದ್ರಿಸುತ್ತದೆ. ಸಂಕ್ಷಿಪ್ತವಾಗಿ ಪ್ರಪತ್ತಿ ಎಂದರೆ 'ನಾನು', 'ನನ್ನದು' ಎಂಬುದರಿಂದ ವಿಮುಕ್ತಿ ಹಾಗೂ ಭಗವಂತನೊಂದಿಗೆ ಮಮತೆಯ ಬಂಧನ. ಈ ಮಾರ್ಗ ಸರಳ ಸುಲಭ ಹಾಗೂ ಎಲ್ಲರಿಗೂ ಮುಕ್ತವಾದುದಾಗಿದೆ.

ನಮ್ಮಾಳ್ವಾರರ ಶ್ಲೋಕಗಳು ಸ್ವತಃ ಅವರು ಹೇಗೆ ಭಗವಂತನಲ್ಲಿ ಶರಣಾಗತಿಯ ಮಾರ್ಗವನ್ನನುಸರಿಸಿದರು ಎಂದು ತೋರಿಸುತ್ತವೆ. ಬಾರಿ ಬಾರಿಗೂ ಅವರ ಚಿಂತನೆ ದೇವಾಲಯಗಳಲ್ಲಿ ಪ್ರದರ್ಶನಗೊಳ್ಳುವ ದೇವರ ಅವತಾರಗಳ ಬಗೆಗಿನದಾಗಿದೆ. ಅವತಾರಗಳಲ್ಲಿ ಕೃಷ್ಣಾವತಾರ ಅವರಿಗೆ ಹೆಚ್ಚು ಪ್ರಿಯವಾದುದು.

ಈ ವಿಶೇಷ ಮೋಹಕ್ಕೆ ಅವರು ಕೊಡುವ ಕಾರಣವೆಂದರೆ ಕೃಷ್ಣ ಸ್ವತಃ ತಮ್ಮಲ್ಲಿ ವಾಸಿಸುತ್ತಾನೆ ಹಾಗೂ ತನ್ನ ಸೇವೆ ಮಾಡುವಂತೆ ಆಂತರಿಕವಾಗಿಯೇ ನಿರ್ದೇಶಿಸುತ್ತಾನೆ ಎನ್ನುವುದೇ ಆಗಿದೆ. ಈ ಆತ್ಮೀಯತೆಯ ಸಂಯೋಗ ಪ್ರೇಮಿಗಳೀರ್ವರ ನಡುವಣ ಹಾಗೂ ತಂದೆ, ತಾಯಿ ಮತ್ತು ಮಗುವಿನ ನಡುವಣ ಪ್ರೀತಿಯಾಗಿ ಹೊರಹೊಮ್ಮಿದೆ ಎಂದು ನಮ್ಮಾಳ್ವಾರರಿಂದ ವಿವರಿಸಲ್ಪಟ್ಟಿದೆ. ಭಗವಂತನೊಂದಿಗಿನ ಸಂಯೋಗದ ಭಾವನೆ ನಮ್ಮಾಳ್ವಾರರನ್ನು ಮೈಮರೆವು ಹಾಗೂ ಭಗವಂತನೊಂದಿಗಿನ ತಾದಾತ್ಮ್ಯದಲ್ಲಿ ಮುಳುಗಿಸುತ್ತದೆ. ಅಗಲುವಿಕೆಯ ಕಲ್ಪನೆ ತೀವ್ರ ಸಂತಾಪವನ್ನುಂಟುಮಾಡುತ್ತದೆ. ಆದರೆ ಮಾನವ ಪ್ರೀತಿಯನ್ನು ಚಿತ್ರಿಸುವ ಇಂದಿನ ಸಾಹಿತ್ಯ ಸ್ವರೂಪವನ್ನುಪಯೋಗಿಸಿ, ನಮ್ಮಾಳ್ವಾರ್ ಇತರ ತಮಿಳು ಮುಮುಕ್ಷುಗಳಂತೆ ಅವರನ್ನು ವಿಷಯಾಸಕ್ತಿಯಿಂದ ವಿಮೋಚನೆಗೊಳಿಸಿ ಔನ್ನತ್ಯಕ್ಕೇರಿಸುತ್ತಾರೆ.

ದೇವರೊಂದಿಗಿನ ಭಾವೈಕ್ಯ ಹಾಗೂ ಸಂಯೋಗದ ವಿಶೇಷಾಧಿಕಾರವನ್ನು ಕೇವಲ ಆತ್ಮದ ಸ್ವಂತ ಪ್ರಯತ್ನದಿಂದ ಸಂಪಾದಿಸಲಾಗುವುದಿಲ್ಲ. ಅದು ದೇವರಿಂದ ಅನುಗ್ರಹಿಸಲ್ಪಡುತ್ತದೆ. ಅವರ ಹೇಳಿಕೆಗಳು ಅವರ ಸ್ವಂತ ಧಾರ್ಮಿಕ ಅನುಭವಗಳ ತುಂಬು ಹರಿಯುವಿಕೆಯಾದರೂ ನಮ್ಮಾಳ್ವಾರ್ ಅವುಗಳನ್ನು ತಮ್ಮ ಸ್ವಂತ ಕೃತಿಗಳೆಂದು ಹಕ್ಕುಸಾಧಿಸಲಿಲ್ಲ. ಅವರು ದೇವರನ್ನೇ ನಿಜವಾದ ಕರ್ತೃವೆಂದು ಪರಿಗಣಿಸಿದರು. ಭಗವದನುಗ್ರಹದ ಧಾರೆಯನ್ನು ಸ್ವೀಕರಿಸಲು ತೆರೆದ ಮನದಿಂದಿರುವಂತೆ ಜೊತೆಯ ಕವಿಗಳನ್ನು ಆಹ್ವಾನಿಸುತ್ತಾ ಆ ರೀತಿ ಮಾಡಿದರೆ ಅವರಿಗೂ ತಮ್ಮಂಥದೇ ಅನುಭವಗಳಾಗುವುದೆಂಬ ಭರವಸೆ ನೀಡುತ್ತಾರೆ.

ಆಶ್ರಯಕ್ಕಾಗಿ ಶ್ರೀಮಂತರ ಗುಣಗಾನ ಮಾಡುವ ಅಭ್ಯಾಸವನ್ನವರು ನಿಷೇಧಿಸುತ್ತಾರೆ. ತಮ್ಮ ಜೀವನೋಪಾಯವನ್ನು ಗಳಿಸಲು ಶಾರೀರಿಕ ಶ್ರಮದ 'ಕಾಯಕ'ದ ಸಲಹೆ ನೀಡುತ್ತಾರೆ. ಹೃದಯವನ್ನು ಭಗವಂತನಿಗೆ ಸಂಪೂರ್ಣ ಅರ್ಪಣೆ ಮಾಡಿದ ಮೇಲೆ ಶರೀರವನ್ನು ಸುಸ್ಥಿತಿಯಲ್ಲಿಡಲು ಸಾಕಷ್ಟು ಗಳಿಸಬೇಕಾದಲ್ಲಿ ಕೈಗಳನ್ನು ಪ್ರಾಮಾಣಿಕ ಕೆಲಸಗಳಿಗಾಗಿ ಉಪಯೋಗಿಸಬೇಕು.

ತಿರುವಾಯ್‌ಮೊಳಿಯಲ್ಲಿ ಭಗವಂತನ ಕಲ್ಪನೆ ಅತ್ಯಂತ ಉದಾತ್ತವಾಗಿದೆ. ತಿರುವಾಯ್‌ಮೊಳಿಯ ಮೊದಲ ಸಾಲೇ ಭಗವಂತನ ಶ್ರೇಷ್ಠತೆಯ ಔನ್ನತ್ಯವನ್ನು ವರ್ಣಿಸುತ್ತದೆ. ಆದರೆ ಈ ಶ್ರೇಷ್ಠತೆಯ ಔನ್ನತ್ಯದ ವ್ಯಕ್ತಿ, ಜೀವಿಯ ಒಳಿತು ಕೆಡುಕುಗಳ ಬಗ್ಗೆ ತಾತ್ಸಾರ ಹೊಂದಿದ ಕೈಗೆಟುಕದ ಉನ್ನತ ಹಾಗೂ ಬಲಶಾಲಿ ವ್ಯಕ್ತಿಯಲ್ಲ. ಅಗೋಚರವಾದ ಆತ್ಮ ದೇಹವನ್ನು ವ್ಯಾಪಿಸಿ ಪ್ರಚೋದಿಸುವಂತೆ ಇದು ಎಲ್ಲ ವಸ್ತುಗಳಲ್ಲೂ ಅಡಗಿದ್ದು ಎಲ್ಲ ವಸ್ತುಗಳಲ್ಲೂ ವ್ಯಾಪಿಸಿದೆ. ಈ ಜೀವಿ ಆತ್ಮಗಳ ಬಗ್ಗೆ ಎಷ್ಟೊಂದು ಪ್ರೇಮಭರಿತವಾಗಿದೆ ಎಂಬುದಕ್ಕೆ ಉದಾಹರಣೆಗೆ ರಾಮಾವತಾರ.

ಮಾನವ ರೂಪ ತಳೆದು ಮಾನವ ಅನುಭವಿಸಬಹುದಾದ ಎಲ್ಲ ಸಂಕಟಗಳನ್ನೂ ರಾಮ ಅನುಭವಿಸುತ್ತಾನೆ.

"ರಾಮನು ಭೂಮಿಗೆ ಉಪದ್ರವಿಗಳಾಗಿದ್ದವರನ್ನು ಹುಡುಕಿ ನಾಶಮಾಡಿ ಪ್ರಪಂಚವನ್ನು ಉದ್ಧರಿಸಿ ರಕ್ಷಿಸಿದ. ಇವನು ಪ್ರಪಂಚದಲ್ಲಿ ಹೇಗೆ ಹುಟ್ಟಿದ ಹಾಗೂ ಮನುಷ್ಯ ಜೀವಿಗಳ ಸಲುವಾಗಿ ಹೇಳಲಾಗದಷ್ಟು ಸಂಕಟಗಳನ್ನನುಭವಿಸಿದ ಎಂದು ಕೇಳಿದ ಮೇಲೆ ಅವರು ಆ ಭಗವಂತನ ಭಕ್ತರಾಗದಿದ್ದಲ್ಲಿ ಈ ಪ್ರಪಂಚದಲ್ಲಿ ಹುಟ್ಟಿದ ವ್ಯಕ್ತಿಗಳಿಗೆ ಬೆಲೆಯುಂಟೆ?"

ಒಮ್ಮೆ ಕೃಷ್ಣಾವತಾರದ ಬಗ್ಗೆ ಚಿಂತಿಸಿ, ಭಗವಂತ ಮಗುವಾಗಿದ್ದಾಗ ಹೇಗೆ ಕಂಬಕ್ಕೆ ಕಟ್ಟಿಹಾಕಲ್ಪಟ್ಟ , ಆತ ನಮಗೆಷ್ಟು ಸುಲಭಸಾಧ್ಯ ಎಂಬ ವಿಷಯದ ಬಗ್ಗೆ ನಮ್ಮಾಳ್ವಾರ್ ಎಷ್ಟು ವಿಚಲಿತರಾದರೆಂದರೆ ಅನೇಕ ದಿನಗಳವರೆಗೆ ಅವರು ಸಮಾಧಿ ಸ್ಥಿತಿಯಲ್ಲೇ ಉಳಿದರು ಎಂದು ಹೇಳಲಾಗುತ್ತದೆ.

ದೈವೀ ಅವತಾರದ ಉದ್ದೇಶವೇನು? ಅದು ಆತ್ಮಗಳನ್ನು ಅಪವಿತ್ರ ಶರೀರಾಕಾರ ಹೊಂದುವುದರಿಂದ ಉದ್ಧರಿಸಿ, ಅವರನ್ನು ಕಾಪಾಡಲು ಭಗವಂತ ಅನೇಕ ರೂಪಗಳಲ್ಲಿ ಜನ್ಮವೆತ್ತಿದ. ಈ ಅಪವಿತ್ರ ಶರೀರಾಕಾರ ಹೇಗೆ ಉಂಟಾಗುತ್ತದೆ? ಇದು ತಪ್ಪು ತಿಳಿವಳಿಕೆ ಹಾಗೂ ಕೆಟ್ಟ ನಡತೆಗಳಿಂದ. ಈ ಉದ್ಧಾರಕ ಪ್ರೀತಿಗೆ ಒತ್ತುಕೊಡುವುದೇ ಎಲ್ಲ ಆಸ್ತಿಕ ನಂಬಿಕೆಯ ಕೇಂದ್ರ – ಅತ್ಯಂತ ಔನ್ನತ್ಯಕ್ಕೇರಿದವರು ಜೀವಂತ ವಸ್ತುಗಳ ಬಗ್ಗೆ ಚಿಂತಿಸುತ್ತಾರೆ. ತಮ್ಮ ಆ ಹಿರಿಮೆಗೇ ಸೀಮಿತವಾಗದೆ, ಅತ್ಯಂತ ಹೀನರಲ್ಲಿ ಹೀನರಾದವರ ನೆರವಿಗಾಗಿ ಭೂಮಿಗಿಳಿದು ಬರುತ್ತಾರೆ.

ಸಾಮಾನ್ಯವಾಗಿ ಆಸ್ತಿಕತೆಯಲ್ಲಿ ಕಂಡುಬರುವ ಅನಂತತೆಯ ಕಲ್ಪನೆ ನಮ್ಮಾಳ್ವಾರರ ಕೃತಿಗಳಲ್ಲಿ ಅತ್ಯಂತ ಸ್ಪಷ್ಟ ರೂಪದಲ್ಲಿ ಪ್ರಕಟಗೊಂಡಿದೆ. ತರ್ಕಶಾಸ್ತ್ರಜ್ಞನ ಕಲ್ಪನೆಗಿಂತ ಇದು ಭಿನ್ನವಾಗಿದೆ. ಮತ್ತೇನೂ ಆಗಿರಲು ಸಾಧ್ಯವಿಲ್ಲ. ದೇವರ ಹೊರತಾಗಿ ಆತ್ಮದ ಅಸ್ತಿತ್ವವನ್ನು ಒಪ್ಪುವುದೆಂದರೆ ಅನಂತತೆಯನ್ನು ಮಿತಿಗೊಳಿಸಿದಂತೆ ಎಂದು ತರ್ಕಶಾಸ್ತ್ರಜ್ಞನಿಗೆ ನಿಶ್ಚಿತವಾಗಿರುತ್ತದೆ. ಆದರೆ ಮುಮುಕ್ಷುಗಳ ಅನಂತತೆ ತರ್ಕಶಾಸ್ತ್ರದ ಅನಂತತೆಯಾಗದೆ ಅದು ಪ್ರೀತಿಯ ಅನಂತತೆಯಾಗುತ್ತದೆ. ಇದು ವಿರೋಧಾಭಾಸವೆನಿಸಿದರೂ ಈ ಅನಂತತೆಗೆ 'ಬೇರೆ' ಅಥವಾ ಬೇರೆಯವರ ಅನಂತತೆಯ ಮೊತ್ತದ ಅಗತ್ಯವಿದೆ. ಇದರ ಹೊರತು ಪ್ರೀತಿ ಅರ್ಥಹೀನ. "ನನ್ನ ಹೃದಯ ಹಾಗೂ ಆತ್ಮಗಳನ್ನು ಆವರಿಸಿ ಆತ ನಾನು ಪರಿಪೂರ್ಣನಾಗುತ್ತೇನೆಂದು ತಿಳಿಯುತ್ತಾನೆ" ಎಂದು ನಮ್ಮಾಳ್ವಾರ್ ಹಾಡುತ್ತಾರೆ. ಪರಿಣಾಮವೆಂದರೆ ಭಗವಂತನ ಆತ್ಮದ ಹುಡುಕಾಟದಲ್ಲಿ ಬಂದು, ಅದು ಸಿಕ್ಕಿದಾಗ ತಾನು ಪೂರ್ಣ ಅಥವಾ ಪರಿಪೂರ್ಣನಾಗುತ್ತಾನೆ. ಆಳ್ವಾರರಲ್ಲೊಬ್ಬರು ಇದನ್ನು ಸ್ಪಷ್ಟ ಹಾಗೂ ನೇರ ರೀತಿಯಲ್ಲಿ ಹೇಳಿದ್ದಾರೆ.

ನಿಜಕ್ಕೂ ನಾನಿನ್ನ ಹೊರತು ಇರಲಾರೆ,
ನೀ ಕೂಡ ನನ್ನ ಹೊರತು ಇರಲಾರೆ,

ವಾದ ನಮ್ಮನ್ನು ಕೊಂಡೊಯ್ದಲ್ಲಿಗೆ ಅದರ ತರ್ಕಬದ್ಧ ಉಪಸಂಹಾರವನ್ನು ಅನುಸರಿಸಿ, ನಾವು ಧೈರ್ಯದ ಬಗ್ಗೆ ಮಾತಾಡುತ್ತೇವೆ. ಪ್ರೀತಿಗೂ ಸಹ ಹೆಚ್ಚಿನ ಧೈರ್ಯ ಬೇಕು. ಕಾರಣ ಅದು 'ಬೇರೊಬ್ಬ'ನ ಬಗ್ಗೆ ಹೆದರುವುದಿಲ್ಲ. "ತರ್ಕ ಶಾಸ್ತ್ರಕ್ಕಿಂತ ಕಡಿಮೆ ಭವ್ಯತೆ ಹೊಂದಿರದ ಪ್ರೀತಿಗೆ ತನ್ನದೇ ಆದ ಜಯವಿದೆ" ಎಂದು ಬೇಕಾದರೆ ನಾವು ಸೇರಿಸಿಕೊಳ್ಳಬಹುದು.

ಪ್ರೀತಿಯ ಕಣ್ಣಿಗೆ, ತನ್ನ ಪ್ರೀತಿಪಾತ್ರರು ಸುಂದರವಾಗಿ ಕಾಣುತ್ತಾರೆ. ಭಗವಂತ ಸುಂದರನೆಂಬ ಕಲ್ಪನೆಯನ್ನು ನಮ್ಮಾಳ್ವಾರರ ಕೃತಿಗಳಲ್ಲಿ ಮೇಲಿಂದ ಮೇಲೆ ಕಾಣುತ್ತೇವೆ.

ಪ್ರಪಂಚದಲ್ಲಿ ಎಷ್ಟೊಂದು ಸಂಕಟವಿರುವಾಗ ಆತ್ಮಗಳ ಬಗ್ಗೆ, ದೇವರ ಪ್ರೀತಿಯ ಬಗ್ಗೆ ಮಾತಾಡುವುದು ಅರ್ಥಪೂರ್ಣವಾಗಿದೆಯೆ? ನಮ್ಮಾಳ್ವಾರರ ನುಡಿಗಳೊಂದರಲ್ಲಿ ನಾವು ಈ ಕೆಳಗಿನ ಪದಗಳನ್ನು ಕಾಣುತ್ತೇವೆ: "ಯಾರು ನಿನ್ನ ಬಳಿ ಸೆಳೆಯಲ್ಪಡುವುದಿಲ್ಲವೋ ಅವರು ಮುಗುಳ್ನಗುತ್ತಾರೆ (ಸಂತೃಪ್ತಿಯಿಂದ) : ಯಾರು ನಿನ್ನ ಸಮೀಪವಿರುತ್ತಾರೋ ಅವರು ವೇದನೆಯಿಂದ ಕೊರಗುತ್ತಾರೆ." ಹಿಂದಿನ ಕರ್ಮದ ಪ್ರಕಾರ, ಸಂಕಟಗಳು ಆ ಕರ್ಮಕ್ಕೆ ಪ್ರಾಯಶ್ಚಿತ್ತವಾಗಿರುವುದರಿಂದ ಅವು ತೊಂದರೆಗಳೇನಲ್ಲ. ದೇವರ ಪ್ರೀತಿ ಹಾಗೂ ಅನುಗ್ರಹಕ್ಕಿಂತ ಇದು ಕರ್ಮವನ್ನು ಹೆಚ್ಚು ಸಾಮರ್ಥ್ಯಶಾಲಿಯಾಗಿ ಮಾಡುವಂತೆ ಕಾಣುತ್ತದೆ ಎನ್ನುವುದು ಈ ಒಗಟಿಗೆ ಉತ್ತರವಾಗಿರಬಹುದು. ಆದರೆ ತಿರುವಾಯ್‌ಮೊಳಿ ಓದಿದ ಯಾರೇ ಆದರೂ (ಇನ್ನಿತರ ಯಾವುದೇ ಭಕ್ತಿಪೂರಿತ ಗ್ರಂಥಗಳನ್ನೋದಿದಾಗ) ದೇವರ ಅನುಗ್ರಹದಿಂದ ಕರ್ಮ ಬೇರು ಸಹಿತ ಕಳೆದಿರುತ್ತದೆ ಎಂಬ ಸ್ಪಷ್ಟ ಹೇಳಿಕೆಯನ್ನು ಕಾಣಬಹುದು. "ಹಿಂದಿನ ಕರ್ಮದ ಬೇರು ಸಂಪೂರ್ಣವಾಗಿ ಕೀಳಲ್ಪಟ್ಟಿದೆ. ದೇವರ ದಯೆಯಿಂದ ಇದನ್ನು ಮಾಡಲು ಸಾಧ್ಯವಾಗುವುದಾದಲ್ಲಿ ನನಗೆ ಅಸಾಧ್ಯವಾದುದೇನಾದರೂ ಇದೆಯೆ?"

ಭಗವಂತನ ಮಂಗಳಕರ ಗುಣಗಳ ಅರಿವಿನಲ್ಲಿ ಮುಳುಗಿದವನ ಶರೀರ, ಚಿತ್ತ ಅಥವಾ ಆತ್ಮದ ಖಾಯಿಲೆಗಳು ಗುಣವಾಗುತ್ತವೆ. ಆಳ್ವಾರರೂ ಇದೇ ದಾರಿಯನ್ನನುಸರಿಸಿದರು ಹಾಗೂ ಭವಿಷ್ಯದ ತಲೆಮಾರಿನವರೂ ಇದನ್ನೇ ಅನುಸರಿಸಬೇಕೆಂದು ಇಚ್ಛಿಸಿದರು. ಮತ್ತೊಮ್ಮೆ ಪುನರುಚ್ಚರಿಸಬೇಕೆಂದರೆ ಆಳ್ವಾರ್ ಪದಕ್ಕೆ ಭಗವಂತನ ಅಪಾರ ಮಂಗಳಕರ ಗುಣಗಳ ಅರಿವಿನಲ್ಲಿ ಮುಳುಗಿದವನು ಎಂದರ್ಥ. ಶಾರೀರಿಕ ಖಾಯಿಲೆಗಳನ್ನು ಅಥವಾ ಅಂಗವಿಕಲತೆಯನ್ನು ಗುಣಪಡಿಸುವ ಪವಾಡವನ್ನು ಪ್ರಪಂಚದಲ್ಲಿ ಹೆಚ್ಚಿನ ಸಂತೋಷದಿಂದ ಸ್ವಾಗತಿಸಲಾಗುತ್ತದೆ. ಇನ್ನೂ ಹೆಚ್ಚು ಸೂಕ್ತ ವೆನಿಸಿದ ಆತ್ಮದ ಖಾಯಿಲೆ ಹಾಗೂ ಅಂಗವಿಕಲತೆಯನ್ನು ಅನಂತ

ಮಂಗಳಕರ ಗುಣಗಳನ್ನು ಹೊಂದಿದ ಪರಮಾತ್ಮನ ಪೂಜೆಯೊಂದಿಗೆ ನಿವಾರಿಸಿಕೊಳ್ಳಬಹುದೆಂದು ಆಳ್ವಾರರು ನಮಗೆ ಬೋಧಿಸುತ್ತಾರೆ. ನಾವಿದನ್ನು ನಿರ್ದಿಷ್ಟ ಆತ್ಮಚಿಕಿತ್ಸೆ ಎಂದು ಕರೆಯಬಹುದು.

"ತಾವರೆಯ ಚರಣಗಳನ್ನು ನಾನು ಅವುಗಳನ್ನು ನೋಡುತ್ತಿದ್ದಂತೆಯೇ ಎಲ್ಲ ಕರ್ಮಗಳೂ ಕರಗಿ ಸಂಪೂರ್ಣ ನಾಶವಾದವು" ಎಂದು ನಮ್ಮಾಳ್ವಾರ್ ಹಾಡುತ್ತಾರೆ.

"ನಾನವನ ಚರಣಗಳನ್ನು ಗಟ್ಟಿಯಾಗಿ ಹಿಡಿದೆ. ಪಾಪದಿಂದ ಕೂಡಿದ ಹುಟ್ಟಿನಿಂದ ಬಿಡುಗಡೆ ಹೊಂದಿದೆ. ಇನ್ನು ಹೆಚ್ಚಿನ ರೋಗಗಳು ನನ್ನನ್ನು ಕಾಡಲಾರವು" ಎಂದೂ ಮತ್ತೆ ಹಾಡುತ್ತಾರೆ.

ನಮ್ಮಾಳ್ವಾರರು ಸರ್ವಶಕ್ತನನ್ನು ವಿಷ್ಣುವೆಂದು ಪೂಜಿಸುತ್ತಾರೆ. ಆದರೆ ಇನ್ನಿತರ ಹೆಸರಿನಲ್ಲಿ ಅವನನ್ನು ಪೂಜಿಸುವವರ ಬಗ್ಗೆ ಸಿಟ್ಟಿಗೇಳುವುದಿಲ್ಲ. ಎಲ್ಲ ಪ್ರಾಮಾಣಿಕ ಪೂಜೆಯೂ ಆ ಭಗವಂತನದೇ ಎಂದವರು ಖಚಿತವಾಗಿ ತಿಳಿದಿದ್ದಾರೆ. ಪ್ರತಿಯೊಬ್ಬನೂ ತನ್ನ ಸಾಮರ್ಥ್ಯಕ್ಕೆ ತಕ್ಕಂತೆ, ತನ್ನ ಕಲ್ಪನೆಗೆ ತಕ್ಕಂತೆ ಆ ಸರ್ವಶಕ್ತನನ್ನು ಪೂಜಿಸುತ್ತಾನೆ. ಹಾಗಾಗಿ ಪೂಜೆಯ ಗುರಿಯಲ್ಲಿ ಯಾವುದೇ ನ್ಯೂನತೆ ಅಥವಾ ಕೊರತೆಗಳಿಲ್ಲ. ಬೇರೊಂದು ರೀತಿಯಲ್ಲಿ ಹೇಳುವುದಾದರೆ : ಪೂಜೆ ಮನಃಪೂರ್ವಕವಾಗಿದ್ದರೆ ಅದು ಆ ಭಗವಂತನನ್ನು ತಲುಪುತ್ತದೆ" ಎನ್ನುವುದೇ ಅವರ ಸಂದೇಶ.

ಕಲಿಯುಗವನ್ನು ಕೆಡುಕಿಗೇ ಮೀಸಲಾದ ಕಾಲವೆಂದು ದೂಷಿಸುವುದು ಸಾಮಾನ್ಯ. ನಿಷ್ಠೆ ಹಾಗೂ ಒಟ್ಟಾಗಿ ಪೂಜಿಸುವುದೇ ಇದಕ್ಕೆ ನಮ್ಮಾಳ್ವಾರರ ಪರಿಹಾರ. ನೀವು ನಿಷ್ಠೆಯಿಂದ, ಎಲ್ಲರೂ ಒಟ್ಟಾಗಿ ಪೂಜಿಸಿದಲ್ಲಿ ಕಲಿಯುಗ ಇರುವುದಿಲ್ಲ. ಇದು ಅನುಷ್ಠಾನಕ್ಕೆ ತರಬಹುದಾದ ಶ್ರೇಷ್ಠ ಸಲಹೆ. ನಾವೆಲ್ಲರೂ ಆ ಅನಂತ ಮಂಗಳಕರ ಸರ್ವಶಕ್ತನನ್ನು ಪೂಜಿಸಿದಲ್ಲಿ ದುಷ್ಟತನ ಇರಲು ಹೇಗೆ ಸಾಧ್ಯ? ಬೆಳಕು ಒಳಬಂದಲ್ಲಿ ಕತ್ತಲೆ ಇರುವುದು ಹೇಗೆ ಸಾಧ್ಯ? ನಾವು ಕತ್ತಲೆಯಿಂದ ಸುತ್ತುವರಿಯಲ್ಪಟ್ಟಾಗ ಕತ್ತಲನ್ನು ದೂಷಿಸಿ ಫಲವಿಲ್ಲ. ನಾವು ಬೆಳಕನ್ನು ಒಳಗೆ ಬರಮಾಡಿಕೊಳ್ಳೋಣ. ಕತ್ತಲೆ ತನ್ನಷ್ಟಕ್ಕೆ ತಾನೇ ಮರೆಯಾಗುವುದು. ಹಾಗೆಯೇ ಸರ್ವಶಕ್ತನನ್ನು ಪೂಜಿಸುವುದೇ ದುಷ್ಟತನಕ್ಕೆ ಪರಿಹಾರ ಎಂದು ಹೇಳುತ್ತಾರೆ ನಮ್ಮಾಳ್ವಾರ್.

ಪ್ರಪಂಚದ ಕೆಡುಕಿಗೆ ಪ್ರೀತಿಯೇ ಉತ್ತಮ ಪರಿಹಾರ.

"ವಿಷಯದ ಬೇರು ಬಹಳ ಸರಳ ಹಾಗೂ ಹಳೆಯ ಮಾದರಿಯದು. ಅದೆಷ್ಟು ಸರಳವೆಂದರೆ ನನಗದನ್ನು ಹೇಳಲು ಸಂಕೋಚವೆನಿಸುತ್ತಿದೆ; ನಿರಾಶಾವಾದಿಗಳ ಕುಚೋದ್ಯದ ನಗೆ ನನ್ನ ಮಾತುಗಳ ಮೇಲೆ ಪರಿಣಾಮ ಬೀರಬಹುದೆಂಬ ಭಯ. ನಾನು ಹೇಳುವ ವಿಷಯವೆಂದರೆ – ಅದನ್ನು

ಹೇಳುತ್ತಿರುವುದಕ್ಕಾಗಿ ದಯವಿಟ್ಟು ಕ್ಷಮಿಸಿ – ಪ್ರೀತಿ, ಕ್ರಿಶ್ಚಿಯನ್ 'ಪ್ರೀತಿ' ಅಥವಾ ಅನುಕಂಪ ಇದು ನಿಮ್ಮ ಅನುಭವವಾದರೆ, ಜೀವಿಸಲು ನಿಮಗೊಂದು ಗುರಿ, ನಿಮ್ಮ ಕಾರ್ಯಗಳಿಗೊಂದು ಮಾರ್ಗದರ್ಶಿ ಇದ್ದಂತೆ. ಧೈರ್ಯಕ್ಕೊಂದು ಕಾರಣ. ಬೌದ್ಧಿಕ ಸತ್ಯ ಸಂಧತೆಗೊಂದು ಅಗತ್ಯ ಪ್ರಚೋದನೆ. ನೀವು ಈ ರೀತಿ ಯೋಚಿಸಿದಲ್ಲಿ ಧರ್ಮದ ಪಥದಲ್ಲಿ ಎಲ್ಲರಿಗೂ ಬೇಕಾದುದೆಲ್ಲ ನಿಮಗಿದೆ ಎಂದರ್ಥ." ವಿಚಿತ್ರವೆನಿಸಿದರೂ ಮೇಲಿನ ಮಾತುಗಳು ಬರ್ಟ್ರಂಡ್ ರಸಲ್‌ನವು.

ಹೌದು ಎಲ್ಲ ಧರ್ಮಗಳೂ ಪ್ರೀತಿಗೆ ಒತ್ತುಕೊಡುತ್ತವೆ. ಆದರೆ ಈ ವಿಶ್ವವ್ಯಾಪಿ ಪ್ರೀತಿ ಅಥವಾ ಅನುಕಂಪವನ್ನು ಬೆಳೆಸುವುದು ಹೇಗೆ? ಎಲ್ಲೆಲ್ಲಿಯೂ ಇರುವ ಹಾಗೂ ಯಾವುದೇ ಸಂಕೋಲೆಯಿಂದ ಬಂಧಿತರಾಗದವರೊಂದಿಗೆ ಸಂಪರ್ಕ ಹೊಂದಿ ನಾವು ಈ ವಿಶ್ವವ್ಯಾಪಿ ಪ್ರೀತಿಯನ್ನು ನೆಲೆಗೊಳಿಸಬಹುದೆಂದು ಮುಮುಕ್ಷುಗಳು ಖಚಿತವಾಗಿ ತಿಳಿದಿದ್ದಾರೆ. ದೇವರನ್ನುಳಿದು ಬೇರಾವುದೇ ಪೂಜೆಯ ವಸ್ತು ಮಾನವತೆ ಕೂಡ – ಕೇವಲ ಸೀಮಿತ ನಿಷ್ಠೆಯನ್ನು ಪ್ರೇರೇಪಿಸಬಲ್ಲದು.

ಇದು ಎಲ್ಲ ಮುಮುಕ್ಷುಗಳು ಬೋಧಿಸುವ ಸತ್ಯವೇ ಆಗಿದೆ. ಈ ಸತ್ಯ ನಮ್ಮಾಳ್ವಾರರು ಈ ಪ್ರಪಂಚದಲ್ಲಿದ್ದಾಗ ದೇವರ ಬಗೆಗಿನ ತಮ್ಮ ಅನುಭವಗಳನ್ನು ತಮ್ಮವರೊಂದಿಗೆ ಹಂಚಿಕೊಳ್ಳುವ ಉದ್ದೇಶದಿಂದ ಪ್ರೇರೇಪಿತವಾಗಿತ್ತು ಎಂದು ಸ್ಪಷ್ಟವಾಗಿ ಕಾಣಬಹುದು. ಒಂದು ಸತ್ಯದ ಬೆಳಕನ್ನು ನಿರಂತರವಾಗಿ ನೋಡುತ್ತ ಇತರರಿಗೆ ಬೆಳಕಿನ ಮಾರ್ಗ ತೋರಲು ಸ್ವತಃ ತಾವೇ ಬೆಳಕಾದರು. ಮಧುರಕವಿ ಈ ಬೆಳಕನ್ನು ನೋಡಿ ಅದನ್ನು ಅನುಸರಿಸಿದರು. ನಮ್ಮಲ್ಲಿ ಯಾರು "ಕತ್ತಲಿಂದ ಬೆಳಕಿಗೆ ನಮ್ಮನ್ನು ನಡೆಸು" ಎಂದು ಪ್ರಾರ್ಥಿಸುವವರೋ ("ತಮಸೋ ಮಾ ಜ್ಯೋತಿರ್ಗಮಯ") ಅವರು ಕೂಡ ಈ ಬೆಳಕನ್ನು ಕಾಣಬಹುದು!

* * * *

೨. ಶ್ರೀ ಶಂಕರರು

ಪ್ರೊ. ಪಿ. ಶಂಕರನಾರಾಯಣನ್

ಯಾವುದೇ ದೇಶದಲ್ಲಾಗಲೀ, ಯಾವುದೇ ಕಾಲದಲ್ಲಾಗಲೀ ಯಾವ ಪ್ರಜ್ಞಾವಂತರು, ಋಷಿಗಳು, ವಿಶ್ವದ ಉದ್ಧಾರಕರು ತಮ್ಮನ್ನು ಸರಿಗಟ್ಟಲಾರದ ಹಾಗೂ ತಮ್ಮನ್ನು ಮೀರಿಸಲಸಾಧ್ಯವಾದಂಥ ಸ್ಥಾನವನ್ನು ಶ್ರೀ ಶಂಕರರು ಪಡೆದಿದ್ದಾರೆ. ಪ್ರತಿ ದೇಶದ ಪ್ರಖ್ಯಾತರಲ್ಲಿ, ಸಾಧು–ಸಂತರಲ್ಲಿ ಶಂಕರಾಚಾರ್ಯರಂತಹ ಔನ್ನತ್ಯ ಹಾಗೂ ಸಾಧನೆಗಾಗಿ ದೀರ್ಘಕಾಲ ಶ್ರಮವಹಿಸಿ ಹುಡುಕಾಡುವುದು ವ್ಯರ್ಥವೆನಿಸುತ್ತದೆ. ಈ ಹೊಗಳಿಕೆ ಕೇವಲ ಅವರ ನಿಷ್ಠೆಯ ಶಿಷ್ಯರು ಹಾಗೂ ಅನುಯಾಯಿಗಳಿಂದ ಮಾತ್ರವೇ ಬಂದುದಾಗಿರದೆ, ಪೂರ್ವಪಶ್ಚಿಮಗಳೆರಡರಲ್ಲೂ ಅವರನ್ನು ಅರಿತವರಿಂದ ಬಂದ ಮುಕ್ತ ಕಂಠದ ಶ್ರದ್ಧಾಂಜಲಿಯಾಗಿದೆ.

೩೨ ವರ್ಷಗಳ ಅವರ ತೀವ್ರ ಚಟುವಟಿಕೆಯ ಜೀವನಾವಧಿಯ ೧೫–೧೬ ವರ್ಷಗಳಿಗೆ ಮೀರದ ಶೈಶವ ಹಾಗೂ ಬಾಲ್ಯಾವಸ್ಥೆಯನ್ನು ಬಿಟ್ಟರೆ, ಉಳಿದ ಅವಧಿಯಲ್ಲಿ ಭರತವರ್ಷದ ದೂರ ದೂರದ ಮೂಲೆ ಮೂಲೆಗಳನ್ನೂ ಕಾಲ್ನಡಿಗೆಯಿಂದ ಸಂಚರಿಸಿ, ಅಲ್ಲಿನ ಮಣ್ಣನ್ನು ಪವಿತ್ರಗೊಳಿಸಿ ಬೌದ್ಧಿಕ ದಿಗ್ವಿಜಯ ಹೊಂದಿ, ಧರ್ಮ ಯುದ್ಧದಲ್ಲಿ ತೊಡಗಿ, ವಿವಿಧ ಪಂಗಡಗಳ ಜನತೆಯನ್ನು ಒಂದೇ ಸಾರ್ವತ್ರಿಕ ಪದ್ಧತಿಯ ಮಿತಿಯೊಳಗೆ ತಂದರು. ಅವರ ಅದ್ಭುತ ಬುದ್ಧಿಶಕ್ತಿ, ಪ್ರಾಚೀನ ಧರ್ಮ ಗ್ರಂಥಗಳಿಗೆ ಸಂಪೂರ್ಣ ನಿಷ್ಠಾಪ್ರವೃತ್ತಿ, ಹಿಂದೂ ಧರ್ಮದ ಮೂಲಗ್ರಂಥಗಳಿಂದ ಭಟ್ಟಿ ಇಳಿಸಲ್ಪಟ್ಟ ಟೀಕಾತೀತ ಖಚಿತತೆಯು, ತತ್ವಜ್ಞಾನದ ಸತ್ಯದಿಂದ ನಿರ್ದೇಶಿಸಲ್ಪಟ್ಟಿತ್ತು. ಆಳ ಹಾಗೂ ಪರಿಪೂರ್ಣತೆಯಲ್ಲಿ ಶ್ರೀ ಶಂಕರರ ಸಿದ್ಧಾಂತ ವಿಶ್ವದ ತತ್ವಜ್ಞಾನಗಳಲ್ಲಿ ಮೊದಲ ಸ್ಥಾನ ಪಡೆದಿದೆ. ಇತರ ಪಂಥಗಳ ಅನುಯಾಯಿಗಳು ವಿಷಾದದಿಂದ ತಪ್ಪಿನ ಆರೋಪ ಮಾಡಿದರೂ ಅದು ಸಂಪೂರ್ಣವಾಗಿ ಅನರ್ಹವಾದುದು, ಕಾರಣ ವೇದಾಂತ ಹಾಗೂ ಅದ್ವೈತ ಎರಡೂ ಸಮಾನಾರ್ಥಕ ಪದಗಳು. ಕಾಲಾನುಕ್ರಮದಲ್ಲಿ ವೇದಾಂತದ ಅರ್ಥ ವಿವರಣೆ ಅಗ್ರಸ್ಥಾನದಲ್ಲಿರುವುದರೊಂದಿಗೆ ತಾರ್ಕಿಕವಾಗಿ ಔನ್ನತ್ಯದಲ್ಲಿರುವುದೆಂದು ಪ್ರಶಂಸಿಸಲ್ಪಟ್ಟಿದೆ.

ಶ್ರೀ ಶಂಕರರು ಕೇವಲ ಆಧ್ಯಾತ್ಮಿಕ ಉಪದೇಶಕರಲ್ಲ. ಅರ್ಥಮಾಡಿಕೊಂಡು

ವಿಶ್ವಾಸದೊಂದಿಗೆ ಸರಿಯಾಗಿ ಅನುಸರಿಸಿಕೊಂಡು ಹೋದಲ್ಲಿ, ಮನುಷ್ಯ ತನ್ನ ನಿಜವಾದ ಪ್ರಭಾವವನ್ನು ಕಂಡುಕೊಳ್ಳುವುದರಲ್ಲಿ ತನ್ನನ್ನು ತಾನು ಮರೆಯುವ ಅನುಭವದತ್ತ ಕೊಂಡೊಯ್ಯುವಂಥ ಜೀವನ ಶೈಲಿಯನ್ನು ಸಹ ಅವರು ನಿರ್ದೇಶಿಸಿದರು. ದಿಗಿಲುಗೊಳಿಸುವಂತಿದ್ದ ಮುಗಿಲು ಮುಟ್ಟುವ ಭವ್ಯತೆ, ಪಟ್ಟುಬಿಡದ ತೀಕ್ಷ್ಣಬುದ್ಧಿಯ ತರ್ಕ ಹಾಗೂ ಬಹುಶಃ ವೈರಾಗ್ಯದ ಪರಿಪೂರ್ಣತೆಯಲ್ಲಿ ಯಾರನ್ನೂ ಸಮೀಪಕ್ಕೆ ಬರಗೊಡದ ಅದ್ವೈತ ವೇದಾಂತವು ಕೆಳಮಟ್ಟದ ಜೀವಿಗಳನ್ನು ಚಿತ್ತ ನೈರಾಶ್ಯಕ್ಕೆ ಒಳಪಡಿಸುವಂಥದು. ಆದರೆ ಅವರ ಪ್ರಖ್ಯಾತ ಶಿಷ್ಯರ ಅಧಿಕಾರಯುತ ಪರಂಪರೆ ಭಕ್ತಿ ಹಾಗೂ ನಿಯಂತ್ರಣದಿಂದ ಆಳಲ್ಪಟ್ಟ ದೀಕ್ಷೆ ಪಡೆದ ಚಿತ್ತಕ್ಕೆ, ಭಕ್ತಿ ತುಂಬಿದ ಶ್ರೀ ಶಂಕರರ ಪದ್ಧತಿ, ಶಾಸ್ತ್ರಗಳ ಮೇಲೆ ನೆಲೆನಿಂತಲ್ಲಿ, ಯುಕ್ತಿಯಿಂದ ಮಾರ್ಗದರ್ಶನ ಹೊಂದಿ ಅನುಭವದ ಭರವಸೆ ಪಡೆದು, ಅದರ ವಿನ್ಯಾಸ ಹಾಗೂ ಅದನ್ನು ಕಾರ್ಯರೂಪಕ್ಕೆ ತರುವಲ್ಲಿ ತನ್ನದೇ ಆದ ಕಲಾತ್ಮಕ ಸೌಂದರ್ಯ ಹೊಂದಿ, ದೃಢ ನಿಶ್ಚಯಕ್ಕೆ ಒತ್ತುಕೊಟ್ಟು ಸ್ವೀಕೃತಿಯನ್ನು ಆಹ್ವಾನಿಸುತ್ತದೆ. ಅವರ ಅಸಂಖ್ಯ ಅನುಯಾಯಿಗಳು ಅವರ ಬೋಧನೆಯ ನ್ಯಾಯಸಮ್ಮತ ಮೌಲ್ಯಗಳಿಗೆ ಸಾಕ್ಷ್ಯಾಧಾರಿತರಾಗಿದ್ದಾರೆ. ಹಾಗೂ ಇಂದಿಗೂ ನಮ್ಮ ನಡುವೆ ಅವರು ಬೋಧಿಸಿದ ವಾಸ್ತವತೆಯನ್ನು ಸಮರ್ಥಿಸುವವರನ್ನು ಕಾಣುತ್ತೇವೆ.

‘ವೈಶಾಖ ಶುದ್ಧ ಪಂಚಮಿ’ ವೈಶಾಖ ಮಾಸದ ಶುದ್ಧ ಪಂಚಮಿ ದಿನವೇ ಪ್ರಪಂಚಕ್ಕೆ ಶಂಕರರ ಆಗಮನದ ಪವಿತ್ರ ದಿನ. ‘ಕಟಪಯಾದಿ ಸಂಖ್ಯಾ’ ಎಂಬ ಸಂಖ್ಯಾಶಾಸ್ತ್ರದ ಪ್ರಕಾರ ಅವರಿಗೆ ಕೊಟ್ಟ ಹೆಸರನ್ನೂ ಆ ದಿನವೇ ನಿರ್ಧರಿಸಿತು. ಅವರ ಪ್ರಾಪಂಚಿಕ ಜೀವನದ ಗುರುತಾದ ವಿಶ್ವಕಲ್ಯಾಣ ಕಾರ್ಯಗಳಿಂದ ವೇದಗಳ ಮೂಲದ ಆ ಹೆಸರಿನ ಪ್ರಾಮುಖ್ಯತೆವನ್ನು ಅತ್ಯುಚ್ಚ ಪ್ರಮಾಣದಲ್ಲಿ ಸಮರ್ಥಿಸಿಕೊಂಡರು.

ವಿಶ್ವಾಸವುಳ್ಳವರ ಸಂಪ್ರದಾಯದ ಪ್ರಕಾರ, ಶ್ರೀ ಶಂಕರರು, ಭಗವಾನ್ ಪರಮೇಶ್ವರನ ಅವತಾರವೇ ಆಗಿದ್ದು, ‘ಗೀತೆ’ಯ ಭರವಸೆಗನುಗುಣವಾಗಿ ಧರ್ಮ ಕ್ಷೀಣಿಸುವುದನ್ನು ತಡೆಗಟ್ಟಿ, ಅದನ್ನು ಮತ್ತೆ ಜನರ ಚಿತ್ತ ಹಾಗೂ ಸಂಕಲ್ಪದ ಮೇಲೆ ನೆಲೆಸುವಂತೆ ಮಾಡಲೆಂದೇ ಈ ಪ್ರಪಂಚಕ್ಕೆ ಬಂದಿದ್ದು. ಅಪ್ರತಿಮ ಸೌಂದರ್ಯದ ಆಧ್ಯಾತ್ಮಿಕ ಪ್ರಭೆಯಿಂದ ಬೆಳಗುವ, ವೈರಾಗ್ಯದ ಸಂಕೇತವಾದ ಕಾವಿ ಬಟ್ಟೆಯುಟ್ಟು ಮನುಷ್ಯ ಹೃದಯವನ್ನು ನೋಯಿಸುವ ಅಸಂಖ್ಯಾತ ಕೆಡಕುಗಳನ್ನು ಓಡಿಸುವ, ಸ್ಥಿರತೆಯ ದಂಡಹಿಡಿದ ಬಾಲ ಸನ್ಯಾಸಿಯನ್ನು ಅಂದು ನೋಡಿದ ವಯಸ್ಕ ವಿದ್ಯಾರ್ಥಿಗಳು, ಹಿಮಾಲಯದೆತ್ತರದಲ್ಲಿ ಕುಳಿತು, ದಕ್ಷಿಣದತ್ತ ದೃಷ್ಟಿಹರಿಸಿ, ಸಂತೈಸುವ ತಮ್ಮ ಕೃಪಾಕಟಾಕ್ಷದಿಂದ ಅಜ್ಞಾನದ ಗುಹೆಯಲ್ಲಿನ ಕತ್ತಲನ್ನು ಹರಿಸಿ, ತೆರೆಯದ ತುಟಿಗಳು ಮೌನದ ಶಬ್ದಮಾಡುವ ಜಗದ್ಗುರುವಿನ ಪ್ರತಿರೂಪವನ್ನು ಆ ತರುಣ

ಬೋಧಕನಲ್ಲಿ ಕಂಡರು. ಎಲ್ಲ ಪ್ರಪಂಚಗಳ ಶಾಶ್ವತ ಶಿಕ್ಷಕ ಶಿವ ಕಾಲಮಿತಿ ಇಲ್ಲದ ಆಲದ ಮರದ ಕೆಳಗೆ ವಿವರಣಾತ್ಮಕ ಮೌನದಲ್ಲಿ ಕುಳಿತು ದಕ್ಷಿಣಾಮೂರ್ತಿಯಾಗಿ ಪೂಜಿಸಲ್ಪಟ್ಟರೆ ತನ್ನದಾದ ಭಿಕ್ಷೆಯ ಆಧಾರದಲ್ಲಿ ಸಂಚರಿಸಿ ಕಣ್ಣೀರ ತೆರೆಯಲ್ಲಿ, ಜೀವನದ ಅಗ್ನಿಜ್ವಾಲೆಯಲ್ಲಿ ನರಳುವ ತಪ್ಪೆಸಗುವ ಹುಲುಮಾನವರನ್ನು ರಕ್ಷಿಸಲು ವೇದಾಂತ ಜ್ಞಾನ ಬೋಧನೆ ಮಾಡಿದ ನಿಶ್ಚಲ ತೇಜದ ಕ್ರಿಯಾತ್ಮಕ ರೂಪ ಶ್ರೀ ಶಂಕರರು. ಉಪಕೃತಿಯ ನಿಧಿ, ಶಾಶ್ವತ ಶಂಭು, ವಿಶ್ವದ ಉಪಕೃತಿಯ ದಾಹಪೀಡಿತ ಮನಗಳಿಗೆ ಉಪಕಾರವೊದಗಿಸಿ ಐತಿಹಾಸಿಕ ಶಂಕರರೆನಿಸಿದರು.

ವಿಶ್ವದ ಪ್ರಖ್ಯಾತ ವ್ಯಕ್ತಿಗಳ ವೈಯಕ್ತಿಕ ಜೀವನವನ್ನು ಮುಸುಕಿರುವ ನಿಗೂಢತೆಯನ್ನು ಶ್ರೀ ಶಂಕರಾಚಾರ್ಯರೂ ಹಂಚಿಕೊಂಡಿದ್ದಾರೆಂದು ಹೇಳಲಾಗುತ್ತದೆ. ಹಿರಿಯ ಆಧ್ಯಾತ್ಮಿಕ ಗುರುಗಳು ಹಿಂದೆ ನಿಲ್ಲುವ ಸ್ವಭಾವದವರಾಗಿರಲೇ ಬೇಕೆನ್ನುವುದು ಬಹುಶಃ ಆಧ್ಯಾತ್ಮಿಕ ಔನ್ನತ್ಯದ ನಿಯಮಗಳಲ್ಲೊಂದಾಗಿರಬಹುದು. ಶಂಕರವಿಜಯಗಳೆಂಬ ಅವರ ಅನೇಕ ಜೀವನ ಚರಿತ್ರೆಗಳಿದ್ದರೂ, ಅವು ಸ್ಪಷ್ಟವಾಗಿಯೂ ಅವರ ಜೀವನಾನಂತರ ಬರೆದವಾಗಿದ್ದರೂ, ಅವು ಅಸಂಗತ ವಿವರಗಳನ್ನೊಳಗೊಂಡು ಓದುಗನನ್ನು ಗೊಂದಲಕ್ಕೆ ಸಿಕ್ಕಿಸುತ್ತವೆ. ಚಾರಿತ್ರಿಕ ಸಂಶೋಧನೆಗಳು ಶ್ರೀ ಶಂಕರರು ಕ್ರಿ.ಪೂ. ೭೮೮ರಲ್ಲಿ ಹುಟ್ಟಿ ಕ್ರಿ.ಶ. ೮೨೦ರವರೆಗೆ ಜೀವಿಸಿದ್ದರೆಂದು ತೀರ್ಮಾನಿಸಿವೆ. ಅವರು ಸ್ಥಾಪಿಸಿದ ಅನೇಕ ಮಠಗಳಲ್ಲಿ ರಕ್ಷಿಸಲ್ಪಟ್ಟಿರುವ ಸಾಂಪ್ರದಾಯಿಕ ವೃತ್ತಾಂತಗಳು, ಶಂಕರರ ಹುಟ್ಟನ್ನು ಕ್ರಿ.ಪೂ. ಎರಡನೆ ಶತಮಾನದಲ್ಲೋ ಅಥವಾ ಇನ್ನೂ ಮೊದಲೇ ಇರಬೇಕೆಂದು ಗುರುತಿಸಿವೆ. ಸಣ್ಣ ಪುಟ್ಟ ವ್ಯತ್ಯಾಸಗಳನ್ನುಳಿದು ಇತರ ಶಂಕರ ವಿಜಯಗಳೆಲ್ಲಾ ಆಚಾರ್ಯರ ಜೀವನದ ಪ್ರಮುಖ ಘಟನೆಗಳ ಬಗ್ಗೆ ಸಹಮತವಾಗಿವೆ. ಅವರ ತಂದೆ ಶಿವಗುರು ಹಾಗೂ ತಾಯಿ ಆರ್ಯಾಂಬ ದಕ್ಷಿಣ ಭಾರತದ ಕೇರಳದ ಕಾಲಟಿಯ, ಪ್ರಾಚೀನ ಸಾಂಪ್ರದಾಯಿಕ ಕುಟುಂಬದಿಂದ ಬಂದವರು. ನಾಸ್ತಿಕರ ಮತಾಭಿಪ್ರಾಯಗಳು ಹಾಗೂ ಕಪಟ ಧಾರ್ಮಿಕತೆಯ ಆಚಾರಗಳಿಂದ ಸಂದಿಗ್ಧಕ್ಕೆ ಸಿಲುಕಿದ್ದ ವೈದಿಕ ಧರ್ಮ ಹಾಗೂ ವೇದಾಂತ ತತ್ವಗಳನ್ನು ಪುನರ್ ಸ್ಥಾಪಿಸುವ ತಮ್ಮ ಉದ್ದೇಶವನ್ನು ಪೂರ್ಣಗೊಳಿಸಲು, ಮಕ್ಕಳಿಲ್ಲದ ದಂಪತಿಗಳ ಭಕ್ತಿಯ ಪ್ರಾರ್ಥನೆಗುತ್ತರವಾಗಿ ತ್ರಿಚೂರು ದೇವಾಲಯದ ಭಗವಾನ್ ಶಿವನೇ ಅವರ ಮಗನಾಗಿ ಹುಟ್ಟಿಬರಲೊಪ್ಪಿದ. ದೀರ್ಘಾಯುಷಿ ಆದರೆ ಮೂರ್ಖಮಗ ಹಾಗೂ ಕೇವಲ ಎಂಟು ವರ್ಷ ಬದುಕುವ ಆದರೆ ಅತ್ಯಂತ ಬುದ್ಧಿವಂತನಾದ ಮಕ್ಕಳ ನಡುವೆ ಒಬ್ಬನನ್ನು ಆಯ್ಕೆ ಮಾಡಿಕೊಳ್ಳಲು ಆರ್ಯಾಂಬಾಳಿಗೆ ಯಾವುದೇ ಹಿಂಜರಿಕೆಯಾಗಲೀ ಸಂಕಟವಾಗಲೀ ಇರಲಿಲ್ಲ.

ಈ ಭರವಸೆ ಸಿಕ್ಕ ಕೂಡಲೇ ಆರ್ಯಾಂಬಳಿಗೆ ಹುಟ್ಟಿದ ಮಗನ ದೈವೀ ಲಕ್ಷಣಗಳು ಆತ ಸಾಮಾನ್ಯ ಮಾನವನಾಗಿರದೆ, ಮೊದಲೇ ಗೊತ್ತಾದಂತೆ ದೇವರೇ

ಅವನಲ್ಲಿ ರೂಪುಗೊಂಡಿದ್ದಾನೆಂದು ಸಾರಿದವು. ಬಾಲಕ ತನ್ನ ತಾಯಿಯ ಮಾರ್ಗದರ್ಶನದಲ್ಲಿ ಬೆಳೆದಂತೆಯೇ ಶಿವಗುರು ಮೃತನಾದ. ಶೀಘ್ರವೇ ಬ್ರಹ್ಮಚರ್ಯೆಯ ದೀಕ್ಷೆ ಕೊಡಲ್ಪಟ್ಟು ಪವಿತ್ರ ಸಿದ್ಧಾಂತಗಳ ಅನೇಕ ಶಾಖೆಯಲ್ಲಿ ಬಾಲಕ ಪ್ರೌಢಿಮೆಯ ವಿದ್ವತ್ತನ್ನು ಪ್ರದರ್ಶಿಸಿದ.

ಗೊತ್ತಾದ ಎಂಟು ವರ್ಷಗಳು ಮುಗಿಯುವ ಕಾಲ ಸನ್ನಿಹಿತವಾಗಿತ್ತು. ತನ್ನ ಮನೆಯ ಬಳಿ ಹರಿಯುತ್ತಿದ್ದ ನದಿಗೆ ಶಂಕರ ಸ್ನಾನಕ್ಕೆಂದು ಹೋದಾಗ ಮೊಸಳೆಯೊಂದು ಅವನ ಕಾಲನ್ನು ಹಿಡಿಯಿತು. ಹುಡುಗ ತನ್ನ ಅಪಾಯಕರ ಸ್ಥಿತಿಯನ್ನು ತಾಯಿಗೆ ಕೂಗಿ ಹೇಳುತ್ತ ಆ ಮೊಸಳೆಯ ದವಡೆಯಿಂದ ಪಾರಾಗಲು ತಕ್ಷಣವೇ ತಾನು ಸನ್ಯಾಸ ತೆಗೆದುಕೊಂಡು ಸಾಂಕೇತಿಕವಾಗಿ ಸಾಯುವುದೊಂದೇ ಮಾರ್ಗವೆಂದು ಹೇಳಿದ. ಸನ್ನಿಹಿತವಾದ ಸಾವಿನಿಂದ ಮಗನನ್ನುಳಿಸಿಕೊಳ್ಳಲು ದುಃಖಭರಿತಳಾದ ತಾಯಿ ಆ ಮಾತಿಗೊಪ್ಪಲೇ ಬೇಕಾಯಿತು.

ನೀರಿನಲ್ಲಿ ನಿಂತು ಶಂಕರರು ಸನ್ಯಾಸಾಶ್ರಮ ಪ್ರವೇಶದ ಮಂತ್ರ ಉಚ್ಚರಿಸಿ ದಡಕ್ಕೆ ಬಂದು ತಮ್ಮ ಎರಡನೆಯ ಹುಟ್ಟಿನ ಜೀವನದ ಮತ್ತೆಂಟು ವರ್ಷಗಳ ಹೆಚ್ಚಳದ ಕರಾರು ಪಡೆದಾಗ ಸಂಚಾರಿ ಸನ್ಯಾಸಿಯಾಗಿ ಹೋಗಲು ತಾಯಿಯ ಅನುಮತಿ ಬೇಡಿದರು. ನೀರು ತುಂಬಿದ ಕಣ್ಣುಗಳೊಂದಿಗೆ ವಯಸ್ಸಾದ ಆ ಮಹಿಳೆ ತನ್ನ ಒಬ್ಬನೇ ಮಗನಿಗೆ ಬಂದ ಆ ಅವಸ್ಥೆಯ ಬಗ್ಗೆ ಗೋಳಿಡುತ್ತಾ, ಅವರಿಗೆ ಯಾರು ಊಟ ಹಾಕುತ್ತಾರೋ, ತನ್ನಂತೆ ಅವನ ಬಗ್ಗೆ ಯಾರು ಕಾಳಜಿ ವಹಿಸುತ್ತಾರೋ, ಗೃಹಸ್ಥನಾಗಿ ಅವನು ನೆಲೆಯಾಗುವುದನ್ನು ನೋಡಲೂ ತನಗೆ ಸಾಧ್ಯವಾಗದೇನೋ ಎಂದು ಗೋಳಿಟ್ಟಳು. ಅವಳನ್ನು ಸಮಾಧಾನಪಡಿಸುತ್ತಾ "ಇನ್ನು ಮುಂದೆ ನನಗೆ ಭಿಕ್ಷೆ ನೀಡುವವರೆಲ್ಲಾ ನನ್ನ ತಾಯಂದಿರು. ನನ್ನ ಶಿಷ್ಯರೇ ನನ್ನ ಮಕ್ಕಳು. ಆ ಭಗವಂತನ ಧ್ಯಾನವೆಂಬ ನನ್ನ ಪತ್ನಿಯೊಂದಿಗೆ ಏಕಾಂತದಲ್ಲಿರುವುದೇ ನನಗೆ ಸಂತೋಷ" ಎಂದು ಆ ತರುಣ ಸನ್ಯಾಸಿ ಉತ್ತರಿಸಿದರು. ತಾಯಿಯ ಬೇಡಿಕೆಗುತ್ತರಿಸುತ್ತ ಆ ಘಳಿಗೆ ಬಂದಾಗ ಅವಳ ಮೃತ್ಯುಶಯ್ಯೆಯ ಬಳಿ ಇರುತ್ತೇನೆಂಬ ಭರವಸೆ ಕೊಟ್ಟು, ಶ್ರೀ ಶಂಕರರು ಸಾಂಪ್ರದಾಯಿಕ ಶೈಲಿಯಲ್ಲಿ ತನಗೆ ದೀಕ್ಷೆಯಿತ್ತು ಮಾರ್ಗದರ್ಶನ ನೀಡುವ ಗುರುವನ್ನರಸುತ್ತ ವಿಶಾಲ ವಿಶ್ವದತ್ತ ನಡೆದರು. ನರ್ಮದೆಯ ದಂಡೆಯಲ್ಲಿ ಶ್ರೀ ಗೋವಿಂದ ಭಗವತ್ಪಾದರಲ್ಲಿ ಅಂಥ ವ್ಯಕ್ತಿಯನ್ನು ಕಂಡು, ಅವರಿಂದ ಅಗತ್ಯವಾದ ಶಿಕ್ಷಣವನ್ನು ದಾಖಲೆ ಎನಿಸುವ ಕಾಲಾವಧಿಯಲ್ಲಿ ಪಡೆದರು.

ದೇಶದ ಎಲ್ಲ ಮೂಲೆಗಳಿಂದ ಹಿರಿಯ ಪಂಡಿತರು ಬಂದು ಸೇರುವ ವಾರಾಣಸಿಗೆ ಶಂಕರರು ಪ್ರಯಾಣ ಬೆಳೆಸಿದರು. ಅಲ್ಲಿಯೇ ಅವರು ಉಪನಿಷತ್ತುಗಳು, ಭಗವದ್ಗೀತೆ ಹಾಗೂ ಬ್ರಹ್ಮಸೂತ್ರಗಳ ಮೇಲೆ ತಮ್ಮ ಅಮರ ಭಾಷ್ಯ ರಚಿಸಿದರು.

ವಿಷ್ಣುವಿನ ಎರಡನೆ ಆತ್ಮವೆನಿಸಿದ ಮಹರ್ಷಿ ವ್ಯಾಸರು, ಭಾಷ್ಯಗಳ ಸಾರದ ಬಗ್ಗೆ ಸ್ವತಃ ತಾವೇ ಶ್ರೀ ಶಂಕರರೊಂದಿಗೆ ವಾಗ್ವಾದ ನಡೆಸಿದರು. ಈ ಚರ್ಚೆ ಎಷ್ಟೋ ದಿನಗಳವರೆಗೂ ಮುಂದುವರಿದಾಗ ಶಂಕರನ ಶಿಷ್ಯನೊಬ್ಬ ನಿರ್ಬಂಧಕ್ಕೊಳಗಾಗಿ, "ಒಬ್ಬ ವಿಷ್ಣುವಿನ ಅವತಾರ ಮತ್ತೊಬ್ಬರ ಶಿವನ ಅವತಾರವೇ ಆಗಿರುವಾಗ, ಸ್ಪರ್ಧಿಗಳಿಬ್ಬರ ನಡುವೆ ನಿರ್ಧರಿಸುವುದು ಯಾರಿಗೆ ಸಾಧ್ಯ?" ಎಂದ. ಅಂತಿಮವಾಗಿ ವ್ಯಾಸರು ಬ್ರಹ್ಮಸೂತ್ರಗಳ ಬಗ್ಗೆ ಭಾಷ್ಯ ರಚಿಸಿರುವ ಶ್ರೀ ಶಂಕರರ ನಿಷ್ಠೆಯಿಂದ ಸುಪ್ರೀತರಾಗಿ, ಅದ್ವೈತದ ಸತ್ಯವನ್ನು ಪ್ರಸಾರಮಾಡಿ ಅಸಾಂಪ್ರದಾಯಿಕ ಪದ್ಧತಿಗಳನ್ನು ನಿರ್ಮೂಲಮಾಡಲು ಶಂಕರರಿಗೆ ಮತ್ತೆ ಹದಿನಾರು ವರ್ಷಗಳ ಆಯಸ್ಸನ್ನು ಹೆಚ್ಚಿಸಿದರು.

ಒಂದಕ್ಕಿಂತ ಹೆಚ್ಚು ಬಾರಿ ಶ್ರೀ ಶಂಕರರು ಕಾಲ್ನಡಿಗೆಯಲ್ಲಿ ಭಾರತದ ಉದ್ದಗಲಕ್ಕೂ ಸಂಚರಿಸಿ, ಅಸಂಖ್ಯಾತ ಎದುರಾಳಿಗಳನ್ನು ಭೇಟಿಯಾಗಿ ಚರ್ಚಿಸಿ, ತೀಕ್ಷ್ಣವಾದ ವಾಗ್ವಾದದಿಂದ ಅವರನ್ನು ಜಯಿಸಿ, ಅವರ ತಪ್ಪುಗಳನ್ನವರಿಗೆ ಮನಗಾಣಿಸಿದ ಅ ನಂತರ ತಮ್ಮ ಆಲೋಚನಾ ಲಹರಿಯತ್ತ ಅವರನ್ನು ತಿರುಗಿಸುತ್ತಿದ್ದರು. ಮಂಡನನ ಹೆಂಡತಿ ಸ್ವತಃ ನ್ಯಾಯ ವಿಮರ್ಶಕಳಾಗಿದ್ದಾಗ ಅಂಥ ಒಂದು ಚರ್ಚೆ, ಪೂರ್ವ ಮೀಮಾಂಸ ಪದ್ಧತಿಗಳ ಪ್ರವರ್ತಕ ಮಂಡನಮಿಶ್ರನೊಂದಿಗೆ ನಲವತ್ತು ದಿನಗಳವರೆಗೂ ನಡೆಯಿತು. ಸೋತವರು ಮತ್ತೊಬ್ಬರ ಆಶ್ರಮವನ್ನು ಸೇರಬೇಕೆನ್ನುವುದು ಷರತ್ತಾಗಿತ್ತು. ಯಾವಾಗ ಉಭಯಭಾರತಿ – ಅದು ಮಂಡನನ ಮಡದಿಯ ಹೆಸರು – ಪ್ರತಿದಿನ ಮಧ್ಯಾಹ್ನ ಶ್ರೀ ಶಂಕರರನ್ನು 'ಭಿಕ್ಷೆ'ಗೂ ಮಂಡನನನ್ನು ಭೋಜನಕ್ಕೂ ಆಹ್ವಾನಿಸುತ್ತಿದ್ದವಳು ನಲವತ್ತನೇ ದಿನ ಇಬ್ಬರನ್ನೂ ಭಿಕ್ಷೆಗೆ ಆಹ್ವಾನಿಸಿದಾಗ, ಶಂಕರ ಗೆದ್ದಿರುವುದು ಮಂಡನನಿಗೆ ಅರ್ಥವಾಗಿ ತಕ್ಷಣವೇ ಆತ ಸುರೇಶ್ವರ ಎಂಬ ಹೆಸರಿನೊಂದಿಗೆ ಸನ್ಯಾಸತ್ವ ಪಡೆದರು.

ಆನಂತರ ಶ್ರೀ ಶಂಕರರು ದೇಶದ ಇತರ ಭಾಗಗಳಲ್ಲಿ ಅನೇಕ ವಾದಿಗಳನ್ನು ಚರ್ಚೆಯಲ್ಲಿ ಸೋಲಿಸಿ, ನೆಲದ ಆಧ್ಯಾತ್ಮಿಕ ಪದ್ಧತಿಯೊಳಗೆ ನುಸುಳಿದ್ದ ಅಧೋಗತಿಯನ್ನು ತಡೆಗಟ್ಟಿದರು. ಅವರ ಸಮಯದಲ್ಲಿ (ಕಾಲದಲ್ಲಿ) ಭಾರತದ ಧಾರ್ಮಿಕ ಕ್ಷೇತ್ರದಲ್ಲಿ ತೇಜಸ್ಸನ್ನು ಮಸುಕುಮಾಡಿತ್ತು. ಕಾದಾಡುವ ಶಂಕಾಸ್ಪದ ಧರ್ಮಾಚರಣೆಗಳು ಚಿತ್ತವನ್ನು ಉದಾತ್ತಗೊಳಿಸದೆ ತೊಡಕಿಗೆ ಸಿಕ್ಕಿಸಿ, ಜನಗಳ ಸ್ವಾಮಿ ಭಕ್ತಿಯನ್ನು ತನ್ನತ್ತ ಸೆಳೆದು ಮಾನವನ ಚೈತನ್ಯವನ್ನು ಬಂಧನಕ್ಕೊಳಪಡಿಸಿ, ವ್ಯಕ್ತಿಯ ಆತ್ಮವನ್ನು ಕೀಳು ಮಟ್ಟಕ್ಕಿಳಿಸಿತ್ತು. ಶ್ರೀ ಶಂಕರರು ಈ ಧಾರ್ಮಿಕ ಪಂಥಗಳ ಎಲ್ಲ ಮಲಿನತೆಯನ್ನು ತೊಳೆದು, ಅವುಗಳನ್ನು ಪೂಜನೀಯ ಸ್ಥಾನಕ್ಕೇರಿಸಿದರು. ಇದನ್ನು ಅವರೆಷ್ಟು ಪರಿಪೂರ್ಣವಾಗಿ, ಎಷ್ಟು ಯಶಸ್ವಿಯಾಗಿ ಮಾಡಿದರೆಂದರೆ,

ಅವರ ನಂತರ ಬಂದ ಇತರ ಧಾರ್ಮಿಕ ಗುರುಗಳು, ವೇದಾಂತದ ಅನ್ವೇಷಣಾ ಮಾರ್ಗದ ಉಸುಕಿನಂಥ ಕ್ರೂರ ಅಸಾಂಪ್ರದಾಯಿಕ ಆಚರಣೆಗಳನ್ನು ಶುದ್ಧಗೊಳಿಸಬೇಕಾಗಿರಲಿಲ್ಲ. ಶ್ರೀ ಶಂಕರರು ನೆಲೆಗೊಳಿಸಲು ಬಂದವರೇ ಹೊರತು ನಾಶಮಾಡಲಲ್ಲ. ವಿವಿಧ ಪಂಗಡಗಳ ಹಿಂದೂಗಳು ಇಂದು ವ್ರತ, ಹಬ್ಬಗಳನ್ನು ಒಬ್ಬನೇ ಸರ್ವಶಕ್ತನ ವಿವಿಧ ರೂಪಗಳಲ್ಲಿ ಅಂದರೆ, ಗಣೇಶ ಚತುರ್ಥಿ, ಶಿವರಾತ್ರಿ, ಜನ್ಮಾಷ್ಟಮಿ, ಶ್ರೀರಾಮನವಮಿ ಇತ್ಯಾದಿಗಳನ್ನು ಆಚರಿಸುತ್ತಿದ್ದರೆ, ಅದಕ್ಕೆ ಶ್ರೀ ಶಂಕರಾಚಾರ್ಯರು ಪ್ರಾಚೀನ ಧರ್ಮವನ್ನು ಅದ್ವೈತದ ವಿರೋಧಿಗಳ ಆಕ್ರಮಣದಿಂದ ಉಳಿಸಿದುದೇ ಕಾರಣ. ಅವರ ಷಣ್ಮತ ಸ್ಥಾಪನೆಗೆ ಕಾರಣ (ಆರು ರೀತಿಯ ಧಾರ್ಮಿಕ ಪೂಜೆಗಳನ್ನು ನೆಲೆಗೊಳಿಸಿದುದು) ಏಕಕಾಲದಲ್ಲಿ ಶುದ್ಧೀಕರಣ ಹಾಗೂ ನಿಷ್ಕಳಂಕತೆಯನ್ನು ನೆಲೆಗೊಳಿಸುವುದಾಗಿತ್ತು. ಪರಿಶುದ್ಧ ನೀತಿ ಹಾಗೂ ವೈಚಾರಿಕ ಸಮಂಜಸತೆಗಳ ಬಗ್ಗೆ ರಾಜಿಮಾಡಿಕೊಳ್ಳದೆ, ಪೂಜಾ ವಿಧಾನಗಳು ಉಪಾಸಕನ ಇಚ್ಛೆಗನುಗುಣವಾಗಿ ಮಾರ್ಪಾಡಾಗಬಹುದೆಂದು ಸಮ್ಮತಿಸಿದರು.

ಉತ್ತರದ ಬದರಿಯಿಂದ ದಕ್ಷಿಣದ ರಾಮೇಶ್ವರದವರೆಗೂ, ಪಶ್ಚಿಮದ ಜ್ವಾಲಾಮುಖಿಯಿಂದ ಪೂರ್ವದ ಕಾಮರೂಪದವರೆಗೂ ಪ್ರತಿಯೊಂದು ಹೆಸರಾಂತ ಧಾರ್ಮಿಕ ಸ್ಥಳಗಳಿಗೂ ಭೇಟಿಕೊಟ್ಟು, ಅವುಗಳ ಪಾವಿತ್ರತೆಯನ್ನು ಪುನರ್‌ಸ್ಥಾಪಿಸಿ, ಮೂಲದೇವತೆಗಳ ರಮ್ಯತೆಯನ್ನು ನೆಲೆಗೊಳಿಸಿ ಉಪಕಾರಿಯಂತೆ ಹದಗೊಳಿಸಿ, ಹೆಚ್ಚಿನವುಗಳಲ್ಲಿ ಧಾರ್ಮಿಕ ಶಕ್ತಿ ಹಾಗೂ ಸಾಮರ್ಥ್ಯ ತುಂಬುವ ಯಂತ್ರಗಳನ್ನು ಮತ್ತೆ ಅಳವಡಿಸಿದರು.

ಶಂಕರರ ಜೀವನದ ಎರಡು ಪ್ರಮುಖ ಘಟನೆಗಳನ್ನು ಇಲ್ಲಿ ಉಲ್ಲೇಖಿಸಲೇಬೇಕು. ಮೊದಲನೆಯದಾಗಿ ವಾರಾಣಸಿಯ ಗಂಗೆಯಲ್ಲಿ ಪವಿತ್ರ ಸ್ನಾನಮಾಡಿ ಹಿಂತಿರುಗುವಾಗ ಚಂಡಾಲನನ್ನು ಎದುರಿಸಿ, ತನ್ನ ದಾರಿಯಿಂದ ಪಕ್ಕಕ್ಕೆ ಸರಿಯುವಂತೆ ಹೇಳಿದಾಗ ಆಚಾರ್ಯರ ಅದ್ವೈತ ಪ್ರಜ್ಞೆಯನ್ನು ಕಠಿಣ ಪರೀಕ್ಷೆಗೊಡ್ಡುವ ಉದ್ದೇಶದಿಂದ ಚಂಡಾಲ ಎದುರುತ್ತರಿಸಿದ ಎಂದು ಕತೆಯೊಂದು ಹೇಳುತ್ತದೆ. ತನ್ನೆದುರು ಕಾಣಿಸಿದವನು ಸಾಮಾನ್ಯ ನಶ್ವರ ಜೀವಿಯಲ್ಲದೆ, ಅಸಾಮಾನ್ಯ ರೀತಿಯ ಆತ್ಮಜ್ಞಾನಿ ಎಂಬರಿವು ಮೂಡಿದ ಶ್ರೀ ಶಂಕರರು, ತನ್ನನ್ನು ತಾನು ಅರ್ಥ ಮಾಡಿಕೊಂಡವನೇ ಬ್ರಹ್ಮ. ಅವನು ಉತ್ತಮಕುಲದ ದ್ವಿಜನೇ ಆಗಿರಲಿ, ಅಥವಾ ಕೀಳು ಜಾತಿಯಲ್ಲಿ ಹುಟ್ಟಿದ ಚಂಡಾಲನೇ ಆಗಿರಲಿ ಅವನು ಗುರುವಿನ ಗೌರವಕ್ಕೆ ಪಾತ್ರನಾಗಲು ಅರ್ಹ, ಎಂಬ ಪಲ್ಲವಿಯೊಂದಿಗೆ ಅಂತ್ಯವಾಗುವ ಮನೀಷಾ ಪಂಚಕವೆಂಬ ಐದು ನುಡಿಗಳ ಶ್ಲೋಕ ಉಚ್ಚಾರಣೆಗೆ ತೊಡಗಿದರು. ಪ್ರಾಸಂಗಿಕವಾಗಿ ಶಂಕರರು ವಾದದಲ್ಲಿ ಸೋತು, ಮೇಲು– ಕೀಳುಗಳ ಹುಟ್ಟಿನ ತಾರತಮ್ಯವನ್ನು ಅಲ್ಲಗಳೆದು ಕೇವಲ ಚಂಡಾಲನೊಬ್ಬನಿಗೆ ಒತ್ತಾಯಪೂರ್ವಕವಾಗಿ ಗೌರವ

ಸಲ್ಲಿಸಬೇಕಾಯಿತೆಂದೂ, ಇದು ಜಾತೀಯ ಸಮಾನತೆಯ ಒಂದು ವಾದ ಎಂದೂ ತೀರ್ಮಾನಿಸುವುದು ತಪ್ಪು ಎಂಬ ಅಂಶವನ್ನು ಇಲ್ಲಿ ಗಮನಿಸಬೇಕು. ಪ್ರತಿ ಶ್ಲೋಕದ ಮೊದಲ ನಾಲ್ಕು ಸಾಲುಗಳಿಗೆ ಉತ್ತರಿಸಬಲ್ಲವನೇ ಪರಿಪೂರ್ಣ ಸತ್ಯವನ್ನು ಅರ್ಥ ಮಾಡಿಕೊಂಡ ನಿಜವಾದ ಆತ್ಮಜ್ಞಾನಿ ಎಂಬುದೇ ಚಂಡಾಲನ ಬಗ್ಗೆ ಅವರು ಮನದಲ್ಲಿ ಹೊಂದಿದ್ದ ಕಲ್ಪನೆ.

ತಾಯಿಯ ಸಾವಿನ ಬಗ್ಗೆ ಮುನ್ಸೂಚನೆ ಹೊಂದಿ ಅವಳ ಮರಣ ಶಯ್ಯೆಗೆ ತ್ವರೆಮಾಡಿ, ಕೃಷ್ಣಸ್ತೋತ್ರವನ್ನವಳಿಗೆ ಉಪದೇಶಿಸಿ, ವೈಕುಂಠಕ್ಕೆ ಅವಳ ಗಮನವನ್ನು ಶೀಘ್ರಗೊಳಿಸಿ, ಸನ್ಯಾಸಿಗಳು ಯಾವುದೇ ಉತ್ತರಕ್ರಿಯೆಗಳಲ್ಲಿ ತನ್ನ ತಾಯಿಗೆ ಸಂಬಂಧಪಟ್ಟ ಕ್ರಿಯೆಗಳನ್ನು ಮಾಡುವುದನ್ನೂ ನಿಷೇಧಿಸಿದ್ದ ಪ್ರಚಲಿತ ಪದ್ಧತಿಯನ್ನು ವಿರೋಧಿಸಿ, ತಾಯಿಯ ಉತ್ತರ ಕ್ರಿಯೆಗೆ ಅಣಿಮಾಡತೊಡಗಿದರು. ರಕ್ತಸಂಬಂಧಿಗಳಿಂದ ಅವಹೇಳನಗೊಂಡು ಬಹಿಷ್ಕರಿಸಲ್ಪಟ್ಟ ಶಂಕರರು, ತಾಯಿಯ ಶರೀರವನ್ನು ತುಂಡರಿಸಿ, ಮನೆಯ ಹಿತ್ತಲಿಗೊಯ್ದು ತನ್ನ ಮಂತ್ರ ಶಕ್ತಿಯಿಂದ ಹೊತ್ತಿಸಿದ ಅಗ್ನಿಗವಳನ್ನು ಸಮರ್ಪಿಸಿದರು ಎಂದು ನಮಗೆ ಹೇಳಲಾಗಿದೆ. ಎಲ್ಲವೂ ಮುಗಿದ ನಂತರ, ಮುಂದೆ ಅವರ ಮನೆಯ ಹಿತ್ತಲೇ ಅವರ ಅಂತ್ಯಕ್ರಿಯೆಯ ಸ್ಥಳವಾಗಲೆಂದೂ, ಸನ್ಯಾಸಿಗಳ್ಯಾರೂ ಅಂಥ ಮನೆಯಿಂದ ಭಿಕ್ಷೆ ಪಡೆಯಬಾರದೆಂದೂ, ಕಾಲಟಿಯ ತನ್ನ ಸ್ವಕುಲದವರನ್ನು ಶಪಿಸಿದರು.

ತಮ್ಮ ಸಂಚಾರದ ಸಮಯದಲ್ಲಿ ಶಂಕರರು ತಮ್ಮ ಬೋಧನೆಗಳನ್ನು ಭಾರತದಾಚೆಗೂ ಹಾಗೂ ದೇಶದ ದೂರ ದೂರದ ಮೂಲೆಗಳಿಗೂ ಹರಡುವಲ್ಲಿ ಸಾಧನಗಳಂತಿದ್ದ ಅನೇಕ ಶಿಷ್ಯರನ್ನು ತನ್ನ ಸುತ್ತ ಒಟ್ಟುಗೂಡಿಸಿದರು. ಈ ಅನೇಕ ಶಿಷ್ಯರಲ್ಲಿ ಸುರೇಶ್ವರ, ಹಸ್ತಾಮಲಕ, ಪದ್ಮಪಾದ ಹಾಗೂ ತೋಟಕ ಮುಂತಾದ ನಾಲ್ವರ ಹೆಸರನ್ನು ಪರಂಪರೆ ಉಲ್ಲೇಖಿಸಿದೆ. ಅವರಿಂದ ಸ್ಥಾಪಿಸಲ್ಪಟ್ಟು, ಅವರ ಶಿಷ್ಯರ ರಕ್ಷಣೆಗೊಳಪಟ್ಟ ಈ ಅದ್ವೈತ ಪೀಠಗಳು, ಮೊದಲನೆಯದಾಗಿ ಶೃಂಗೇರಿಯಲ್ಲೂ, ಉಳಿದವು ಜಗನ್ನಾಥ, ದ್ವಾರಕ ಹಾಗೂ ಬದರಿಯಲ್ಲೂ, ಮೇಲ್ಕಂಡ ನಾಲ್ಕು ಹೆಸರಾಂತ ಶಿಷ್ಯರುಗಳೊಂದಿಗೆ ಸಂಬಂಧ ಹೊಂದಿ ಪ್ರವರ್ಧಮಾನಕ್ಕೆ ಬಂದಿವೆ. ವೇದವ್ಯಾಸರಿಂದ ಕೊಡಲ್ಪಟ್ಟ ಹದಿನಾರು ವರ್ಷಗಳ ಜೀವನದ ಎರಡನೇ ಅವಧಿ ಮುಗಿಯುತ್ತಾ ಬಂದಂತೆ, ಅವರು ದಕ್ಷಿಣದ ಕಾಂಚಿಗೆ ಹಿಂತಿರುಗಿ, ಕಾಮಾಕ್ಷಿ ಆಲಯದೆದುರು ಶ್ರೀಚಕ್ರವೊಂದನ್ನು ಪ್ರತಿಷ್ಠಾಪಿಸಿ ಸರ್ವಜ್ಞ ಪೀಠವನ್ನೇರಿ, ಕಾಮಕೋಟಿ ಪೀಠವನ್ನು ಸ್ಥಾಪಿಸಿದರು. ಒಂದಕ್ಕಿಂತ ಹೆಚ್ಚು ಪರಿಷ್ಕೃತ ಗ್ರಂಥ 'ಶಂಕರವಿಜಯ'ದ ಪ್ರಕಾರ ಆಚಾರ್ಯರು ತಮ್ಮ ಅಂತಿಮ ದಿನಗಳನ್ನು ಕಂಚಿಯಲ್ಲಿ ಕಳೆದು ಅಲ್ಲಿಯೇ ಸಿದ್ಧಿ ಹೊಂದಿದರೆಂದು ಹೇಳಿದರೆ, ಮತ್ತೊಂದು ಪರಂಪರೆ ಸರ್ವಜ್ಞ ಪೀಠಾರೋಹಣ ಮಾಡಿದ ಸ್ಥಳ ಕಾಶ್ಮೀರವೆಂದು ಹೇಳುತ್ತದೆ. ಇನ್ನು ಕೆಲವು ತಮ್ಮ ಕರ್ಮಭೂಮಿಯ

ಕ್ಷೇತ್ರದಿಂದ, ಭಾರತದ ಆಧ್ಯಾತ್ಮಿಕ ಮರುಹುಟ್ಟಿಗಾಗಿ ಮರೆಯಾದ ಹಿಮಾಲಯದ ಕೇದಾರದತ್ತ ಕೈ ತೋರುತ್ತವೆ.

ಅವರ ಸುಪ್ರಸಿದ್ಧ ಪೀಳಿಗೆಯ ಪವಿತ್ರ ಉತ್ತರಾಧಿಕಾರಿಗಳಾದ ವ್ಯಕ್ತಿಗಳ ಚಟುವಟಿಕೆಯಿಂದ ಶೃಂಗೇರಿ, ಪುರಿ, ದ್ವಾರಕ, ಬದರಿ ಮತ್ತು ಕಂಚಿ ಈ ಐದು ಮಠಗಳೂ ಶಂಕರರ ಕೊಡುಗೆಯಾಗಿ ಅವರ ಮೂಲಕ ಇಡೀ ವಿಶ್ವಕ್ಕೇ ಕೊಡುಗೆಯಾದ ಅದ್ವೈತ ಜ್ಞಾನ ಹಾಗೂ ಅದ್ವೈತ ಜೀವನ ಮಾರ್ಗವನ್ನು ಇಂದಿಗೂ ಜೀವಂತವಾಗಿಟ್ಟಿವೆ.

ಕಾಲಾಂತರದಿಂದಲೂ ಅದ್ವೈತ ತತ್ವ ಹೊಸತೊಂದು ಪರಂಪರೆ ಎಂದು ಸೂಚಿತವಾಗಿಲ್ಲ ಎಂಬ ಎಚ್ಚರಿಕೆ ನೀಡುವುದರೊಂದಿಗೆ, ಅದು ಶ್ರೀ ಶಂಕರರಿಂದ ಕೇವಲ ಔಪನಿಷದಮ್ ಶಾಸ್ತ್ರಮ್ (ಉಪನಿಷತ್ತುಗಳ ಬೋಧನೆ) ಎಂದು ನಿರೂಪಿತವಾಗಿ ಪ್ರತಿಯೊಬ್ಬ ವಿಚಾರಶೀಲ ವ್ಯಕ್ತಿಯ ಗೌರವಪೂರ್ಣ ಲಕ್ಷ್ಯ ಹಾಗೂ ಮೆಚ್ಚುಗೆಯ ಒಪ್ಪಿಗೆಯನ್ನು ಪಡೆದಿದೆ. ಸ್ವಾಮಿ ವಿವೇಕಾನಂದರು ಶಂಕರರ ಬಗ್ಗೆ ಹೇಳುತ್ತಿದ್ದಂತೆ ಇದು ಅತ್ಯಂತ ವೈಜ್ಞಾನಿಕ ತತ್ವ ಮತ್ತು ಧರ್ಮ. ಪ್ರಖ್ಯಾತ ವಿದ್ವಾಂಸರಾದ ಐನ್‌ಸ್ಟೈನ್, ಎಡ್ಡಿಂಗ್‌ಟನ್, ಮ್ಯಾಕ್ಸ್‌ಪ್ಲಾಂಕ್ ಮುಂತಾಗಿ ಬಹಳಷ್ಟು ಮಂದಿಯ ಬರಹದುದ್ದಕ್ಕು ಆಧುನಿಕ ವಿಜ್ಞಾನ ಸತ್ಯಕ್ಕೆ ಹೇಗೆ ಗೌರವಾರ್ಪಣೆ ಮಾಡಿದೆ ಎನ್ನುವುದು ಗಮನಾರ್ಹ. 'ಬಹ್ಮಸತ್ಯಂ, ಜಗನ್ಮಿಥ್ಯಂ ಜೀವೋ ಬ್ರಹ್ಮೈವ ನ ಅಪರಃ' ಎಂಬ ಮಾತುಗಳಲ್ಲಿ ಈ ಅರ್ಧ ಶ್ಲೋಕ ಈ ನಿರಂತರ ತಾತ್ವಿಕತೆಯ ತಿರುಳನ್ನು ತಿಳಿಸುತ್ತದೆ. ಶಂಕರರ ಪ್ರಕಾರ ಸತ್ಯ ಒಂದೇ. ಸತ್ಯದ ಪರಿಪೂರ್ಣದಲ್ಲಿ ಅನೇಕತ್ವಕ್ಕಾಗಲೀ, ದ್ವೈತಕ್ಕಾಗಲೀ, ಅಸ್ತಿತ್ವ ಅಥವಾ ವಿಶೇಷಣ ಸಂಬಂಧಕ್ಕಾಗಲೀ, ಅವಕಾಶವಿಲ್ಲ. ಆ ವಾಸ್ತವಿಕತೆಯೇ ಬ್ರಹ್ಮನ್ ಎಂದು ತಿಳಿಯಲ್ಪಡುವ ಪರಿಶುದ್ಧ ಜೀವಿ. ಇದೇ ಸತ್, ಚಿತ್, ಆನಂದ, ಅಸ್ತಿತ್ವ ಜ್ಞಾನ ಮತ್ತು ಆನಂದ. ಈ ಮೂರು ಬ್ರಹ್ಮನ ಮೂರು ಗುಣಗಳು. ಆದರೆ ಬ್ರಹ್ಮನ ಏಕತೆಯ ಸಾರ, ಬ್ರಹ್ಮನ ಬಗ್ಗೆ ಯಾವುದೇ ನಿಶ್ಚಯಾರ್ಥಕ ಭವಿಷ್ಯ ನುಡಿಯಲು ಸಾಧ್ಯವಿಲ್ಲ. ಜ್ಞಾನದ ಮಿತಿಯುಳ್ಳ ಪರಿಮಿತ ನಶ್ವರರು ಬ್ರಹ್ಮನೆಂದರೆ ಏನೆಂದು ಅರ್ಥಮಾಡಿಕೊಳ್ಳಲಾರರು. ಆದರೆ ನಮ್ಮ ವ್ಯಾಪ್ತಿಯಲ್ಲಿ ಪರಿಚಿತವಾಗಿರುವ ಯಾವುದೇ ರೀತಿಯಲ್ಲಿ ಬ್ರಹ್ಮನನ್ನು ಅರ್ಥಮಾಡಿಕೊಳ್ಳಲಾಗುವುದಿಲ್ಲ.

ನಮ್ಮ ವಿವಿಧ ಅನುಭವಗಳು ಮಾಯೆ ಹಾಗೂ ಅವಿದ್ಯೆಯಿಂದ ಉಂಟಾಗುವ ಸುಳ್ಳು ಕಲ್ಪನೆಗಳು. ಅಸಾಧ್ಯವಾದ ಅಸಂಬದ್ಧತೆಗಳಿಂದಾಗಿ ಮಾಯೆ ತನ್ನನ್ನು ತಾನೇ ಖಂಡಿಸಿಕೊಳ್ಳುತ್ತದೆ. ಅದರ ವಾಸ್ತವಿಕತೆ, ಅವಾಸ್ತವಿಕತೆಯಲ್ಲಿ ಬೇರೂರಿದ್ದು, ಅಸತ್ಯತೆ ಸುಳ್ಳನ್ನೇ ನಿಜವಾಗಿ ತೋರಿಸುತ್ತದೆ. ಮಾಯೆಯ ಮುಸುಕಿನೊಳಗಿನ ತೋರಿಕೆಯ ಪ್ರಪಂಚ ನಿರ್ಗುಣ ಬ್ರಹ್ಮನ ಶಾಶ್ವತ ಅವತಾರವಾದ ಈಶ್ವರನ ಸೃಷ್ಟಿ.

ಜೀವ–ನಿರ್ಜೀವದ ವ್ಯಕ್ತಿಯ ವೈವಿಧ್ಯಮಯ ಅಸ್ತಿತ್ವ, ಮಾಯೆಯ ವಿಶ್ವದ ರಚನೆ ಅಗೋಚರನಾದ, ವಿರೂಪಗೊಂಡ, ಮೂಲಬ್ರಹ್ಮನ ಕಲ್ಪನೆ, ಅನೇಕ ಆಕಾರ ಹಾಗೂ ಹೆಸರುಗಳಿಗೆಡೆಗೊಡುತ್ತವೆ. ನಮ್ಮ ವ್ಯಾವಹಾರಿಕ ಚಿತ್ತಕ್ಕೆ ವಿಸ್ತೃತ ಪ್ರಪಂಚ ಅಸ್ತಿತ್ವದಲ್ಲಿರುವುದು ಖಚಿತ. ಆದರೆ ತಿಳುವಳಿಕೆ ಮೂಡಿದ ಬಳಿಕ ಬ್ರಹ್ಮನೇ ಅಂತಿಮ ಸತ್ಯವೆಂದು ಮನವರಿಕೆಯಾಗುತ್ತದೆ. ಪ್ರತಿ ಜೀವವೂ ಪರಿಪೂರ್ಣ ಬ್ರಹ್ಮನೇ ಆಗಿಯೂ ಇಕ್ಕಟ್ಟಿನ ಮಿತಿಯೊಳಗೆ ಸಿಲುಕಿದ್ದು "that thou art" ಎಂಬ ಮಹತ್ತಾದ ಹೇಳಿಕೆಯ ಅರಿವಿನ ಅನಂತರ ಅವುಗಳನ್ನು ನಿರ್ಮಿಸಿದ್ದ ಅಜ್ಞಾನ ಮಾಯವಾಗುತ್ತದೆ. ಮಾಯೆಯಿಂದ ಮುಸುಕಲ್ಪಡದೆ, ಸಂಯಕ್‌ಜ್ಞಾನವನ್ನು ಹೊಂದಿದವನು ಈಗಲೇ ಇಲ್ಲಿಯೇ ಮುಕ್ತಿ ಪಡೆಯಬಲ್ಲ. ಹೇಗಾದರೂ ಆತ ಕರ್ಮಶೇಷದಿಂದ ಬಂಧಿಸಲ್ಪಟ್ಟು ಅದು ತೀರುವವರೆಗೂ ಭೂಮಿಯ ಮೇಲೆ ತಂಗುತ್ತಾನೆ. ಆದರೂ ಸ್ವಯಮಾಧಿಕಾರಿಯಾದ ಆತ ಉಳಿದ ಅವನ ಜೀವನವನ್ನು ಸ್ವಯಂಚಾಲಿತ ಶಕ್ತಿಯಂತೆ ಭೇದಗಳನ್ನು ಮರೆತು, ಗೋಚರಿಸುವ ಸಂಪೂರ್ಣ ಅನನ್ಯತೆಯನ್ನು ದೃಢೀಕರಿಸುತ್ತ ಅದನ್ನವನು ತನ್ನ ಮಾತುಗಳಲ್ಲೇ ಹೇಳುವುದಾದರೆ 'ನಾನೇ ಬ್ರಹ್ಮ' ಎಂಬ ರೂಪ ತಾಳಬೇಕು.

ಈ ಸತ್ಯಗಳನ್ನು ಶ್ರೀ ಶಂಕರರು ವೇದಾಂತದ ತ್ರಿಪದಿಗಳೆನಿಸಿದ ಉಪನಿಷತ್ತುಗಳು, ಗೀತೆ ಹಾಗೂ ಬ್ರಹ್ಮಸೂತ್ರಗಳ ಮೇಲಿನ ತಮ್ಮ ಭಾಷ್ಯಗಳಲ್ಲಿ ವಿಸ್ತಾರವಾಗಿ ಬರೆದಿದ್ದಾರೆ. ಒಂದಲ್ಲ ಒಂದು ಕಾರಣಕ್ಕಾಗಿ ಈ ಭಾಷ್ಯಗಳನ್ನೋದಲು ಸಾಧ್ಯವಿಲ್ಲದವರಿಗೆ ಸಾವಿರ ಶ್ಲೋಕದ ಅರ್ಥವನ್ನು ಒಂದೇ ಶ್ಲೋಕದಲ್ಲಿ ಅಳವಡಿಸಿದಂತಹ ಅನೇಕ ಚಿಕ್ಕ ಪ್ರಬಂಧ ಗ್ರಂಥಗಳನ್ನು ರಚಿಸಿದ್ದಾರೆ. ಇವುಗಳಲ್ಲಿ 'ವಿವೇಕ ಚೂಡಾಮಣಿ' ಮತ್ತು 'ಉಪದೇಶ ಸಾಹಸ್ರೀ' ಹೆಚ್ಚಾಗಿ ಓದಿಸಿಕೊಳ್ಳುವ ಜನಪ್ರಿಯ ಕೃತಿಗಳು. ಗದ್ಯ–ಪದ್ಯಗಳಲ್ಲಿ ಭಾಷ್ಯ–ಪ್ರಕರಣಗ್ರಂಥಗಳಲ್ಲಿ ಮತ್ತು ಅವರು ಹಾಡಿದ ಭಕ್ತಿ ಸ್ತೋತ್ರಗಳಲ್ಲಿ ಶ್ರೀ ಶಂಕರರ ಬರಹಗಳು ಸರಿಸಾಟಿ ಇಲ್ಲದ ಸಾಹಿತ್ಯ ಸಂಪತ್ತನ್ನು ಹೊಂದಿದೆ. ಅದರ ವೈವಿಧ್ಯ ಮಗುವಿನ ಮಧುರ ತೊದಲ್ನುಡಿಯಂತೆ ಧ್ಯಾನದ ಚಿಂತನೆಯಲ್ಲಿ ತನ್ನನ್ನು ತಾನು ಮರೆವ ಧ್ಯಾನಾವಸ್ಥೆಯ ಮೌನಿಯಂತೆ ಛಂದಸ್ಸಿನ ಲಾಲಿತ್ಯವನ್ನೊದಗಿಸಿದೆ.

ಜಗನ್ಮಾತೆಯನ್ನು ಕೊಂಡಾಡಿರುವ ಅವರ 'ಸೌಂದರ್ಯಲಹರಿ'ಯೊಂದು ಸ್ತೋತ್ರರೂಪದ ಶ್ರೇಷ್ಠ ಕೃತಿಯಾಗಿದ್ದು ಅದರ ಆಧ್ಯಾತ್ಮಿಕ ಶಕ್ತಿ ದೇವಿಯನ್ನು ಒಲಿಸಿಕೊಳ್ಳುವ ಸಾಮರ್ಥ್ಯಕ್ಕಾಗಿ ಹೆಸರಾಗಿದೆ.

ಶ್ರೀ ಶಂಕರರು ಕೇವಲ ದಾರ್ಶನಿಕರಷ್ಟೇ ಅಲ್ಲ. ದಿವ್ಯಜ್ಞಾನಿಯಾದುದರೊಂದಿಗೆ ಉದ್ಧಾರಕರೂ ಆಗಿದ್ದರು. ಮುಮುಕ್ಷುಗಳ ಸಂಘದ ಸದಸ್ಯತೆಗೆ ಅರ್ಹನಾಗಲು ತಾರತಮ್ಯ, ನಿರ್ಮೋಹ ಹಾಗೂ ಶಿಸ್ತುಗಳನ್ನು ನಿರ್ದೇಶಿಸಿ ಧಾರ್ಮಿಕ ಮಾರ್ಗದ

ಮೂಲಕ ಅವರು ಅಪೇಕ್ಷಿತರಿಗೆ ಅದ್ವೈತದ ಗುರಿ ಮುಟ್ಟಲು ಮಾರ್ಗದರ್ಶನ ನೀಡುವುದರೊಂದಿಗೆ ವಿವಿಧ ರೂಪಗಳಲ್ಲಿ, ವಿವಿಧ ಹೆಸರುಗಳಲ್ಲಿ ಮೈದೋರುವ ಪರಿಪೂರ್ಣ ಬ್ರಹ್ಮನನ್ನು ಪೂಜಿಸುವಂತೆ ಮಾಡಿದರು. ಅವರ ಪ್ರಕಾರ ಎಲ್ಲ ಧಾರ್ಮಿಕ ವಿಧಿಗಳೂ, ಎಲ್ಲ ರೀತಿಯ ಭಕ್ತಿಯೂ ಅದ್ವೈತದ ಮಹತ್ವ ಸೂಚಿಸುವ ಸತ್ಯದಿಂದಲೇ ಹೊರಟು, ಅದರತ್ತಲೇ ಹರಿಯುತ್ತದೆ. ಇತರ ವೇದಾಂತ ಸಂಸ್ಥೆಗಳು, ತಾವು ಕಲ್ಪಿಸಿಕೊಂಡ ತಮ್ಮ ದೇವರ ರೂಪ ತಾವು ಆ ದೇವರನ್ನು ಕರೆಯುವ ಹೆಸರು, ಎಲ್ಲದರಲ್ಲೂ ಭೇದ ಹುಟ್ಟಿಸುವ ಹಾಗೂ ಪಕ್ಷಾವಲಂಬಿತನದಿಂದ (ಒಂದು ಹೇಳಿಕೆಯ ಪ್ರಕಾರ ಬಹುತೇಕ ಧರ್ಮಾಂಧತೆ) ಕೂಡಿದವಾಗಿರುತ್ತಿದ್ದವು. ಶ್ರೀ ಶಂಕರರೊಬ್ಬರು ಮಾತ್ರ ಅಂಥ ಪ್ರತ್ಯೇಕತಾ ನೀತಿಯಿಂದ ಅಥವಾ ಮತಾಂಧತೆಯಿಂದ ಮುಕ್ತರಾಗಿದ್ದರು. ವ್ಯವಸ್ಥೆ ಹಾಗೂ ವಾಸ್ತವತೆಯಲ್ಲಿ ಅವರ ಧರ್ಮ ಅತ್ಯುತ್ಕೃಷ್ಟ ವಿಶ್ವವ್ಯಾಪಿತನದಿಂದ ಕೂಡಿದೆ. ಇತರ ತತ್ವಗಳು ಹಾಗೂ ಧರ್ಮಗಳು ಅದರೊಂದಿಗೆ ಜಗಳವಾಡಬಹುದು. ಆದರೆ ಶಂಕರರ ಅದ್ವೈತಕ್ಕೆ ಮಾತ್ರ ಯಾರೊಂದಿಗೂ ಜಗಳವಿಲ್ಲ.

ಶಂಕರರು ಜೀವಿಸಿ, ಉಪದೇಶಿಸಿ ಶತಮಾನಗಳೇ ಕಳೆದುಹೋಗಿದ್ದರೂ ಅವರಂತೆ ರಾಜಿಗೊಪ್ಪದ ಅಷ್ಟೊಂದು ನಿರ್ಭೀತ ಆಧ್ಯಾತ್ಮಿಕ ವೈಶಾಲ್ಯತೆಯ, ಗಾಂಭೀರ್ಯದಲ್ಲಿ ಅವರ ಹತ್ತಿರಕ್ಕೂ ಸುಳಿಯದಂತಹ ಅವರ ಪ್ರಖರ ಗ್ರಾಹಕ ಶಕ್ತಿಯಲ್ಲಿ, ವ್ಯಾಪಕವಾದ ಅವರ ಬೋಧನೆಗಳಲ್ಲಿ ಅವರನ್ನು ಸರಿಗಟ್ಟುವಂಥ ಮತ್ತೊಬ್ಬ ಚಿಂತಕ ಈ ಭುವಿಗೆ ಬಂದಿಲ್ಲ. ಶಂಕರರು ನೆಲೆಗೊಳಿಸಿದ ಈ ತತ್ವಚಿಂತನೆ ಹಾಗೂ ಧಾರ್ಮಿಕ ಅನುಭವಗಳ ಉನ್ನತ ಸಾಧನೆಯ ಹೆಗ್ಗುರುತುಗಳನ್ನು, ಪೂರ್ವದಲ್ಲಾಗಲೀ ಪಶ್ಚಿಮದಲ್ಲಾಗಲೀ ಕೆಳಗಿಳಿಸುವಂತಹ ಸಾಧನೆ ನಡೆದಿಲ್ಲ. "ತಮ್ಮ ಗುರಿಯ ಬಗ್ಗೆ ಆಳವಾದ ಸ್ಪಷ್ಟತೆ ಹೊಂದಿ, ಬಾಹ್ಯದಲ್ಲಿ ವಿವಿಧ ರೂಪ ಪಡೆದರೂ ಒಂದೇ ಚೈತನ್ಯ ತುಂಬಿದ, ಸಾಂಸ್ಕೃತಿಕವಾಗಿ ಒಟ್ಟಾಗಿಸಿದ ಹಿಮಾಲಯದಿಂದ ಕನ್ಯಾಕುಮಾರಿಯವರೆಗಿನ ಇಡೀ ಭಾರತವನ್ನೇ ತಮ್ಮ ಕಾರ್ಯಕ್ಷೇತ್ರವನ್ನಾಗಿ ಕಂಡ ವ್ಯಕ್ತಿ ಇವರು. ಆ ಕಾಲದ ಮನೋವೃತ್ತಿಯನ್ನು ಪ್ರಕ್ಷುಬ್ಧಗೊಳಿಸಿದ್ದ ವಿವಿಧ ಪ್ರವಾಹಗಳನ್ನು ಸಮೀಕರಿಸಸಲು, ಆ ವೈವಿಧ್ಯತೆಯ ದೃಷ್ಟಿಕೋನದಲ್ಲೊಂದು ಏಕತೆಯನ್ನು ತರಲು ಬಹಳಷ್ಟು ಶ್ರಮಿಸಿದರು. ೩೨ ವರ್ಷಗಳ ಅಲ್ಪಕಾಲಾವಧಿಯ ಜೀವಿತದಲ್ಲಿ, ಅನೇಕ ಸುದೀರ್ಘ ಜೀವನಗಳ ಕೆಲಸ ಸಾಧಿಸಿ, ತಮ್ಮ ಶಕ್ತಿಶಾಲಿ ಚಿತ್ತ ಹಾಗೂ ಭವ್ಯ ವ್ಯಕ್ತಿತ್ವದ ಛಾಪನ್ನು ಭಾರತದ ಮೇಲೆ ಮೂಡಿಸಿರುವುದು ಇಂದಿಗೂ ಎದ್ದು ತೋರುತ್ತಿದೆ" ಎಂದು ಶ್ರೀ ಶಂಕರರಿಗೆ ಶ್ರದ್ಧಾಂಜಲಿಯನ್ನರ್ಪಿಸುತ್ತಾ, ಪಂಡಿತ ನೆಹರೂ ಬರೆದರು.

ಇಲ್ಲೊಬ್ಬ ವಿಶ್ವ–ಗುರುವಿದ್ದ. ಅಂತಹ ಇನ್ನೊಬ್ಬ ಮತ್ತೆಂದು ಬರಬಹುದು?

* * * *

೩. ವೇದಾಂತ ದೇಶಿಕರು

ಎಂ.ವಿ. ಹರಿಹರ ಅಯ್ಯರ್

ವಿಶಿಷ್ಟಾದ್ವೈತದ ಹಿರಿಯ ಪ್ರತಿಪಾದಕ ಶ್ರೀ ರಾಮಾನುಜರು ಚೆಂಗಲ್‌ಪೇಟೆ ಜಿಲ್ಲೆಯ ಶ್ರೀ ಪೆರಂಬುದೂರಿನಲ್ಲಿ ಹುಟ್ಟಿದವರು. ಜೀವನದ ಪ್ರಾರಂಭದಲ್ಲೇ ಆತ ಸನ್ಯಾಸಿಯಾಗಿ ಶ್ರೀ ಭಾಷ್ಯ ಹಾಗೂ ಗೀತ ಭಾಷ್ಯ ಬರೆದಿರುವುದು ಧರ್ಮ ಹಾಗೂ ದೇವರ ಬಗ್ಗೆ ಅವರು ಮಗ್ನರಾಗಿದ್ದುದನ್ನು ತೋರಿಸುತ್ತದೆ. ಅವರ ನಂತರ ಬಂದವರು ವೇದಾಂತ ದೇಶಿಕರೆಂಬ ಹೆಸರಿನ ಹಿರಿಯ ಸಂತರು (ವೇದಾಂತವನ್ನು ಬೋಧಿಸುವವರು).

ವೇದಾಂತ ದೇಶಿಕರು ಕಾಂಚೀಪುರಂನಲ್ಲಿ ಹುಟ್ಟಿದರು. ಅವರ ತಂದೆ–ತಾಯಿಗಳು ತೀರಾ ಬಡವರಾಗಿದ್ದರು, ಆದರೆ ವರದರಾಜನನ್ನು ತೀವ್ರ ಭಕ್ತಿಯಿಂದ ಪೂಜಿಸಿದವರಾಗಿದ್ದರು. ಮದುವೆಯಾದ ಬಹಳ ಕಾಲದ ನಂತರವೂ ಒಬ್ಬ ಮಗನಾಗದುದರಿಂದ ಅವರ ತಂದೆ ಆನಂದ ಸೂರಿ ತಾನು ದುರದೃಷ್ಟವಂತನೆಂದು ಮರುಗಿದರು. ತನ್ನ ಧರ್ಮಪತ್ನಿಯೊಂದಿಗೆ ತಿರುಮಲೆ ಬೆಟ್ಟಕ್ಕೆ ಹೋಗಿ ಶ್ರೀ ವೆಂಕಟನಾಥನ ಪದತಲದಲ್ಲಿ ಪ್ರಾರ್ಥಿಸಲು ಆತ ನಿರ್ಧರಿಸಿದರು.

ಅಲ್ಲಿ ಪೂಜೆ ಸಲ್ಲಿಸಿ ಆ ಆದರ್ಶ ದಂಪತಿಗಳು ತಿರುಮಲೆಯಲ್ಲಿ ಮನೆಯೊಂದರ ಮುಂದೆ ರಾತ್ರಿ ವಿಶ್ರಾಂತಿ ಪಡೆಯುತ್ತಿದ್ದರು. ಶ್ರೀಕೃಷ್ಣನನ್ನು ಪೂಜಿಸಿದ ಅನಂತರ ದ್ವಾರಕೆಗೆ ಹಿಂತಿರುಗುತ್ತಿದ್ದ ಕುಚೇಲನಿಗಾದ ಸಂತೋಷದ ಅನುಭವವನ್ನೇ ವೇದಾಂತ ದೇಶಿಕರ ತಂದೆ ಅನುಭವಿಸುತ್ತಿದ್ದರು. ದೇವರ ದಾರಿಗಳೇ ನಿಗೂಢವಾದವು. ಕುಚೇಲ ಹಿಂತಿರುಗಿದಾಗ ತನ್ನ ಮನೆ ಅರಮನೆಯಾಗಿ ಪರಿವರ್ತಿತವಾಗಿದ್ದು ತನ್ನ ಮಡದಿ ಮಕ್ಕಳು, ಎಲ್ಲ ವೈಭವದ ನಡುವೆ ಇರುವುದನ್ನು ಕಂಡ. ಇದೆಲ್ಲವೂ ಶ್ರೀಕೃಷ್ಣನ ಆಶೀರ್ವಾದದ ಫಲವೆಂದು ತಿಳಿದ. ಅದೇ ರೀತಿ ಮಗನೊಬ್ಬನನ್ನು ಪಡೆಯಲು ಕಾತರನಾದ ನಮ್ಮ ಭಕ್ತರೂ ಶ್ರೀ ವೆಂಕಟನಾಥನಿಂದ ನಿಗೂಢರೀತಿಯಲ್ಲಿ ಮಗನನ್ನು ಪಡೆಯುವ ಆಶೀರ್ವಾದ ಹೊಂದಿದರು.

ನಡುರಾತ್ರಿಯ ವೇಳೆಗೆ ತಿರುಮಲೆಯ ದೇವರು ಅತಿಶಯವಾದ ಸೌಂದರ್ಯ, ಉಜ್ವಲ ಹಾಗೂ ತೀಕ್ಷ್ಣ ಬುದ್ಧಿಯ ಐದು ವರ್ಷಗಳ ಚಿಕ್ಕ ಬಾಲಕನ ರೂಪ

ತಳೆದು, ಪ್ರತಿನಿತ್ಯದ ಪೂಜೆಗೆ ಉಪಯೋಗಿಸುತ್ತಿದ್ದ ದೇವಾಲಯದ ಗಂಟೆಯನ್ನು ತೆಗೆದುಕೊಂಡು ಕಾಂಚೀಪುರದ ತರುಣ ದಂಪತಿಗಳು ಮಲಗಿದ್ದೆಡೆಗೆ ನಡೆದ. ಅನಂತರ ವೈಷ್ಣವ ತತ್ವದ ಅತಿ ಹಿರಿಯ ಪ್ರತಿಪಾದಕರ ತಾಯಿಯಾಗಲಿದ್ದ ಧರ್ಮಪತ್ನಿಯನ್ನು ತಟ್ಟಿ ಎಬ್ಬಿಸಿ "ಬಾಯಿತೆರೆ" ಎಂದು ಹೇಳಿದ. ಅವಳು ಆಜ್ಞೆಯನ್ನು ಪಾಲಿಸಿದಳು. ಅನಂತರ ಆ ಪುಟ್ಟ ಶಿಶು ದೈವ ಗಂಟೆಯನ್ನು ಅವಳ ಬಾಯಿಯಲ್ಲಿ ಹಾಕಿ, ಅದನ್ನು ನುಂಗುವಂತೆ ಅವಳಿಗೆ ಹೇಳಿತು. ತನಗೆ ಆಜ್ಞಾಪಿಸುತ್ತಿರುವವರು ಯಾರೆಂದು ತಿಳಿಯದೆ ಆಕೆ ಕೂಡಲೇ ತನ್ನ ಬಾಯಿ ಮುಚ್ಚಿದಳು. ತಕ್ಷಣವೇ ದೇವರು ಕಣ್ಮರೆಯಾದರು. ಎಲ್ಲವೂ ಕ್ಷಣವೊಂದರಲ್ಲಿ ನಡೆದು ಹೋಯಿತು. ನಿಜಕ್ಕೂ ಏನು ನಡೆಯಿತೆಂದು ಅವಳಿಗೆ ನಂಬಲು ಸಾಧ್ಯವಾಗಲೇ ಇಲ್ಲ.

ಅನಂತರ ಅವಳು ತನ್ನ ಗಂಡನನ್ನೆಬ್ಬಿಸಿ ನಡೆದುದನ್ನವರಿಗೆ ಯಥಾವತ್ತಾಗಿ ತಿಳಿಸಿದಳು. ಮರುದಿನ ದೇವಾಲಯದ ಅರ್ಚಕ ಪೂಜೆ ಮಾಡಲು ಹೊರಟಾಗ ಗಂಟೆ ಕಾಣಲಿಲ್ಲ. ಅಲ್ಲಿ ಹಾಹಾಕಾರವೆದ್ದಿತು. ಪೂಜೆಗಾಗಿ ಗಂಟೆಯ ಆವಶ್ಯಕತೆ ಇಲ್ಲವೆಂದು ದೇವರ ಘೋಷಣೆಯಾಯ್ತು. ಹಾಗಾಗಿ ಅವರು ತಮಗೆ ತಾವೇ ಸಮಾಧಾನಗೊಂಡರು. ಕಾಂಚೀಪುರದ ದಂಪತಿಗಳು ಕಾಂಚೀಪುರಕ್ಕೆ ಪ್ರಯಾಣ ಬೆಳೆಸಿದರು.

ಕನ್ಯಾಮಾಸದ ಶುಕ್ಲಪಕ್ಷದಲ್ಲಿ ವಿಷ್ಣು ಅಧಿಪತಿಯಾದ ಶ್ರವಣ ನಕ್ಷತ್ರದಲ್ಲಿ, ಮುಂದೆ ಮನುಕುಲದ ಹಿರಿಯ ಬೋಧಕನೆನಿಸಬೇಕಾಗಿದ್ದ ದೈವಾಂಶ ಶಿಶು ಜನಿಸಿತು. ಮಗುವಿಗೆ ಬೆಟ್ಟಗಳೊಡೆಯನ ಹೆಸರಿಡಲಾಯ್ತು. ಅನ್ನಪ್ರಾಶನ, ಚೌಲ, ಉಪನಯನ ಇತ್ಯಾದಿ ಆರಂಭಿಕ ಸಂಸ್ಕಾರಗಳೆಲ್ಲವೂ ಶಾಸ್ತ್ರಪ್ರಕಾರವಾಗಿ ನಡೆದವು. ಈಗಿನಂತೆ ಎಲ್ಲವೂ ಮದುವೆಗೆ ಮುನ್ನ ಒಟ್ಟಿಗೆ ನಡೆಯಲು ಕಾದಿಟ್ಟಿರುವಂತಲ್ಲದೆ ಆ ದಿನಗಳಲ್ಲಿ ಎಲ್ಲವೂ ಹೆಚ್ಚು ಶ್ರದ್ಧೆಯಿಂದ ನೆರವೇರಿಸಲ್ಪಡುತ್ತಿದ್ದವು. ಶ್ರೀರಾಮ ದಶರಥನಿಗಾದಂತೆ ವೆಂಕಟನಾಥ ತನ್ನ ತಂದೆ–ತಾಯಿಗಳ ಪ್ರೀತಿಗೆ ಪಾತ್ರನಾದ. ಶ್ರೀರಾಮ ದಶರಥನ ಪ್ರೀತಿಯ ಗುರಿಯಾಗಿ ಎಷ್ಟು ಆಕರ್ಷಣೀಯ ಹಾಗೂ ಎಷ್ಟು ಕುಶಾಗ್ರಮತಿಯಾಗಿ ಕಾಣುತ್ತಿದ್ದ ಎಂದು ಅವನನ್ನು ವರ್ಣಿಸಿರುವ ನುಡಿಗಳು ನಮಗೆ ನೆನಪಿಗೆ ಬರುತ್ತವೆ. ಉಪನಯನವಾದ ಕೂಡಲೇ ಎಳೆಯ ಬಾಲಕ ವೆಂಕಟನಾಥ ಅತ್ಯುನ್ನತ ವೇದಶಾಸ್ತ್ರಗಳಲ್ಲಿ (ವೇದಾಂತ ಸೂತ್ರಗಳು) ಶಿಕ್ಷಣ ಪಡೆಯಲು ತರಗತಿಗಳಿಗೆ ಹೋಗಲಾರಂಭಿಸಿದ. ಹೆಚ್ಚಿನ ಉತ್ಸಾಹ ಹಾಗೂ ಗಮನವಿಟ್ಟು ಪಾಠ ಕೇಳುತ್ತಿದ್ದ. ಒಂದು ದಿನ ಗುರುವಾದ ತನ್ನ ಚಿಕ್ಕಪ್ಪ ಹಾಗೂ ಇತರ ಶಿಷ್ಯರ ನಡುವೆ ಯಾವುದೋ ವಿಷಯಕ್ಕೆ ಚರ್ಚೆನಡೆದು ಅನುಮಾನ ಪರಿಹಾರವಾಗದಿದ್ದಾಗ ಈ ದೈವೀ ಪ್ರತಿಭೆಯ ಬಾಲಕ ತಕ್ಷಣವೇ ಮಾತಾಡಿ ಅವರ ಅನುಮಾನಗಳನ್ನು ಪರಿಹರಿಸಿದ. ಗುರು, ತನ್ನಣ್ಣನ ಎಳೆಯ ಮಗನ ಬಗ್ಗೆ ತೀವ್ರ ಮೆಚ್ಚುಗೆ ಸೂಚಿಸಿ,

ತಾನಿನ್ನು ಅವನಿಗೆ ಕಲಿಸಬೇಕಾದುದೇನೂ ಇಲ್ಲವೆಂದು ಹುಡುಗನ ತಂದೆಗೆ ತಿಳಿಸಿದರು.

ಎಳೆಯ ವೆಂಕಟನಾಥನ್ ಕಡಲೂರು ಬಳಿಯ ತಿರುವಾಹೀಂದ್ರ ಪುರಮ್ ಎಂಬ ಹಳ್ಳಿಗೆ ಹೋಗಿ ಉತ್ತಮ ಪರಿಸರದಲ್ಲಿದ್ದ ಅರಳಿ ವೃಕ್ಷವೊಂದರ ಕೆಳಗೆ ಕುಳಿತು ಗರುಡ ಭಗವಾನನನ್ನು ಕುರಿತು ಧ್ಯಾನ ಮಾಡಿದ ಎಂದು ನಮಗೆ ತಿಳಿಸಲ್ಪಟ್ಟಿದೆ. ಅಂತಿಮವಾಗಿ ಹಯಗ್ರೀವನ ರೂಪದಲ್ಲಿದ್ದ ಅತ್ಯುನ್ನತ ಆತ್ಮದ ಕೃಪೆಗೆ ಪಾತ್ರನಾದ. ಹಯಗ್ರೀವನ ಚಿಕ್ಕ ಮೂರ್ತಿಯೊಂದನ್ನು ಅವನಿಗಿತ್ತು ಗರುಡ ಭಗವಾನ್ ಆ ಮೂರ್ತಿಯನ್ನು ಪೂಜಿಸುವಂತೆ ಹೇಳಿದ. ಈ ವೇಳೆಗೆ ವೆಂಕಟನಾಥ ಈ ಎಲ್ಲ ಅನುಗ್ರಹಗಳಿಂದ ಸಂಪೂರ್ಣ ಜ್ಞಾನಿಯಾಗಿದ್ದ. ಅವನಿಗರಿವಿಲ್ಲದ ಯಾವುದೇ ವಿಷಯವೂ ಇರಲಿಲ್ಲ. ಅವನು ಸರ್ವತಂತ್ರ ಸ್ವತಂತ್ರನ ಪದವಿ ಗಳಿಸಿದ. ಅವನ ತೀವ್ರ ಬುದ್ಧಿಶಕ್ತಿ, ಪಾಂಡಿತ್ಯ ಮತ್ತು ತರ್ಕಶಕ್ತಿ, ಧರ್ಮವನ್ನು ಎಲ್ಲ ಆಕ್ರಮಣಗಳಿಂದ ರಕ್ಷಿಸಲು ಅವನಿಗೆ ಸಾಧ್ಯವಾಗುವಂತೆ ಮಾಡಿತು. ಅವನು 'ಅಧಿಕರಣ ಸಾರಾವಳಿ' ಎಂದು ಕರೆಯುವ ಶ್ರೀಭಾಷ್ಯಂ ಮೇಲೆ ಬೃಹತ್ ವ್ಯಾಖ್ಯಾನ ಬರೆಯುವ ಜೊತೆಗೆ ಶ್ರೀಭಾಷ್ಯದ ಪ್ರತಿ ವಿಭಾಗದ ಸಾರಾಂಶವನ್ನು 'ತತ್ವ ಟೀಕಾ'ದ ಶ್ಲೋಕಗಳಲ್ಲಿ ಬರೆದು, ಇದುವರೆಗೂ ಇದ್ದ ಹಾಗೂ ಮುಂದೇಳಬಹುದಾದ ಪ್ರತಿ ಆಕ್ಷೇಪಣೆಗಳಿಗೂ ಉತ್ತರಿಸಿದರು. ಮುಂದೆ 'ನ್ಯಾಯ ಪರಿಶುದ್ಧ', 'ನ್ಯಾಯ ಸಿದ್ಧಾಂಜನಮ್', 'ತತ್ವಮುಕ್ತಕಲ್ಪ' ಮತ್ತು ತಮ್ಮ ಸ್ವಂತ ವ್ಯಾಖ್ಯಾನಗಳನ್ನು ಬರೆದರು. ಅವರು ಬೃಹತ್ ಗೀತಾ ಭಾಷ್ಯ 'ತಾತ್ಪರ್ಯ ಚಂದ್ರಿಕಾ' ಎಂದು ಚಿರಪರಿಚಿತವಾಗಿದೆ. ತಮ್ಮ 'ಸಾರ' ಹಾಗೂ 'ರತ್ನಾವಳಿ'ಗಳ ಮೂಲಕ ವಿವಿಧ ಸಂಬಂಧಗಳನ್ನು ಗುರುತಿಸುವುದರೊಂದಿಗೆ ಹಾಗೂ ಆತ್ಮದ ಅತ್ಯುನ್ನತ ಲಕ್ಷಣಗಳನ್ನು ಪ್ರತಿ ಗುಂಪಿನ ಎಲ್ಲ ಶ್ಲೋಕಗಳಲ್ಲಿ ವಿವರಿಸುವುದರ ಮೂಲಕ 'ತಿರುವಾಯ್‌ಮೊಳಿ'ಯ ವಿದ್ಯಾರ್ಥಿಗಳಿಗೆ ಹೆಚ್ಚಿನ ಸೇವೆ ಸಲ್ಲಿಸಿದ್ದಾರೆ. ಉಪನಿಷತ್ತಿನಲ್ಲಿ 'ನ್ಯಾಸ ವಿದ್ಯೆ'ಯ ಹೆಸರಿನಲ್ಲಿ ಉಲ್ಲೇಖಿತವಾಗಿರುವ ಪ್ರಪತ್ತಿಯೊಂದಿಗೆ ವ್ಯವಹರಿಸುವ 'ರಹಸ್ಯತ್ರಯ ಸಾರಮ್' ಅವರ ಅತ್ಯಂತ ಹಿರಿಯ ಕೃತಿಗಳಲ್ಲೊಂದು. ಇದು ಯಾರು ಪ್ರಪತ್ತಿಗೆ ಅರ್ಹರಾಗಿದ್ದಾರೆ? ಅದರ ಸ್ವಭಾವವೇನು? ಅದಕ್ಕೆ ಯಾವ ಸಹಾಯದ ಆವಶ್ಯಕತೆ ಇದೆ ಮತ್ತು ಪ್ರಪತ್ತಿ ಮಾಡಿರುವವನು ಸಾಯುವವರೆಗೂ ಬದುಕಬೇಕೆಂದು ತೋರಿಸುವ ವ್ಯವಸ್ಥಿತ ಪ್ರಬಂಧ. 'ಯಾದವಾಭ್ಯುದಯಮ್,' 'ಹಂಸ ಸಂದೇಶಮ್,' 'ಸಂಕಲ್ಪ ಸೂರ್ಯೋದಯ', 'ಪಾದುಕಾ ಸಹಸ್ರಂ', 'ಶತ ದುಶಾನಿ' ಹಾಗೂ ಸಂಸ್ಕೃತ ಮತ್ತು ತಮಿಳಿನಲ್ಲಿ ಅನೇಕ ಸ್ತೋತ್ರಗಳು ಹಾಗೂ ಹಿಂದಿನ ಗುರುಗಳ ಕೃತಿಗಳನ್ನು ಕುರಿತ ಭಾಷ್ಯಗಳು ಮುಂತಾದವು ಅವರ ಇನ್ನು ಕೆಲವು ಕೃತಿಗಳು. ತೀರಾ ಬಡವರಾಗಿದ್ದು, ಭಿಕ್ಷೆ ಬೇಡಿ ಬಂದ ಅಕ್ಕಿಯಿಂದ ಜೀವನ ಸಾಗಿಸುತ್ತಿದ್ದರೂ ಅವರ ವೈರಾಗ್ಯ ಅವರ ಪಾಂಡಿತ್ಯದಷ್ಟೇ

ಹಿರಿದಾಗಿತ್ತು. ಅವರೆಷ್ಟು ಹಿರಿಯ ಸಿದ್ಧರಾಗಿದ್ದರು ಎನ್ನುವುದಕ್ಕೆ ಸಾಕಷ್ಟು ಘಟನೆಗಳನ್ನು ಉಲ್ಲೇಖಿಸಬಹುದು. ಎಳೆಯ ವೆಂಕಟನಾಥ ತನ್ನ ಜ್ಞಾನದ ಬಲದಿಂದ ವೇದಾಂತ ದೇಶಿಕ (ವೇದಾಂತದ ಶಿಕ್ಷಕ) ಎಂಬ ಪದವಿ ಗಳಿಸಿದ.

ಒಮ್ಮೆ ಊಂಛವೃತ್ತಿಯ ಸಂದರ್ಭವೊಂದರಲ್ಲಿ ಅವರಿಗೆ ಅಕ್ಕಿಯನ್ನು ಕೊಡುವಾಗ ದೇಶಿಕರು, ಹಣ ಅಥವಾ ಮತ್ತಾವುದೇ ರೂಪದಲ್ಲಿ ಚಿನ್ನವನ್ನು ಪಡೆಯುವುದಿಲ್ಲವೆಂದು ತಿಳಿದ ಮಹಿಳೆಯೊಬ್ಬಳು, ಅವರಿಗೆ ಅಕ್ಕಿ ಜೊತೆಯಲ್ಲಿ ಅವನ ಪಾತ್ರೆಗೆ ಚಿನ್ನದ ಚೂರೊಂದನ್ನು ಹಾಕಿದಳು. ದೇಶಿಕರ ಧರ್ಮಪತ್ನಿ ಅನ್ನಮಾಡಲು ಅಕ್ಕಿಯನ್ನು ಶುಚಿಗೊಳಿಸುವಾಗ ಅದರಲ್ಲಿದ್ದ ಹೊಳೆವ ಚೂರನ್ನು ನೋಡಿ ಅದೇನೆಂದು ತಿಳಿಯದೆ, ತಾಳೆಗರಿಯ ಮೇಲೆ ದೇವರ ಸ್ತೋತ್ರ ಬರೆಯುತ್ತಿದ್ದ ತನ್ನ ಗಂಡನನ್ನು ಕೇಳಲು ಹೋದಳು. ಕೂಡಲೇ ಆತ ತಾನು ಬರೆಯುತ್ತಿದ್ದ ಲೇಖಣಿಯಿಂದ ಆ ನಾಣ್ಯವನ್ನು ದೂರತಳ್ಳಿ ಕೇವಲ ಅದೊಂದು ಮಿಣುಕು ಹುಳ ಎಂದು ಹೆಂಡತಿಗೆ ಹೇಳಿದರು. ಸಂತರಿಂದ ಕಲಿಸಲ್ಪಟ್ಟ ಈ ಹಿರಿಯ ಪಾಠವನ್ನು ಗಮನಿಸಿ! ಅವರು ಚಿನ್ನವನ್ನು ಮಿಣುಕು ಹುಳಕ್ಕೆ ಸಮವೆಂದು ಪರಿಗಣಿಸಿದರು. ಅವರು ಚಿನ್ನಕ್ಕೆ ಕೊಟ್ಟ ಬೆಲೆ ಅಷ್ಟೆ. ವೇದಾಂತದೇಶಿಕರಿಗೆ ಸನ್ಮಾನ ಮಾಡಲು ರಾಜ ತೀವ್ರ ಆಸಕ್ತಿ ಹೊಂದಿದ್ದ. ಅದ್ವೈತ ತತ್ವ ಪ್ರಚಾರಕರಾಗಿದ್ದ ಅವರ ಹಿರಿಯ ಸಹಚರ ವಿದ್ಯಾರಣ್ಯರಿಂದ ನೀಡಲ್ಪಟ್ಟ ರಾಜಾಹ್ವಾನದ ಬಗೆಗೂ ನಾನು ಉಲ್ಲೇಖಿಸಬಹುದು. ಕೇವಲ ವಿಷ್ಣುವೇ ಅವರ ಜೀವನ ಜೀವವಾಗಿದ್ದು ವೈರಾಗ್ಯವೇ ಮೂರ್ತೀಭವಿಸಿದಂತಿದ್ದ ವೇದಾಂತ ದೇಶಿಕರು ಆ ಆಹ್ವಾನಗಳನ್ನು ನಿರಾಕರಿಸಿ, ಬರೆದ ಉತ್ತಮ ಶೈಲಿಯ ಎರಡು ಅಥವಾ ಮೂರು ಪತ್ರಗಳು ಅಂಥ ಸಂತೋಷಗಳ ಸಣ್ಣತನದತ್ತ ಗುರಿಮಾಡಿ ತೋರಿವೆ.

ಒಮ್ಮೆ ಕಾಂಚೀಪುರದಲ್ಲಿ ದೇಶಿಕರು ಅನೇಕ ಶಿಷ್ಯರಿಗೆ ಪಾಠ ಮಾಡುತ್ತಿದ್ದುದು, ಮಾಟ, ಮಂತ್ರಗಳಲ್ಲಿ ಪರಿಣತನಾದ ವ್ಯಕ್ತಿಯೊಬ್ಬನ ಈರ್ಷ್ಯೆಯನ್ನು ಕೆರಳಿಸಿತು. ಹತ್ತಿರದ ಕೆರೆಯ ನೀರಿನ ಪಾತ್ರ ಬದಲಿಸಿ ಆ ಜನ ಸಮೂಹದತ್ತ ಹರಿಸಿ ಈ ಹಿರಿಯ ಶಿಕ್ಷಕನ ನೇತೃತ್ವದ ಈ ಸಭೆಯನ್ನು ಚದುರಿಸಿ, ಅವರನ್ನು ನಾಶ ಮಾಡಬಹುದೆಂದು ಯೋಚಿಸಿದ. ಆತ ಕೆರೆಯ ಬಳಿ ಕುಳಿತ. ವಿನಾಶಕಾರಿ ಮಂತ್ರಗಳ ಮರುಪಠಣ ಮಾಡಿ ಶೀಘ್ರವೇ ಕೆರೆಯ ನೀರು ಖಾಲಿಯಾದುದನ್ನು ಕಂಡ. ತನ್ನ ಯಶಸ್ಸಿನ ಬಗ್ಗೆ ಸಂತೋಷಪಡುತ್ತ, ವೇದಾಂತ ದೇಶಿಕರು ಮತ್ತವರ ಶಿಷ್ಯರು ಕೆರೆಯ ನೀರಲ್ಲಿ ಕೊಚ್ಚಿ ಹೋಗಿರಬೇಕೆಂದು ನಿಶ್ಚಯಿಸಿದ. ದೇಶಿಕರು ಕುಳಿತು ತಮ್ಮ ಶಿಷ್ಯರಿಗೆ ಪಾಠ ಹೇಳುತ್ತಿದ್ದ ಸ್ಥಳಕ್ಕೆ ಹೋದಾಗ ತನ್ನ ಪೈಶಾಚಿಕ ವರ್ತನೆಯಿಂದ ಸ್ವಲ್ಪವೂ ವಿಚಲಿತರಾಗದ ಶಿಷ್ಯರು, ಅದೇ ಜಾಗದಲ್ಲಿ ಕುಳಿತಿದ್ದು, ದೇಶಿಕರು ಅವರಿಗೆ ಶಿಕ್ಷಣ ನೀಡುತ್ತಿದ್ದುದನ್ನು ಕಂಡು ತಾನು ಕೇವಲ

ಭ್ರಮೆಯಲ್ಲಿರುವುದು ತಿಳಿದು ಬಂತು. ಕೆರೆಯ ಹೊರಗೆ ತಾನು ಹರಿಸಿದ ನೀರು ಮತ್ತೊಂದು ದಿಕ್ಕಿನಿಂದ ವೇದಾಂತ ದೇಶಿಕರು ತಮ್ಮ ಹೆಬ್ಬೆರಳಿನಿಂದ ತೋಡಿದ ಸಣ್ಣ ಕಾಲುವೆಯ ಮೂಲಕ ಹರಿದು ಹೋಗುತ್ತಿದ್ದುದನ್ನು ಕಂಡು ದಿಗ್ಭ್ರಮೆಗೊಂಡ. ಆ ಹಿರಿಯ ಗುರುಗಳ ಕಾಲಿಗೆ ಬಿದ್ದು ಅವರ ಕ್ಷಮೆ ಕೋರಿದ.

ಒಮ್ಮೆ ವೇದಾಂತದೇಶಿಕರು ಪೂಜೆಗಾಗಿ ತಿರುಮಲೈಗೆ ಹೋಗಬೇಕೆಂಬು ತುಡಿತಕ್ಕೊಳಗಾದರು. ಅಲ್ಲಿ ಪೂಜಿಸಿದ ಅನಂತರ ತನ್ನಿಷ್ಟದೇವತೆ ಹಯಗ್ರೀವನ ವಿಗ್ರಹಕ್ಕೆ ಪೂಜೆ ಮಾಡಬೇಕಾಗಿತ್ತು. ನೈವೇದ್ಯವಾಗಿ ಅರ್ಪಿಸಲು ಸ್ವಲ್ಪ ಹಾಲು ಬೇಕಿತ್ತು. ಹಾಲು ಎಲ್ಲೂ ದೊರೆಯಲಿಲ್ಲ. ದೊಡ್ಡ ಧಾನ್ಯವರ್ತಕನ ಮನೆಯ ಬಾಗಿಲು ತೆರೆದಿದ್ದು ಕಂಡು ಅಲ್ಲಿ ಹೋದರು. ಆ ವ್ಯಾಪಾರಿ ಬಲು ಜಿಪುಣನಾಗಿದ್ದು ಅತಿಥಿಯನ್ನು ನೋಡಲಿಚ್ಛಿಸದೆ ದೇಶಿಕರು ಬರುವ ಮೊದಲೇ ಬಾಗಿಲು ಮುಚ್ಚಿಸಿದ. ವೇದಾಂತ ದೇಶಿಕರು ವಿಗ್ರಹವನ್ನು ಬಳಿ ಇರಿಸಿ ಮನೆಯ ಮುಂದೆಯೇ ಮಲಗಿದರು. ನಡುರಾತ್ರಿಯ ವೇಳೆಗೆ ವರ್ತಕನಿಗೆ ಧಾನ್ಯಗಳನ್ನು ತುಂಬಿದ್ದ ಕೊಠಡಿಯಿಂದ ಅಗಿಯುತ್ತಿರುವ ಸದ್ದು ಕೇಳಿಸಿತು. ಅವನು ಒಂದು ಕಿಟಕಿಯಿಂದ ಇಣುಕಿ ನೋಡಿದ. ದೊಡ್ಡದೊಂದು ಕುದುರೆ ಅಲ್ಲಿ ನಿಂತು ಅನೇಕ ಚೀಲಗಳ ಧಾನ್ಯವನ್ನು ಖಾಲಿ ಮಾಡಿದ್ದನ್ನು ಕಂಡ. ಅವನು ಬಾಗಿಲು ತೆರೆದು ಮಧ್ಯೆ ಪ್ರವೇಶಿಸಿ ಸಹಾಯ ಮಾಡುವಂತೆ ದೇಶಿಕರನ್ನು ಬೇಡಿದ. ಆ ವರ್ತಕ ಆಗ ಮನಃಪೂರ್ವಕವಾಗಿ ಕೊಟ್ಟ ಹಾಲಿನಿಂದ ಪೂಜೆ ಮಾಡಿದ ಬಳಿಕ ಒಳಗೆ ಹೋಗಿ ನೋಡಿದಾಗ ಕುದುರೆ ಮಾಯವಾಗಿತ್ತು. ಇದು ಗೌರವಪೂರ್ಣ ಅತಿಥಿಯಾಗಿದ್ದ ದೇಶಿಕರಿಗೆ ಅಷ್ಟೊಂದು ನಿರ್ದಯತೆ ತೋರಿದ ಈ ವರ್ತಕನಿಗೆ ಪಾಠ ಕಲಿಸಲೆಂದು ಹಯಗ್ರೀವನೇ ನಡೆಸಿದ ಕಾರ್ಯವೆಂದು ಹೇಳುವುದು ಅನಾವಶ್ಯಕ. ನಂತರದ ಸುಧಾರಣೆಯಿಂದಾಗಿ ವರ್ತಕ ಹರಸಲ್ಪಟ್ಟ. ಹಯಗ್ರೀವ ಖಾಲಿ ಮಾಡಿದ ಚೀಲಗಳನ್ನೆಲ್ಲ ತೆಗೆದುನೋಡಿದಾಗ ಅವುಗಳಲ್ಲೆಲ್ಲಾ ಧಾನ್ಯವಿರದೆ ಕೇವಲ ಚಿನ್ನ ತುಂಬಿತ್ತು.

ವೇದಾಂತ ದೇಶಿಕರ ಹಿರಿಮೆ ದೂರ ದೂರಕ್ಕೆ ಹರಡಿತು. ವಿರೋಧಿ ಸಂಘಗಳ ಎದುರುವಾದಿಗಳ ಸಾಹಿತ್ಯ ಸ್ಪರ್ಧೆಯೊಂದನ್ನು ನಡೆಸಲು ಶ್ರೀರಂಗಕ್ಕೆ ಆಹ್ವಾನಿತರಾದರು. ದೇಶಿಕರು ಆಹ್ವಾನಕ್ಕೆ ಸ್ಪಂದಿಸಿ ಅಲ್ಲಿ ಹೋಗಿ ರಂಗನಾಥನ ಪಾದಗಳಿಗೆ ಪೂಜಿಸಿದರು. ಅವರ ಅಗಾಧ ಪಾಂಡಿತ್ಯವನ್ನರಿತ ಎದುರಾಳಿಗಳು ತಕ್ಷಣವೇ ಸೋಲೊಪ್ಪಬೇಕಾಯ್ತು.

ದೇವಾಲಯದ ಆವರಣದ ಗರುಡಮಂಟಪದಲ್ಲಿ ಕುಳಿತು ಇತರರ ಬಗ್ಗೆ ಕೆಟ್ಟ ಮಾತುಗಳನ್ನಾಡುತ್ತಾ ಕಾಲಕಳೆಯುವ ಕೆಲವು ಸೋಮಾರಿಗಳು ಈ ಹಿರಿಯ ವ್ಯಕ್ತಿಯ ಬಗ್ಗೆ ಕುಚೋದ್ಯ ಮಾಡುವ ನಿಶ್ಚಯ ಮಾಡಿದರು. ಅವರು ಆ ಅವಕಾಶಕ್ಕಾಗಿ ಕಾದರು. ಆ ದಿನಗಳಲ್ಲಿ ಸಾಕಷ್ಟು ಹಣವಿಲ್ಲದಿದ್ದ ವ್ಯಕ್ತಿಯೊಬ್ಬ ವಧುವನ್ನು ಪಡೆಯುವುದು

ಬಹಳ ಪ್ರಯಾಸಕರವಾಗಿತ್ತು. ೨೫–೨೬ ವರ್ಷಗಳ ಬ್ರಹ್ಮಚಾರಿಯೊಬ್ಬ ಹಣದ ಬಗ್ಗೆ ಹತಾಶನಾಗಿ ಗರುಡಮಂಟಪಕ್ಕೆ ಹೋಗಿ ಈ ಸೋಮಾರಿ ವದಂತಿಕಾರರನ್ನು ಪ್ರಾರ್ಥಿಸಿದ. ಅವರು ಕೂಡಲೇ ತೋರಿಕೆಯ ಗಾಂಭೀರ್ಯದೊಂದಿಗೆ, ಮತ್ತೊಂದು ಮಂಟಪದಲ್ಲಿ ಉಪನ್ಯಾಸ ಮಾಡುತ್ತಿದ್ದ ವೇದಾಂತ ದೇಶಿಕರ ಬಳಿ ಹೋಗಿ ಕೇಳುವಂತೆ ಹೇಳಿದರು. ಆ ತರುಣ ಬ್ರಹ್ಮಚಾರಿ ಅವರು ಹೇಳಿದ್ದನ್ನು ಸಂಪೂರ್ಣ ನಂಬಿ, ದೇಶಿಕರ ಬಳಿ ಹೋಗಿ ಅವರೆದುರು ಕೈಮುಗಿದು ನಿಂತ. ಅವನೇಕೆ ಬಂದಿದ್ದಾನೆಂದು ದೇಶಿಕರು ಕೇಳಿದಾಗ, ಗರುಡಮಂಟಪದ ಸೋಮಾರಿಗಳು ಚಿನ್ನಕ್ಕಾಗಿ ತಮ್ಮ ಬಳಿ ಕೇಳುವಂತೆ ಆದೇಶಿಸಿದ್ದಾರೆಂದು ಹೇಳಿದ ಕೂಡಲೇ ದೇಶಿಕರು ರಂಗನಾಥನ ರಾಣಿ ಆಂಡಾಳ್ ಬಗ್ಗೆ ಕೆಲವು ಸ್ತೋತ್ರಗಳನ್ನು ರಚಿಸಿದಾಗ ಆ ತರುಣ ಬ್ರಹ್ಮಚಾರಿ ಮೇಲಿಂದ ಚಿನ್ನದ ಚೂರುಗಳು ಬೀಳುವುದನ್ನು ಕಂಡ. ಅವುಗಳನ್ನೆಲ್ಲ ಆರಿಸಿ ಬಟ್ಟೆಯಲ್ಲಿ ಕಟ್ಟಿ ತನ್ನೂರಿಗೊಯ್ಯುವಂತೆ ದೇಶಿಕರ ಅಪ್ಪಣೆಯಾಯ್ತು. ಹಿಂತಿರುಗುವಾಗ ಆತ ತನ್ನನ್ನು ಗೇಲಿ ಮಾಡಬೇಕೆಂದಿದ್ದವರಿಗೆ ಆ ಚಿನ್ನವನ್ನು ತೋರಿಸಿದ. ದಿಗ್ಭ್ರಮೆಗೊಂಡ ಅವರು ಹೇಳಲಾರದಷ್ಟು ಅಪಮಾನಿತರಾಗಿ ವೇದಾಂತ ದೇಶಿಕರ ಪಾದಗಳಿಗೆ ಬಿದ್ದರು.

ಒಮ್ಮೆ ದೇಶಿಕರು ನಡೆದು ಹೋಗುತ್ತಿದ್ದ ದಾರಿಯಲ್ಲಿ ಕೆಲವು ಕಿಡಿಗೇಡಿಗಳು ಒಂದು ಹಗ್ಗ ಕಟ್ಟಿ ಅದಕ್ಕೆ ಚಪ್ಪಲಿಗಳನ್ನು ತೂಗುಹಾಕಿದರು. ದೇಶಿಕರನ್ನು ಅಪಮಾನ ಹಾಗೂ ಅನಾದರಗೊಳಿಸಲೆಂದು ಹಾಗೆ ಮಾಡಲಾಗಿತ್ತು. ದೇಶಿಕರು ಅದನ್ನು ಕಂಡ ಕೂಡಲೇ ರಂಗನಾಥನ ಮೇಲೊಂದು ಸ್ತೋತ್ರ ರಚಿಸಿ, ಸ್ವತಃ ರಂಗನಾಥನನ್ನೇ ಪೂಜಿಸುವ ಬದಲು ರಂಗನಾಥನ ಭಕ್ತರ ಪಾದರಕ್ಷೆಯ ಪಾದಧೂಳಿಯನ್ನು ಪೂಜಿಸುವುದು ತಮಗೆ ತೃಪ್ತಿಕರವಾದುದೆಂದೂ, ವಾಸ್ತವವಾಗಿ ಅದು ಮೋಕ್ಷ ಪಡೆಯುವ ಸಾಧನಗಳಲ್ಲೊಂದೆಂದೂ ಘೋಷಿಸಿದರು. ಬೇರೆ ಮಾತಿನಲ್ಲಿ ಹೇಳಬೇಕೆಂದರೆ ಕೇವಲ ಭಕ್ತರ ಪಾದಧೂಳಿಯನ್ನು ಪೂಜಿಸುವುದು ಸಹ ಶ್ರೀ ರಂಗನಾಥನನ್ನೇ ಪೂಜಿಸಿದ್ದಕ್ಕೆ ಸಮ ಎಂದು ಹೇಳಿದರು. ದೇವಸ್ಥಾನದ ಆವರಣದಲ್ಲಿ ಕಾಲಕಳೆವ ಈ ಸೋಮಾರಿ ಜನಗಳನ್ನೂ ರಂಗನಾಥನ ಭಕ್ತರೆಂದು ಪರಿಗಣಿಸಿದರು. ಬೇರೊಂದು ಮಾತಿನಲ್ಲಿ ಹೇಳುವುದಾದರೆ ಅವರು ಎಲ್ಲೆಲ್ಲಿಯೂ ದೈವತ್ವವನ್ನು ಕಂಡರು.

ಅವರಿಗೆ ಮತ್ತೊಂದು ಪರೀಕ್ಷೆಯೊಡ್ಡಲು ಈ ಜನಗಳಿಗೆ ಇನ್ನೊಂದು ಅವಕಾಶ ಒದಗಿ ಬಂತು. ಅವರು ತಮ್ಮ ತಂದೆಯ ವಾರ್ಷಿಕಶ್ರಾದ್ಧಕ್ಕಾಗಿ ಮೂವರು ಬ್ರಾಹ್ಮಣರನ್ನು ಆಹ್ವಾನಿಸಿದರು. ಕೆಲವು ಕಿಡಿಗೇಡಿಗಳು ವಾರ್ಷಿಕದ ದಿನ ದೇಶಿಕರ ಮನೆಗೆ ಹೋಗದಂತೆ ಆ ಬ್ರಾಹ್ಮಣರಿಗೆ ಹೆಚ್ಚಿನ ದಕ್ಷಿಣೆ ಹಾಗೂ ಸಮೃದ್ಧ ಭೋಜನದ ಆಸೆ ತೋರಿಸಿ ಅವರ ಮನ ಒಲಿಸಿದರು. ದೇಶಿಕರು ಪಿತೃಗಳಿಗೆ ಅಡಿಗೆ ತಯಾರಿಸಿ

ಕಾದರು. ಅತಿಥಿಗಳಿಗಾಗಿ ಬಹಳ ಹೊತ್ತು ಕಾದ ಅನಂತರ ಹೊರಗೆ ಬಂದು ನೋಡಿದಾಗ, ತಾವು ಆಹ್ವಾನಿಸಿದ್ದ ವ್ಯಕ್ತಿಗಳು ಆರಾಮವಾಗಿ ಕುಳಿತು ವೀಳ್ಯ ತಿನ್ನುತ್ತಿದ್ದುದನ್ನು ಕಂಡರು. ಅವರು ಹೋಗಿ ಆ ಬ್ರಾಹ್ಮಣರನ್ನು ಕೇಳಿದಾಗ, ಅವರು ಶತ್ರುಗಳ ಆಮಿಷಕ್ಕೆ ಹೇಗೆ ಬಲಿಬಿದ್ದೆವೆಂದು ವಿವರಿಸಿದರು. ಮನೆಗೆ ಹಿಂತಿರುಗಿ ಪಿತೃಗಳಿಗೆ ಎಲೆಯ ತುಂಬ ಊಟ ಬಡಿಸಿ, ಕುಳಿತು ತನ್ನಿಷ್ಟ ದೇವತೆಗಳಾದ ಗರುಡ ಭಗವಾನ್ ಹಾಗೂ ಹಯಗ್ರೀವರನ್ನು ಕುರಿತು ಧ್ಯಾನ ಮಾಡಿದರು. ಕೆಲವು ನಿಮಿಷಗಳ ನಂತರ ಅವರು ಕಣ್ತೆರೆದಾಗ ಆ ಮೂರು ಎಲೆಗಳೂ ಖಾಲಿಯಾಗಿ ಆ ಮೂವರು ಬ್ರಾಹ್ಮಣರೂ ಮನೆಯಾಚೆ ಹೋಗುತ್ತಿದ್ದುದನ್ನು ಕಂಡು ಅಚ್ಚರಿಗೊಂಡರು. ದೇವತೆಗಳೇ ತಮ್ಮ ಭಕ್ತನ ಪ್ರಾರ್ಥನೆಯನ್ನು ಈಡೇರಿಸಲು ಬಂದು ಪಿತೃಗಳ ಪಾತ್ರ ವಹಿಸಿದರು ಎಂಬುದನ್ನು ಹೇಳುವುದು ಅನಾವಶ್ಯಕ. ದಶರಥ ಶ್ರೀರಾಮನನ್ನು ನೋಡಲು ಬಂದವನು ಅವನನ್ನು ಆಶೀರ್ವದಿಸಲು ಹೇಗೆ ಆಕಾಶದಲ್ಲಿ ಅವನೆದುರು ಕಾಣಿಸಿಕೊಂಡ ಎಂದು ನೆನಪಿಸಿದಂತಾಗುತ್ತದೆ.

ವೇದಾಂತ ದೇಶಿಕರಿಗೂ ಮತ್ತೊಬ್ಬ ಹಿರಿಯ ಕವಿಯ ನಡುವೆ ನಡೆದ ಸ್ಪರ್ಧೆಯೊಂದರಲ್ಲಿ, ದೇಶಿಕರು, ರಂಗನಾಥನ ಪಾದರಕ್ಷೆಯ ಮೇಲೆ ರಚಿಸಿದ ೧೦೦೦ ಶ್ಲೋಕಗಳು, ಶ್ಲೋಕ ರಚಿಸುವುದರಲ್ಲಿ ವೇದಾಂತ ದೇಶಿಕರಿಗೆ ಅದ್ಭುತ ಶಕ್ತಿಯಿತ್ತು ಎಂಬ ವಿಷಯವನ್ನು ತಿಳಿಸುತ್ತದೆ. ಅವರ ಎದುರಾಳಿ ಕೇವಲ ೫೦೦ ಶ್ಲೋಕಗಳನ್ನು ರಚಿಸಿದ್ದರೆ, ವೇದಾಂತ ದೇಶಿಕರು ರಾತ್ರಿ ಮುಗಿಯುವುದರೊಳಗಾಗಲೇ ೧೦೦೦ ಶ್ಲೋಕಗಳನ್ನು ರಚಿಸಿ ಮುಗಿಸಿದ್ದರು. ಮರುದಿನ ಅವರ ಪ್ರತಿಸ್ಪರ್ಧಿ ಶ್ರೀರಂಗನಾಥನೆದುರು ಸೋಲೊಪ್ಪಿಕೊಳ್ಳುವ ಮೊದಲೇ ಶ್ರೀ ದೇಶಿಕರು ಅತ್ಯಂತ ಜ್ಞಾನಿಯಾದ್ದರಿಂದ ತಮ್ಮ ವಿನಯವಂತಿಕೆಯನ್ನು ಮೆರೆದರು. "ನಿಮ್ಮ ಶ್ಲೋಕಗಳು ೫೦೦ ಆನೆಯ ಮರಿಗಳಂತಿದ್ದರೆ, ನನ್ನವು ಸಾವಿರ ಶ್ಲೋಕಗಳೇ ಇರಬಹುದಾದರೂ, ಅವು ಹಂದಿಯ ಮರಿಗಳಂತಿವೆ ಎಂದು ತಮ್ಮ ಸ್ಪರ್ಧಿಗೆ ಹೇಳಿದರು. ಈ ಶ್ಲೋಕಗಳು 'ಪಾದುಕಾ ಸಹಸ್ರಂ' ಎಂದು ಹೆಸರಾಗಿವೆ.

ಶ್ರೀರಂಗಂ ಮುಸ್ಲಿಮರ ಧಾಳಿಗೊಳಗಾದಾಗ ದೇಶಿಕರು ಇನ್ನಿಬ್ಬರು ಹಿರಿಯ ಪಂಡಿತರನ್ನು ನೋಡಿಕೊಳ್ಳುತ್ತಿದ್ದರೆನ್ನುವುದು ಚೆನ್ನಾಗಿ ತಿಳಿದ ವಿಷಯ. ವೇದಾಂತ ದೇಶಿಕರು ೧೦೨ ವರ್ಷಗಳ ಪೂರ್ಣ ಜೀವನ ನಡೆಸಿ ಮುಕ್ತಿ ಹೊಂದಿದರು. ಈ ಹಿರಿಯ ಸಂತ, ದೈವೀ ಅವತಾರ ಹಾಗೂ ಶ್ರೇಷ್ಠ ಗುರುವಿನ ಹೆಸರು ನಮ್ಮೆಲ್ಲರಿಗೂ ಸಮಾಧಾನ ಸುಖ ಹಾಗೂ ಸಂತೋಷ ತಂದು ಎಲ್ಲರನ್ನೂ ಶ್ರೇಷ್ಠ ಗುರಿ ಎಂದರೆ 'ಮುಕ್ತಿ'ಯತ್ತ ನಡೆಸಲಿ.

* * * *

೪. ಸಂತ ಕಬೀರದಾಸರು

ಡಾ. ಬಾಂಕೇಬಿಹಾರಿ

ಕೆಲವು ನೂರು ವರ್ಷಗಳ ಹಿಂದೆ ಪವಿತ್ರನಗರ ಬನಾರಸಿನಲ್ಲಿ ಮಕ್ಕಳಿಲ್ಲದ ನೀರೂ ಎಂಬ ಹೆಸರಿನ ಮುಸ್ಲಿಮ್ ನೇಕಾರನೊಬ್ಬ ಬೆರಳು ಚೀಪುತ್ತ, ಪ್ರಕಾಶಮಾನವಾಗಿ ಹೊಳೆಯುವ ಹಣೆಯುಳ್ಳ, ಮುಗುಳ್ನಗೆಯ ಮಗುವೊಂದು ಉಪೇಕ್ಷೆಗೊಂಡ ಕೊಳವೊಂದರ ತಾವರೆ ಎಲೆಯ ಮೇಲೆ ನಿಶ್ಚಲವಾಗಿ ಮಲಗಿದುದನ್ನು ಕಂಡ.

ಮುದುಕ ಹತ್ತಿರ ಬರುತ್ತಿದ್ದುದನ್ನು ನೋಡಿದ ಮಗು 'ಬಾ ಬಾ' ಎಂದು ಅವನನ್ನು ಸ್ವಾಗತಿಸಿತು. ಮುದುಕ ಬಹಳ ಹಿಂದಿನಿಂದಲೂ ಅದನ್ನು ನೆನಪಿಟ್ಟಿರುವಂತೆ ಕಂಡ. ಅವನು ಕೂಡಲೇ ಅದನ್ನು ಅಪ್ಪಿ ಹಿಡಿದು ಈ ಸಂತಸದ ಸುದ್ದಿಯನ್ನು ವಯಸ್ಸಾದ ತನ್ನ ಹೆಂಡತಿಗೆ ಹೇಳಲು ಆತುರದಿಂದ ನಡೆದ. ಆನಂದದಿಂದ ಅವಳು ಮೌಲ್ವಿಗೆ ಕರೆ ಕಳಿಸಿದಾಗ, ಆತ ಅಗತ್ಯವಾದ ಶಾಸ್ತ್ರವನ್ನೆಲ್ಲ ನೆರವೇರಿಸಿ ಮಗುವಿಗೆ ಕಬೀರ (ಹಿರಿಯವ) ಎಂದು ನಾಮಕರಣ ಮಾಡಿದ. ಹೆಸರಿನಂತೆಯೇ ಅವನು ಕೀರ್ತಿವಂತನಾದ.

ಜೀವಿತ ಕಾಲದಲ್ಲಿ ಕಬೀರ ಅನೇಕ ಪವಾಡಗಳನ್ನು ಮಾಡಿದರು. ತಮ್ಮ ಗೂಢ ಹೇಳಿಕೆಗಳಿಂದ ಅವರು ಎಲ್ಲರ ಮೇಲೂ ಪರಿಣಾಮ ಬೀರಿದರು ಹಾಗೂ ತಮ್ಮ ಪಾಂಡಿತ್ಯಪೂರ್ಣ ವಾದದಿಂದ ಕಲಿತ ಪಂಡಿತರನ್ನು 'ಪರಾಭವ'ಗೊಳಿಸಿದ. ವಿಗ್ರಹಾರಾಧಕರು ಅವರನ್ನು ಮೂರ್ತಿ ಭಂಜಕನೆಂದು ನಿರ್ಣಯಿಸಿದರು. ಆದರೆ ಈ ಸುಧಾರಕ ಹಾಗೂ ಸಂತ ನಿರ್ಭಯವಾಗಿ ಸಾಮಾಜಿಕ ಸಮಾನತೆ ಒತ್ತಾಯದೊಂದಿಗೆ ಹಾಗೂ ಅನುಸರಣೆಯೊಂದಿಗೆ ಉಪದೇಶಿಸುವ ತನ್ನ ಗುರು ರಾಮಾನಂದರ ವೇದವಾಕ್ಯಗಳನ್ನುಪದೇಶಿಸುತ್ತಿದ್ದರು.

"ನಿನ್ನ ಜಾತಿಯನ್ನು ಯಾರೂ ಕೇಳುವುದಿಲ್ಲ. ಯಾರು ಭಗವನ್ನಾಮ ಪಠಿಸುತ್ತಾನೋ ಅವನನ್ನು ಭಗವಂತನೇ ತನ್ನವನೆಂದು ಹೇಳುತ್ತಾನೆ."

ಕಬೀರರು ಉಗ್ರ ತಪಶ್ಚರ್ಯೆಯನ್ನು ತಮ್ಮ ಜೀವನದ ಗುರಿಯಾಗಿ ಮಾಡಿಕೊಳ್ಳುವುದನ್ನು ನಿರಾಕರಿಸಿದರು. ದೀರ್ಘ ಕಾಲ ಗೃಹಸ್ಥನಾಗೇ ಉಳಿದು

ನೇಯ್ಗೆಯ ತನ್ನ ಉದ್ಯೋಗವನ್ನು ಮುಂದುವರಿಸಿರು. ನೇಯ್ಗೆಯ ರಾಟೆ ಯಂತ್ರದ ಸದ್ದು ಯಾವಾಗಲೂ ಅವರಿಗೆ ದೈವೀ ಸಂಗೀತದ ನೆನಪು ತರುತ್ತಿತ್ತು. ಕುಶಾಗ್ರಮತಿ ಹಾಗೂ ನುರಿತ ಕಸುಬುದಾರರಾಗಿ ಅವರು ತನ್ನ 'ಜೀನಿಛಾದರಿ' (ಭಕ್ತಿಯ ಸೂಕ್ಷ್ಮ ಮೇಲು ಹೊದಿಕೆ) ಯನ್ನು ನೇಯ್ದು ಉನ್ನತ ಕಲಾಕಾರನಾಗಿ ಅದನ್ನು ತಮ್ಮ ಭಕ್ತಿಯ ಕಣ್ಣೀರಿನಲ್ಲಿ ತೋಯಿಸಿ, ತಮ್ಮ ಶ್ರದ್ಧೆಯಿಂದ ಒಣಗಿಸುತ್ತಿದ್ದರು. ನೇಕಾರನ ಈ ಕೆಲಸದಿಂದ ಅವರು ನಿರ್ಭೀತನಾಗಿ "ನೇಕಾರ ತನ್ನ ಹೃದಯಾಂತರಾಳದಲ್ಲಿ ನೋಡಿ ಅಲ್ಲಿ ದೇವರನ್ನು ಗುರುತಿಸಿದ್ದಾನೆ" ಎಂದು ಯಾವುದೇ ವಿರೋಧಾತ್ಮಕ ಭಯವಿಲ್ಲದೆ ಹೇಳಬಲ್ಲವನಾಗಿದ್ದರು.

ಅವರು ಎರಡು ಬಾರಿ ಮದುವೆಯಾದವರೆಂದೂ ಹಾಗೂ ಅವರ ಮಡದಿಯರು ಯಾವಾಗಲೂ ಅವನಿಗೆ ವಿಧೇಯರಾಗಿದ್ದು ಮನೆಯ ಬಾಗಿಲಿಗೆ ಬಂದ ಪ್ರತಿ ಭಿಕ್ಷುವಿಗೂ ಆಹಾರ ನೀಡಬೇಕೆಂಬ ಅವರ ಆಣತಿಯಂತೆ ನಡೆಯುತ್ತಿದ್ದರೆಂದು (ಪರಂಪರೆಯೊಂದು) ರೂಢಿಗತ ವಿಚಾರವೊಂದು ತಿಳಿಸುತ್ತದೆ. ಅವರ ಜೀವನದ ಬಗ್ಗೆ ಅನೇಕ ಪವಾಡಗಳು ದಾಖಲಾಗಿವೆ. ಅಂಥವುಗಳಲ್ಲೊಂದು, ಬ್ರಾಹ್ಮಣರು ಅವರನ್ನು ಅಪಮಾನಗೊಳಿಸುವ ದೃಷ್ಟಿಯಿಂದ ಅವರ ಮನೆಯಲ್ಲಿ ದೊಡ್ಡ ಔತಣವೊಂದು ನಡೆಯಲಿದೆ ಎಂದು ಸುದ್ದಿ ಹರಡಿದರು. ಜನ ಸಾಲುಗಟ್ಟಿ ಅವರ ಮನೆಗೆ ಬಂದರು. ಅಪಮಾನದ ಭಯದಿಂದ ಕಬೀರ್ ಒಳಗೇ ಅವಿತು ಕುಳಿತರು. ದೇವರೇ ಆತಿಥೇಯನಾಗಿ ನಟಿಸಿ, ಕಬೀರರ ರೂಪದ ದೇವರಿಂದ ಆಹ್ವಾನಿಸಲ್ಪಟ್ಟ ಎಲ್ಲರಿಗೂ ಅಚ್ಚರಿಗೊಳ್ಳುವ ರೀತಿಯಲ್ಲಿ ಭೂರಿ ಭೋಜನ ನಡೆಯಿತು.

ಕಬೀರರ ಆಧ್ಯಾತ್ಮಿಕ ಶ್ರದ್ಧೆ ಗಮನಾರ್ಹವಾಗಿದ್ದು ಇದು ಪ್ರಾರಂಭದಿಂದಲೂ ಅವರಲ್ಲಿ ಸಹಜಗುಣವಾಗಿತ್ತು. ಅವರ ಶಿಷ್ಯತ್ವ ಇದಕ್ಕೆ ಮೊದಲ ಹಂತವಾಗಿತ್ತು. ರಾಮಾನುಜರ ಪಂಥದ ಹಿರಿಯ ಸಂತ ರಾಮಾನಂದರು ಕೇವಲ ಬ್ರಾಹ್ಮಣರನ್ನು ಮಾತ್ರ ತಮ್ಮ ಶಿಷ್ಯನಾಗಿ ಸ್ವೀಕರಿಸುತ್ತಿದ್ದರು. ಈ ನಿಯಮವನ್ನು ಸಡಿಲಿಸಲು ಮಾಡಿದ ಎಲ್ಲ ಬೇಡಿಕೆಗಳೂ ವ್ಯರ್ಥವಾದಾಗ ಒಂದು ದಿನ ಕಬೀರರು, ರಾಮಾನಂದರು ಪ್ರತಿದಿನ ಮುಂಜಾನೆ ಸ್ನಾನಕ್ಕೆ ಹೋಗುತ್ತಿದ್ದ ಬನಾರಸಿನ ಸ್ನಾನ ಘಟ್ಟದ ಮೆಟ್ಟಿಲ ಕೆಳಗೆ ಅವಿತು ಕುಳಿತು, ಅರಿಯದೆ ರಾಮಾನಂದರು ಕಬೀರರಿಗೆ ಸಂತೋಷವಾಗುವಂತೆ ಅವರ ಮೇಲೆ ಕಾಲಿಟ್ಟರು. ದೇವರ ಸ್ವಂತ ಸೃಷ್ಟಿಯನ್ನು ಹೊಸಕಿದ್ದಕ್ಕಾಗಿ ರಾಮಾನಂದರು ದುಃಖದಿಂದ "ರಾಮ ರಾಮ" ಎಂದು ಕೂಗಿದರು. ಕಬೀರರು ಅದನ್ನು ತನಗಿತ್ತ ದೀಕ್ಷಾಮಂತ್ರ ಎಂದು ತಿಳಿದರು. ಆಗಿನಿಂದ ಅವರು ತನ್ನನ್ನು ರಾಮಾನಂದರ ಶಿಷ್ಯನೆಂದು ಹೇಳಿಕೊಂಡು, ರಾಮನಾಮ ಜಪಿಸತೊಡಗಿದರು. ಕಬೀರರ ಶ್ರದ್ಧೆಯನ್ನು ನೋಡಿದ ರಾಮಾನಂದರು ಅವರನ್ನು ತನ್ನ ಶಿಷ್ಯನಾಗಿ ಸ್ವೀಕರಿಸಿದರು. ಅವರಿಂದಲೇ ದೇವರ ನಿರ್ಗುಣತ್ವವನ್ನು ಪೂಜಿಸಲು

ಅಭ್ಯಸಿಸಲು ಕಲಿತರು. ತನ್ನ ಶ್ರದ್ಧೆಗನುಗುಣವಾಗಿ ಸಂಪ್ರದಾಯಸ್ಥರ ನಂಬಿಗೆಗಳನ್ನು ಬಲವಾಗಿ ಅಲ್ಲಗಳೆದರು. ದೈವಶಾಸ್ತ್ರಜ್ಞರನ್ನು ಗೇಲಿ ಮಾಡಿದರು. ಎಲ್ಲ ಮತಾಚರಣೆಗಳು ಹಾಗೂ ಸಂಪ್ರದಾಯಗಳ ವಿರುದ್ಧ ಜನರನ್ನು ಪ್ರಚೋದಿಸಿದರು. ಚೈತನ್ಯವನ್ನು ಅಲಕ್ಷಿಸಿ ಕೇವಲ ಆಚಾರ ಮುಖ್ಯ ಎಂಬ ತಿಳಿವಳಿಕೆಯನ್ನು ದೂಷಿಸಿದರು.

ದೊಡ್ಡ ಗ್ರಂಥಗಳನ್ನೋದುವುದರಲ್ಲೇ ಪ್ರಪಂಚ ಕಾಲ ಕಳೆಯಿತು. ಅಲ್ಲಿ ಜ್ಞಾನಪಡೆದವರಾರೂ ಇಲ್ಲ. ಪ್ರೀತಿಯನ್ನೊಳಗೊಂಡ ಎರಡೂವರೆ ಅಕ್ಷರಗಳನ್ನು (ರಾಮ) ಅರ್ಥಮಾಡಿಕೊಂಡವನೇ ಮುಕ್ತಿ ಪಡೆದವ.

ಪ್ರೀತಿಯ ಉಪದೇಶಗಳನ್ನು ಸಾರಲು ದೂರ ದೂರಕ್ಕೆ ಸಂಚರಿಸಿದಾಗ ಎಲ್ಲಕ್ಕಿಂತ ಹೆಚ್ಚಾಗಿ, ಗೀತಗಳಲ್ಲಿ ಅಡಕವಾಗಿದ್ದ ಅವರ ಬೋಧನೆಗಳ ಸಮೃದ್ಧತೆ ಹಾಗೂ ಸರಳತೆ ಜನರ ಮನಮುಟ್ಟಿದವು.

ಅವರ 'ಸಾಖಿ'ಗಳು ಹಾಗೂ ಹಾಡುಗಳು ಅತ್ಯುನ್ನತ ಮಟ್ಟದ ಅಧ್ಯಾತ್ಮಯೋಗದಿಂದ ತುಂಬಿವೆ. ಅವುಗಳನ್ನು ವಿಶದೀಕರಿಸಲು ಕೆಲವು ಅನುವಾದಗಳನ್ನು ಮುಂದಿಡುತ್ತೇವೆ. ಮೆಕಾಲಿಫ್, ಟ್ಯಾಗೋರ್, ಅಂಡರ್‌ಹಿಲ್ ಮತ್ತಿತರರು ಅನುವಾದಿಸಿರುವ ಕಬೀರರ ಹಾಡುಗಳ ಅಭ್ಯಾಸ ಲಾಭದಾಯಕ.

ಅವರ ಸಾರ್ವತ್ರಿಕ ವಿಷಯವಾದ ಪ್ರೀತಿಯ ಸ್ವಭಾವ ಹಾಗೂ (ಪ್ರೇಯಸಿ ಬಯಸುವ) ಪ್ರೀತಿಪಾತ್ರರು ಬಯಸುವ ತ್ಯಾಗದ ಬಗ್ಗೆ ಮಾತನಾಡುತ್ತ ಕಬೀರ್ ಹೇಳುತ್ತಾರೆ :

ಇದು ಪ್ರೀತಿಯ ನೆಲೆ ; ಪ್ರಿಯ ಚಿಕ್ಕಮ್ಮನ ಮನೆಯಲ್ಲ.

ಯಾರು ತಲೆಯನ್ನು ಕತ್ತರಿಸಿ ನೆಲದ ಮೇಲಿಡುತ್ತಾರೋ ಅವರು ಸೇರಿಸಿಕೊಳ್ಳಲ್ಪಡುತ್ತಾರೆ.

ಅವನು ತಲೆಯನ್ನು ಕತ್ತರಿಸಿ ನೆಲದ ಮೇಲಿಟ್ಟು ನಂತರ ಕಾಲಡಿ ತುಳಿಯುತ್ತಾನೆ. ನೀನು ಅಂಥವರಲ್ಲೊಬ್ಬನಾಗಿದ್ದರೆ ಒಳಗೆ ಪ್ರವೇಶಿಸು ಎನ್ನುತ್ತಾರೆ ಕಬೀರ್.

ಪ್ರೀತಿ ತೋಟದಲ್ಲಿ ಬೆಳೆಯದು, ಮಾರುಕಟ್ಟೆಯಲ್ಲಿ ಮಾರದು, ದೊರೆಯಾಗಲೀ ಪ್ರಜೆಯಾಗಲಿ ಯಾರು ಇಷ್ಟಪಡುತ್ತಾರೋ ಅವರು ತಲೆಯನ್ನು ಕೊಟ್ಟು ಅದನ್ನು ಕೊಳ್ಳಲಿ.

ನಾನು ಬಟ್ಟಲಂಚಿನ ತುಂಬಾ ಪ್ರೀತಿಯನ್ನು ಕುಡಿದಿದ್ದೇನೆ. ಜ್ಞಾನಿಯಾದ ಶಿಕ್ಷಕ ಅದು ನನ್ನಲ್ಲಿ ವ್ಯಾಪಿಸುವಂತೆ ಮಾಡಿದ್ದಾನೆ.

ನಿನ್ನ ಪ್ರೀತಿ ಚಂದ್ರನ ಬಗ್ಗೆ ಚಕೋರನಿಗಿರುವಂತಿರಲಿ.

ಕತ್ತರಿಸಿದ ತಲೆ ನೆಲಕ್ಕುರುಳಿದರೂ ದೃಷ್ಟಿಮಾತ್ರ ಚಂದ್ರನಲ್ಲಿಯೇ ನೆಟ್ಟಿರುತ್ತದೆ.

ನೀರಿನ ಬಗ್ಗೆ ಮೀನಿನ ಪ್ರೀತಿ ಹರಿದು, ಸ್ವಲ್ಪವೇನಾದರೂ ಅರಿಕೆಯಾಯಿತೆಂದರೆ

ನೀರಿನಿಂದ ಅದು ಬೇರ್ಪಟ್ಟ ಕೂಡಲೇ ಜೀವ ನಿರ್ಗಮಿಸುತ್ತದೆ.

ಯಾವುದೇ ವರ್ಗ ಅಥವಾ ರಾಷ್ಟ್ರೀಯತೆಗೆ ಸೇರಿಸಲಿ, ಕಬೀರರ ಧರ್ಮ ಯಾರಿಗೂ ಬಾಗಿಲು ಮುಚ್ಚುವುದಿಲ್ಲ. ಪಂಡಿತ ವರ್ಗಕ್ಕೆ ಯಾವುದೇ ವಿಶೇಷ ಪ್ರೀತಿ ತೋರಲ್ಪಡುವುದಿಲ್ಲ. ಅಂತರಂಗವನ್ನು ನೋಡಲಾಗುತ್ತದೆ ಎನ್ನುವುದು ಸಂಕ್ಷಿಪ್ತ ದೈವಾಜ್ಞೆ, ಮಣಿಗಳನ್ನೆಣಿಸುವುದಲ್ಲ, ಜಟೆ ಬೆಳೆಸುವುದಲ್ಲ, ವಿಗ್ರಹಾರಾಧನೆಯೂ ಅಲ್ಲ, ಗಂಟೆ ಹೊಡೆಯುವುದಲ್ಲ ಯಾವ ತೀರ್ಥಯಾತ್ರೆ ಕೂಡ ಸಹಾಯ ಮಾಡುವುದಿಲ್ಲ. ಭಗವಂತ ಅಂತರಂಗದಲ್ಲೇ ನೆಲೆಸಿದ್ದಾನೆ. ನೀನು ಯಾವಾಗ ಅವನಿಗಾಗಿ ಚಡಪಡಿಸುತ್ತೀಯೋ, ಅವನ ವಿಯೋಗದಿಂದಾಗಿ ದುಃಖಿಸಿ ಅಳುತ್ತೀಯೋ ಆಗ ನಿನಗೆ ಜ್ಞಾನೋದಯವಾಗುತ್ತದೆ.

ಅವನು ಲಂಚ ಅಥವಾ ಯಾವುದೇ ದಾನ–ಧರ್ಮವನ್ನು ಸ್ವೀಕರಿಸುವುದಿಲ್ಲ. ನಿನ್ನ ಹೃದಯ ಎಲ್ಲಿಯವರೆಗೆ ಪ್ರಾಪಂಚಿಕ ವಸ್ತುಗಳ ಸುತ್ತ ಸುತ್ತುತ್ತಿರುತ್ತದೋ, ಅಲ್ಲಿಯವರೆಗೆ ಅವನು ನಿನ್ನನ್ನು ಒಂದು ಹೆಜ್ಜೆಯಷ್ಟೂ ತನ್ನ ಸಮೀಪಕ್ಕೆ ಬರಗೊಡುವುದಿಲ್ಲ.

ಹಾದಿ ನಡೆಯುವವರಿಗೆ ಕಬೀರ್ ಕಠಿಣ ಶಿಸ್ತಿನ ನಿಯಮ ವಿಧಿಸಿದರು. ಅವರು ನಮ್ಮ ಕಸುಬುಗಳ ಅರ್ಥಹೀನತೆಯನ್ನು ಹಾಗೂ ಉದ್ಯೋಗದ ಢೋಂಗಿತನದತ್ತ ಗುರಿಮಾಡಿ ತೋರುತ್ತಾರೆ. ನಮ್ಮ ಜೀವನದ ಕುರೂಪತೆ ಅವರಿಂದ ವಿಶದವಾಗಿ ಚಿತ್ರಿಸಲ್ಪಟ್ಟಿದೆ. ಪ್ರೀತಿಪಾತ್ರರನ್ನು ಪ್ರೀತಿಯಿಂದ ರಮಿಸುವುದು ಸುಲಭವಾಗಿ ತೋರಬಹುದು. ಆದರೂ ಅದೆಷ್ಟು ಕಷ್ಟ ಎಂದು ಉಪನಿಷತ್ತುಗಳು ಮತ್ತೆ ಮತ್ತೆ ಹೇಳಿರುವುದನ್ನೇ ಕಬೀರ್ ಹೇಳುತ್ತಾರೆ.

"ಪ್ರೀತಿಸಿದ ವ್ಯಕ್ತಿಯ ಬಳಿಗೊಯ್ಯುವ ಸಾಧನಗಳೆಲ್ಲ ಕಠಿಣ. ಅದು ಕತ್ತಿಯ ಅಲಗಿನಂತೆ...."

ಕಬೀರರಿಗೆ ಬೇಕಾಗಿರುವುದು, ನಿಮಗೆ ನೀವು ಸತ್ಯದಿಂದ ನಡೆದುಕೊಳ್ಳುವುದು ಅವರು ಹೇಳಿದರು:

"ನಾನು ಚಿತ್ತದ ಯೋಗಿ, ಇತರರು ಶರೀರಕ್ಕೆ ಸಂಬಂಧಿಸಿದವರು.

ಚಿತ್ತವನ್ನು ಯೋಗದಲ್ಲಿ ತೊಡಗಿಸುವುದರೊಂದಿಗೆ ನನ್ನ ಸ್ಥಿತಿ ಬದಲಾಗಿದೆ."

ಅವರು ತೋರಿದ ಹಾದಿ ಸರಳವಾಗಿದೆ. ಅದೆಂದರೆ "ನಾಮ ಜಪಿಸು, ಅವನನ್ನು ಪ್ರೀತಿಸು, ಸುಖ ಮತ್ತು ಸಂಪತ್ತು ಕೇವಲ ಕನಸುಗಳು: ಕಿಟ್ಟಕ್ಕು, ಹೊನ್ನಿಗೂ ಇರುವ ತಾರತಮ್ಯವನ್ನು ತಿಳಿ. ನಿನ್ನೊಳಗಿರುವ ದೈವತ್ವವನ್ನು ಅರ್ಥಮಾಡಿಕೊ. ಮಾಯೆಯ ಬಲೆಯ ಬಗ್ಗೆ ಎಚ್ಚರವಾಗಿರು. ಎಷ್ಟು ಸೂಕ್ಷ್ಮವಾಗಿ ಅದು ತೊಡಕಿನಲ್ಲಿ ಸಿಕ್ಕಿಸುತ್ತದೆ, ಇಂದ್ರಿಯಗಳನ್ನು ಉತ್ತೇಜಿಸುವುದರತ್ತ ನೀವು ಹೋಗಬಾರದು. ಪ್ರತಿ ದಿನವೂ ಅವನ ಸಾಮೀಪ್ಯಕ್ಕೆ ಸಾಗಿರಿ. ಅಹಂಕಾರವನ್ನು ಬಿಡಿ, ಮತ್ತು ಈ ಕ್ಷಣದಿಂದ ವಿನಮ್ರರಾಗಿರಿ. ಅವಕಾಶಗಳನ್ನು ಕಳೆದುಕೊಳ್ಳದಿರಿ.

ಮಣ್ಣು ಕುಂಬಾರನಿಗೆ ಏನು ಹೇಳಬೇಕೆಂದಿದೆ ಎಂದು ಕೇಳಿರಿ.

"ಮಣ್ಣು ಕುಂಬಾರನಿಗೆ ಹೇಳುತ್ತದೆ, ಯಾವ ಉದ್ದೇಶದಿಂದ ನೀನು ನನ್ನನ್ನು ನಾದುತ್ತಿರುವೆ? ನಾನು ನಿನ್ನನ್ನು ನಾದುವಂಥ ದಿನವೊಂದು ಬರುತ್ತದೆ."

ಈ ಸಾಲುಗಳು ಉಮರ್‌ಖಯ್ಯಾಮನ ಹೇಳಿಕೆಯನ್ನು ನಮಗೆ ನೆನಪಿಸುತ್ತವೆ. ಅವನು ಹೇಳುತ್ತಾನೆ :

"ಹಸಿಯ ಮಣ್ಣನ್ನು ತುಳಿಯುತ್ತಿರುವ ಕುಂಬಾರನನ್ನು ನಾನು ಗಮನಿಸುತ್ತಿದ್ದೆ: ನಾಶವಾದ ಅದರ ನಾಲಿಗೆಯಿಂದಲೇ ಅದು ಅಸ್ಪಷ್ಟವಾಗಿ ಗೊಣಗಿತು. ಮೆಲ್ಲಗೆ ತಮ್ಮ, ಮೆಲ್ಲಗೆ ಎಂದು ಪ್ರಾರ್ಥಿಸಿತು."

ಅನೇಕ ಕಡೆಗಳಲ್ಲಿ ಕಬೀರರು ಸೂಫಿಯ ಛಾಯೆಯ ಛಾಪು ಮೂಡಿಸಿದ್ದಾರೆ. ಅವರು ವಾಕ್ಪ್ರವಾಹ ಹಾಗೂ ಸ್ವತಂತ್ರ ಆಲೋಚನೆಗಳನ್ನು ಇಷ್ಟಪಡದ ಆಗಿನ ಆಳರಸ ಸಿಕಂದರ್ ಲೋದಿಯ ಕೈಗಳಿಂದ ಕಬೀರ್ ಗಡಿಪಾರುಗೊಳ್ಳಲು ಇದು ಕಾರಣವಾಯ್ತು.

ಘೋಷಿತ ಸತ್ಯ, ಯಾವುದೇ ಒಂದು ಮತದ ಸ್ವತ್ತಾಗಿತ್ತು ಅಥವಾ ಮುಂದೆ ಆಗಬಹುದು ಎಂಬ ವಾದವನ್ನೊಪ್ಪಲು ಕಬೀರ್ ನಿರಾಕರಿಸಿದರು. ಅದು ದೇವರ ಅನುಗ್ರಹದ ಫಲವೆಂದು ಅವರ ನಂಬಿಕೆ. ಖಾಯಿಲೆ ಬಿದ್ದಾಗ, ಅವರು ಚಿಕಿತ್ಸೆ ಪಡೆಯಲು ನಿರಾಕರಿಸಿದರು. ಅಂಥ ರೋಗಿಗೆ ಚಿಕಿತ್ಸೆ ನೀಡಬಲ್ಲವರು ಯಾರು? ಕಲಿತ ವೈದ್ಯರುಗಳಿಗೆ ವಿದಾಯ ಹೇಳುತ್ತ ಅವರು ಹೇಳಿದರು :

"ಓ ವೈದ್ಯ, ನಿನ್ನ ಮನೆಗೆ ಹೊರಡು. ನನ್ನ ವ್ಯಾಧಿ ನಿನ್ನಳವಿಗೆ ಮೀರಿದ್ದು. ಯಾರು ಈ ನೋವನ್ನು ಸೃಷ್ಟಿಸಿದ್ದಾನೋ ಅವನೇ ನನ್ನ ಒಳಿತಿನ ಬಗೆಗೂ ನೋಡುತ್ತಾನೆ."

ಇತ್ತೀಚೆಗೆ ಕಬೀರ್ ಅನೇಕ ಪಂಡಿತರ ವಿಶೇಷ ಅಧ್ಯಯನದ ಕೇಂದ್ರವಾಗಿದ್ದಾರೆ. ಆ ಹಿರಿಯ ಸಂತ ಭೇಟಿ ನೀಡಿದ ಸ್ಥಳಗಳಾದ ಮಘರ್ ಬೆನಾರಸ್ ಮತ್ತಿತರ ಕೇಂದ್ರ ಪ್ರಾಂತ್ಯಗಳಿಗೆ ವಿದ್ಯಾರ್ಥಿಗಳು ಭೇಟಿ ನೀಡುವುದನ್ನು ಕಾಣುವುದು ಅಚ್ಚರಿಯ ವಿಷಯವೇನಲ್ಲ. ಈ ಅಧ್ಯಯನದ ಒಂದು ಲಾಭದಾಯಕ ವಿಷಯವೆಂದರೆ, ವೇದಾಂತ ವೈಷ್ಣವ ಧರ್ಮ ಹಾಗೂ ಸೂಫಿ ಪಂಥದ ಆಲೋಚನಾ ದೃಷ್ಟಿಯನ್ನು ಕಬೀರರ ತತ್ವಜ್ಞಾನದೊಂದಿಗೆ ಹೋಲಿಸುವುದೇ ಆಗಿದೆ. ಹೋಲಿಕೆಯ ಅನೇಕ ಅಂಶಗಳಿವೆ ಹಾಗೂ ವಿವಿಧ ಧರ್ಮಗಳ ಪ್ರಮುಖ ತತ್ವಗಳ ಸಾದ್ಯಂತ ಗುಣಗ್ರಹಣ ಭಾರತದಲ್ಲಿ ಹೋರಾಟಕ್ಕಿಳಿದ ಪಂಗಡಗಳ ನಡುವೆ ಉತ್ತಮ ಅರಿವು ಮೂಡಿಸುವತ್ತ ಕೊಂಡೊಯ್ಯುತ್ತದೆ. ನಿಜವಾದ ಧರ್ಮ ಅರ್ಥ ಮಾಡಿಕೊಳ್ಳುವುದನ್ನೊಳಗೊಂಡಿದೆಯೇ ಹೊರತು ಕೇವಲ ಮತಾಚರಣೆಗಳು ಹಾಗೂ ಸಂಸ್ಕಾರಗಳಲ್ಲಿಲ್ಲ. "ಯಾರ ಹೃದಯದಲ್ಲಿ ಭಗವಂತ ನೆಲೆಸಿದ್ದಾನೋ

ಆತ ಅತ್ಯುತ್ತಮ ಪೂಜೆ ಸಲ್ಲಿಸುತ್ತಾನೆ" ಎಂದು ಹೇಳುತ್ತಾರೆ ಕಬೀರ್.

ನಿಜವಾದ ಭಕ್ತಿಯ (ಸ್ವರೂಪ) ಚೈತನ್ಯದಲ್ಲಿ ಧರ್ಮಕ್ಕೊಂದು ತಾರ್ಕಿಕ ಮಾರ್ಗವಿರಬೇಕೆಂದು ಒತ್ತಿ ಹೇಳಿದರು ಕಬೀರ್. ಕಂದಾಚಾರಗಳ ಬಲವಾದ ಹಿಡಿತವಿದ್ದ ಬನಾರಸಿನಲ್ಲೇ ಕಂದಾಚಾರಗಳ ವಿರುದ್ಧ ನಿರ್ಭೀತಿಯಿಂದ ಹೋರಾಡಿದರು. ಕಬೀರ್ ಸಿಂಹವನ್ನು ಅದರ ಗುಹೆಯಲ್ಲೇ ಕಟ್ಟಿ ಹಾಕಿದರು. ಅನೇಕ ವೇಳೆ ಅವರನ್ನು ಘಾಸಿಗೊಳಿಸಲು ಅವರ ಮೇಲೆ ಅನೇಕ ಕುಯುಕ್ತಿಗಳನ್ನು ಪ್ರಯೋಗಿಸಲಾಗಿತ್ತು. ಆದರೆ ಅವರು ಎಲ್ಲ ಆಮಿಷಗಳನ್ನು ಮೀರಿ ನಿಂತರು. ಸನ್ಮಾರ್ಗದಿಂದ ಅವರನ್ನು ವಿಮುಖಗೊಳಿಸಲು ಅತ್ಯಂತ ಸುಂದರಳಾದ ವೇಶ್ಯಾಂಗನೆಯೊಬ್ಬಳನ್ನು ಅವರ ಬಳಿ ಕಳಿಸಲಾಯ್ತು. ಕಬೀರರ ಕಾಣ್ಕೆಯೇ ಈ ವೇಶ್ಯಾಂಗನೆಯನ್ನು ಪರಿವರ್ತಿಸಿ ಅವಳನ್ನು "ಉನ್ನತ ಪ್ರೇಮದ ದೀಕ್ಷಾವ್ರತಿ"ಯನ್ನಾಗಿ ಮಾಡಿತು!

* * * *

೫. ಛತ್ರಪತಿ ಶಿವಾಜಿ

ಪ್ರೊ. ಎಸ್.ಆರ್. ಶರ್ಮ

ಮಹಾರಾಷ್ಟ್ರದ ಮಹಾ ವಿಮೋಚಕ ಶಿವಾಜಿ, ಶಿವನೇರಿಯಲ್ಲಿ ೧೬೩೦ರ ಏಪ್ರಿಲ್ ನಾಲ್ಕರಂದು ಹುಟ್ಟಿದನು. (೪-೪-೧೬೩೦). ೧೬೭೪ರ ಜೂನ್ ೬ ರಂದು ರಾಯಗಢದಲ್ಲಿ ಅವನು ಛತ್ರಪತಿಯಾಗಿ ಪಟ್ಟಾಭಿಷಿಕ್ತನಾದನು ; ಹಾಗೂ ತನ್ನ ೫೧ನೇ ಹುಟ್ಟುಹಬ್ಬವಾದ ೧೬೮೦ರ ಏಪ್ರಿಲ್ ೪ ರಂದು (೪-೪-೧೬೮೦) ತನ್ನ ರಾಜಧಾನಿ ರಾಯಗಢದಲ್ಲಿ ಮೃತನಾದನು.

೫೦ ವರ್ಷಗಳ ಅವನ ಮಹತ್ವದ ಜೀವನ ಅತ್ಯಂತ ನಿರುತ್ಸಾಹದಾಯಕ ಪರಿಸ್ಥಿತಿಗಳಲ್ಲೂ ಜೀವನದಲ್ಲಿ ಹೇಗೆ ಸ್ವಾತಂತ್ರ್ಯ ಗಳಿಸಬಹುದೆಂದು ತೋರಿಸಿಕೊಟ್ಟಿದೆ.

ಬಿಜಾಪುರದ ಆದಿಲ್‌ಷಾಹಿ, ಗೋಲ್ಕೊಂಡದ ಕುತುಬ್‌ಷಾಹಿ ಹಾಗೂ ಮೊಘಲರು ಮುಂತಾಗಿ, ಮೂರು ಮುಸ್ಲಿಂ ಶಕ್ತಿಗಳ ನಡುವೆ ಮಹಾರಾಷ್ಟ್ರ ಭಾಗವಾಗಿ ಹೋಗಿತ್ತು. ಶಿವಾಜಿಯ ತಂದೆ ಷಹಜಿ ಜೀವನವಿಡೀ ಈ ಮೂವರ ನಡುವೆ ಒಬ್ಬರಲ್ಲದಿದ್ದರೆ ಮತ್ತೊಬ್ಬರ ಸೇವೆಯಲ್ಲಿ ನಿರತನಾಗಿದ್ದರು. ಜನ ಬಡವರು, ಅನಕ್ಷರಸ್ಥರು ಹಾಗೂ ಅವರ ಸ್ವಾಭಾವಿಕ ಮುಂದಾಳುಗಳಾದ ಜಮೀನ್‌ದಾರರು ಪರಸ್ಪರ ತಮ್ಮೊಳಗೇ ಜಗಳವಾಡುತ್ತಿದ್ದರು. ಅವರಲ್ಲಿ ಹೆಚ್ಚಿನ ಮಹತ್ವಾಕಾಂಕ್ಷೆಯುಳ್ಳವರು ಸುಲ್ತಾನರ ಕೈಕೆಳಗೆ ಸೈನಿಕರಾಗಿ ನೌಕರಿ ಹಿಡಿಯುತ್ತಿದ್ದರು. ಅಲ್ಲಾವುದ್ದೀನ್ ಖಿಲ್ಜಿ ದೇವಗಿರಿ(ದೌಲತಾಬಾದ್)ಯನ್ನು ಗೆದ್ದು, ಮಲ್ಲಿಕ್ ಕಾಫರ್ ದಖ್ಖನ್ ಹಾಗೂ ದಕ್ಷಿಣ ಭಾರತಕ್ಕೆ ಸೇನೆ ನುಗ್ಗಿಸಿದ ಮೇಲೆ ಮೂರು ಶತಮಾನಗಳವರೆಗೂ ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಧಾರ್ಮಿಕ ಸ್ವಾತಂತ್ರ್ಯವಿರಲಿಲ್ಲ.

ಅವರ ದೇವರುಗಳೂ ಅಸಹಾಯಕರಾಗಿ ಕಾಣುತ್ತಿದ್ದುದರಿಂದ ಸಾಮಾನ್ಯ ಪ್ರಜೆಗಳೂ ಹತಾಶರಾಗಿದ್ದರು. "ಕಲ್ಲಿನ ದೇವರುಗಳು ತುರುಕರಿಂದ ತುಂಡರಿಸಲ್ಪಟ್ಟು ನದಿಗಳಿಗೆಸೆಯಲ್ಪಟ್ಟರೂ ಅವರು ಅಳುತ್ತಲೂ ಇರಲಿಲ್ಲ" ಎಂದು ಸಂತ ನಾಮದೇವ ಹೇಳಿದರು. "ಯಾತ್ರಾ ಸ್ಥಳಗಳು ನಾಶಮಾಡಲ್ಪಟ್ಟಿವೆ. ಬ್ರಾಹ್ಮಣರ ಮನೆಗಳು ಅಪವಿತ್ರಗೊಂಡಿವೆ, ಇಡೀ ಭೂಮಿಯೇ ಅಲುಗಾಡಿದೆ, ಧರ್ಮ ನಾಶವಾಗಿದೆ" ಎಂದು ಘೋಷಿಸಿದರು ಸಮರ್ಥ ರಾಮದಾಸರು.

ಇಷ್ಟಾದರೂ ಭರವಸೆಯ ಕಿರಣವೊಂದಿತ್ತು – ಮರಾಠರು. ಅವರು ಪರಾಕ್ರಮಿಗಳು ಹಾಗೂ ಧಾರ್ಮಿಕ ಪ್ರವೃತ್ತಿಯ ಜನಗಳು. ಅವರ ಪೀಳಿಗೆಯ ನಂತರದ ಪೀಳಿಗೆಗಳಲ್ಲಿ ಯೋಧರು ಹಾಗೂ ಸಂತರು ಹುಟ್ಟಿದರು. ಹಿಂದೆ ಚೈನಾದ ಯಾತ್ರಿಕ ಹುಯೆನ್‌ತ್ಸಾಂಗ್ ದಖ್ಖನ್ನಿನ ಜನರನ್ನು ಸತ್ಯಸಂಧರು ಹಾಗೂ ಧೈರ್ಯಶಾಲಿ ಜನಗಳೆಂದು ವರ್ಣಿಸಿದ್ದ. “ಅವರಿಗೆ ಸೇವೆ ಮಾಡಿದವನು ಅವರ ಕೃತಜ್ಞತೆಯನ್ನು ಎದುರು ನೋಡಬಹುದಿತ್ತು. ಆದರೆ ಅವರನ್ನು ಕೆಣಕಿದವನು ಅವರ ದ್ವೇಷದಿಂದ ತಪ್ಪಿಸಿಕೊಳ್ಳಲಾಗುತ್ತಿರಲಿಲ್ಲ. ಅವರಿಗೆ ಅಪಮಾನ ಮಾಡಿದವರು, ಆ ಅಪಮಾನವನ್ನು ತೊಡೆದುಹಾಕಲು ಅವರ ಜೀವವನ್ನೇ ಅಪಾಯಕ್ಕೆ ಸಿಲುಕಿಸಿಕೊಳ್ಳಬೇಕಾಗುತ್ತಿತ್ತು. ಯಾರಾದರೂ ಕಷ್ಟದಲ್ಲಿ ಅವರ ಬಳಿ ಹೋದರೆ, ಅಂಥವರಿಗೆ ಸಹಾಯ ನೀಡಲು ಅವರು ತಮ್ಮನ್ನು ತಾವು ಮರೆಯುತ್ತಿದ್ದರು. ತಮಗಾದ ಅವಮಾನಕ್ಕೆ ಸೇಡುತೀರಿಸಿಕೊಳ್ಳುವ ಮುನ್ನ ತಮ್ಮ ಶತ್ರುವಿಗೂ ಎಚ್ಚರಿಕೆ ನೀಡಲು ಅವರು ಮರೆಯುತ್ತಿರಲಿಲ್ಲ. ರಣರಂಗದಲ್ಲಿ ಅವರು ಓಡಿ ಹೋಗುವವರ ಬೆನ್ನಟ್ಟುತ್ತಾರೆ. ಆದರೆ ಶರಣಾಗತರಾದವರನ್ನು ಕೊಲ್ಲುವುದಿಲ್ಲ.” ನಿಜಕ್ಕೂ ಉದಾತ್ತ ಹೊಗಳಿಕೆ, ಆದರೆ ಅತ್ಯಂತ ಅರ್ಹವಾದುದು. ಪರಕೀಯರ ಆಕ್ರಮಣದ ವಿರುದ್ಧ ನಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮೊದಲ ಹೋರಾಟಗಾರ, ಚಂದ್ರಗುಪ್ತ ಮೌರ್ಯನ ಕಾಲದಿಂದಲೂ, ಇದು ಯಾವಾಗಲೂ ಭಾರತೀಯರ ಚಾರಿತ್ರ್ಯವಾಗಿದೆ ಎಂದು ಅನೇಕ ವಿದೇಶೀ ಯಾತ್ರಿಕರ ಕಥನಗಳಿಂದ ನಾವು ಹೇಳಬಹುದು.

ಜ್ಞಾನೇಶ್ವರರಿಂದ ರಾಮದಾಸರವರೆಗೂ ಮಹಾರಾಷ್ಟ್ರದ ಪ್ರಖ್ಯಾತ ಸಂತರು ಮರಾಠರು ಧರ್ಮಶ್ರದ್ಧೆಗೆ ಸಾಕ್ಷಿಯಾಗಿದ್ದಾರೆ. ಅಲ್ಲಾವುದ್ದೀನ್ ಖಿಲ್ಜಿ ದಖ್ಖನ್ನಿನ ಆಕ್ರಮಣ ಮಾಡುವ ಮೊದಲು, ಜ್ಞಾನೇಶ್ವರ ತನ್ನ ಪ್ರಸಿದ್ಧ ಪುಸ್ತಕ ಜ್ಞಾನೇಶ್ವರಿಯನ್ನು ಬರೆದರು. ಅದು ಆ ದಿನಗಳ ಜನರ ಆಡು ಭಾಷೆಯಲ್ಲಿ ಭಗವದ್ಗೀತೆಯ ಮೇಲೆ ಬರೆದ. ಉತ್ಕೃಷ್ಟ ಭಾಷ್ಯ. ಅರ್ಜುನ ಖಿನ್ನನಾಗಿದ್ದ, ಯುದ್ಧ ಬೇಕಿರಲಿಲ್ಲ. ಆದರೆ ಕ್ಷತ್ರಿಯನಾಗಿ ತನ್ನ ಕರ್ತವ್ಯ ನಿರ್ವಹಿಸುವಂತೆ ಶ್ರೀಕೃಷ್ಣ ಅವನನ್ನು ಪ್ರೋತ್ಸಾಹಿಸಿದ. ಗೀತೆ ಪ್ರತಿಯೊಬ್ಬರಿಗೂ ಚೈತನ್ಯದ ಮೂಲವಾಗಿದೆ. “ಅನುಮಾನಗಳು ನನ್ನನ್ನು ಕಾಡಿದಾಗ, ನಿರಾಶೆ ನನ್ನ ಮುಖವನ್ನು ದಿಟ್ಟಿಸಿದಾಗ, ದಿಗಂತದಲ್ಲಿ ಭರವಸೆಯ ಕಿರಣವೊಂದು ಕಾಣದಾದಾಗ ನಾನು ಭಗವದ್ಗೀತೆಯ ಮೊರೆ ಹೋಗುತ್ತೇನೆ. ಹಾಗೂ ನನ್ನನ್ನು ಸಂತೈಸುವಂಥ ಶ್ಲೋಕವೊಂದನ್ನು ಕಾಣುತ್ತೇನೆ. ತಕ್ಷಣವೇ ಉಕ್ಕಿ ಬರುವ ದುಃಖದ ನಡುವೆಯೂ ಮುಗುಳ್ನಗುತ್ತೇನೆ" ಎಂದರು ಮಹಾತ್ಮ ಗಾಂಧೀಜಿ.

ಸುಂದರ ಹಾಗೂ ಕಾವ್ಯಮಯ ಶೈಲಿಯಿಂದ ಜ್ಞಾನೇಶ್ವರ ಗೀತೆಯನ್ನು ಅತ್ಯಂತ ಜನಪ್ರಿಯಗೊಳಿಸಿದರು. ಅದು ಕೇವಲ ಮಹಾರಾಷ್ಟ್ರದಲ್ಲಷ್ಟೇ ಅಲ್ಲ, ಭಾರತದಲ್ಲೆಡೆ ಸಾವಿರಾರು ಜನ ಇಂದಿಗೂ ಓದಿ ಸಂತೋಷಪಟ್ಟು, ಮೆಚ್ಚಿದ್ದಾರೆ.

ಭಾರತ ಹಾಗೂ ಯೂರೋಪಿನ ವಿವಿಧ ಭಾಷೆಗಳಿಗೆ ಅದು ಅನುವಾದಗೊಂಡಿದೆ. ಮಹಾರಾಷ್ಟ್ರ ೬೦೦ ವರ್ಷಗಳ ಹಿಂದೆಯೇ ಅದರಿಂದ ಆಕರ್ಷಿಸಲ್ಪಟ್ಟು, ಪ್ರೋತ್ಸಾಹಗೊಂಡಿರುವುದರಲ್ಲಿ ಅಚ್ಚರಿ ಏನಿಲ್ಲ. ಈ ಅಮರ ಕೃತಿಯನ್ನು ಪ್ರಾರಂಭಿಸಿದಾಗ ಜ್ಞಾನೇಶ್ವರನಿಗಿನ್ನೂ ಕೇವಲ ೧೬ ವರ್ಷ ವಯಸ್ಸು.

ಅವನ ಕಾಲದಲ್ಲಿ ಜೀವಿಸಿದ್ದ ಅಥವಾ ನಾಲ್ಕು ಶತಮಾನಗಳಿಂದ ಅವನನ್ನು ಅನುಸರಿಸಿದ ಸಂತರು (೧೩೦೦–೧೭೦೦) ಎಲ್ಲ ವರ್ಗಗಳಿಂದ ಬಂದವರು. ನಾಮದೇವ ಒಬ್ಬ ದರ್ಜಿ, ಜನಾಬಾಯಿ ಅವನ ಕೆಲಸದಾಳು; ಗೋರ ಒಬ್ಬ ಕುಂಬಾರ; ಸೇವ ಒಬ್ಬ ಕ್ಷೌರಿಕ ; ಸಾವಂತ ಒಬ್ಬ ಮಾಲಿ ; ನರಹರಿ ಒಬ್ಬ ಚಿನಿವಾರ ; ಹಾಗೂ ಚೋಖ ಒಬ್ಬ ಕಸ ಗುಡಿಸುವ ಹರಿಜನ. ಅವರೆಲ್ಲ ಸೇರಿ ಭಕ್ತಿಯ ಪ್ರಜಾಪ್ರಭುತ್ವ ಒಂದನ್ನು ನಿರ್ಮಿಸಿಕೊಂಡರು.

ನಂತರ ಬಂದವರು ಏಕನಾಥ ತುಕಾರಾಮ್, ಒಬ್ಬ ರೈತ ವರ್ತಕ. ಅವನ ಅಭಂಗ ಗೀತೆಗಳು ಕೇವಲ ದೇವಾಲಯಗಳಲ್ಲಿ ಸಹ ಒಂದೇ ರೀತಿಯಲ್ಲಿ ಇಂದಿಗೂ ಜಪಿಸಲ್ಪಡುತ್ತವೆ. ಕೆಲಸಗಾರರು ಕೆಲಸಕ್ಕೆ ಹೋಗುತ್ತಾ ಅದನ್ನು ಹಾಡುತ್ತಾರೆ. ಅಥವಾ ಆಯಾಸಗೊಂಡು ಮಧ್ಯಾಹ್ನ ಮರದ ಕೆಳಗೆ ಮಲಗಿದಾಗ ಹಾಡುತ್ತಾ ಹೆಚ್ಚಿನ ನೆಮ್ಮದಿ ಕಾಣುತ್ತಾರೆ.

ರಾಮದಾಸ್ ಕೇವಲ ಹನ್ನೆರಡು ವರ್ಷದವನಿದ್ದಾಗ ಮನೆ ಬಿಟ್ಟು ಹೊರಟನು. ಹಿಮಾಲಯದವರೆಗೂ ಹಿಂದುಸ್ಥಾನದಲ್ಲೆಲ್ಲಾ ಸಂಚರಿಸಿದನು. ಅವನದು ಕಾಲ್ನಡಿಗೆಯಲ್ಲಿ ದೇಶಯಾತ್ರೆ – ಒಂದು ‘ಪಾದ–ಯಾತ್ರೆ’. ವಿಶಿಷ್ಟವಾಗಿ ಮಹಾರಾಷ್ಟ್ರದಲ್ಲಿ ಜನ ಎಷ್ಟು ದುಃಖಿಗಳೆಂದು ನೋಡಿದನು. ಅವನು ಕೇವಲ ಸುಮ್ಮನೆ ಕುಳಿತು ತಪಸ್ಸು ಮಾಡುತ್ತಿರಲಿಲ್ಲ. ಮಠಗಳಲ್ಲಿ ಶಿಷ್ಯರನ್ನು, ಅನುಯಾಯಿಗಳನ್ನು ಸಂಘಟಿಸಿದ. ಜಡತ್ವದಿಂದವರನ್ನು ಎಚ್ಚರಿಸಿದ. ಹಿರಿಯ ಕಾರ್ಯಗಳಿಗಾಗಿ ಅವರನ್ನು ಪ್ರಚೋದಿಸಿದ. ‘ಜ್ಞಾನೇಶ್ವರಿ’ಯಂತೆ ಅವನ ‘ದಾಸಬೋಧ’ ಕೂಡ ಸ್ಫೂರ್ತಿದಾಯಕ ಪುಸ್ತಕ. ಅವನ ‘ಮನಾಚೆ ಶ್ಲೋಕಗಳು’ (ಚಿತ್ತಕ್ಕೆ ಸ್ವ–ಸಲಹೆ ("Self advice to the Mind") ಮಹಾರಾಷ್ಟ್ರದ ಶಾಲೆಗಳಲ್ಲಿ ಇಂದಿಗೂ ಮಕ್ಕಳು ಮೊಟ್ಟಮೊದಲಿಗೆ ಕಲಿಯುವಂಥದು. ಅವನ ಸುಂದರ ಪದ್ಯ ‘ಆನಂದ–ವನ–ಭುವನ’, ಅವನ ಕಾಲದಲ್ಲಿ ಮಹಾರಾಷ್ಟ್ರದ ಆಸೆ, ಆಕಾಂಕ್ಷೆ ಏನಿತ್ತು ಎಂಬುದರ ಮನಮೋಹಕ ವರ್ಣನೆಯನ್ನು ನೀಡುತ್ತದೆ. ಬಂಧನದಿಂದ ಮುಕ್ತಿ ಹೊಂದಲು ಜನರು ದೇವರಲ್ಲಿಟ್ಟ ತೀವ್ರ ನಂಬಿಕೆಯನ್ನು ಪ್ರತಿಫಲಿಸುತ್ತದೆ.

ಶಿವಾಜಿಯನ್ನು ಪೂನಾದಲ್ಲಿ ಅವನ ತಾಯಿ ಜೀಜಾಬಾಯಿ ಹಾಗೂ ಗುರು ದಾದಾಜಿಯ ವಶದಲ್ಲಿ ಅವನ ತಂದೆ ಬಿಟ್ಟಾಗ ಶಿವಾಜಿಗಿನ್ನೂ ಹನ್ನೆರಡು ವರ್ಷ. ಷಹಜಿ ದೂರ ದಕ್ಷಿಣದ ತನ್ನ ಸೇನಾ ದಂಡಯಾತ್ರೆಗಳಲ್ಲಿ ತೀವ್ರ ಮಗ್ನನಾಗಿದ್ದ.

ಇವು ಬೆಲೆ ಬಾಳುವ (ಅಮೂಲ್ಯ) ಜಹಗೀರುಗಳಾದ ವೆಲ್ಲೂರು, ಜಿಂಜಿ, ತಂಜಾವೂರು, ಬೆಂಗಳೂರು ಇತ್ಯಾದಿಗಳನ್ನು ವಶಪಡಿಸಿಕೊಳ್ಳುವುದರಲ್ಲಿ ಪರಿಣಮಿಸಿತು. ದಖ್ಖನ್ನಿನ ಅವರ ಮನೆಗಳು ಔರಂಗಜೇಬನ ಸೇನೆಯಿಂದ ನಾಶಗೊಂಡಾಗ ಈ ಜಹಗೀರುಗಳು ಮರಾಠರಿಗೆ ಸುರಕ್ಷಿತ ಆಶ್ರಯತಾಣಗಳಾಗುತ್ತಿದ್ದವು.

ಈ ಮಧ್ಯೆ ಬಾಲಕ ಶಿವಾಜಿ ಪೂನಾದಲ್ಲಿ ನಂಬಿಕೆಯ ಹಾಗೂ ದಕ್ಷ ವ್ಯವಸ್ಥಾಪಕ ದಾದಾಜಿಯ ಬಳಿ ಬೆಳೆಯುತ್ತಿದ್ದ. ಶಿವಾಜಿ ಆಡಳಿತದ ಮೊದಲ ಪಾಠಗಳನ್ನು ತನ್ನ ಕರ್ತವ್ಯನಿರತ ಗುರು ದಾದಾಜಿಯಿಂದ ಕಲಿತ. ತನ್ನ ಸುಸಂಸ್ಕೃತ ತಾಯಿಯಿಂದ, ರಾಮಾಯಣ ಮಹಾಭಾರತದ ಸತ್ವವನ್ನು ಮೈಗೂಡಿಸಿಕೊಂಡ. ಜೀಜಾಬಾಯಿ ಕಥೆ ಹೇಳುತ್ತಾ ಹೋದಂತೆ, ದಖ್ಖನಿನಲ್ಲೇ ರಾಕ್ಷಸರೆದುರು ಶ್ರೀರಾಮಚಂದ್ರನ ಸಾಹಸಕಾರ್ಯಗಳು ಹಾಗೂ ರಾವಣನ (ಕೆಡಕಿನ ಒಂದು ಅವತಾರ) ವಿರುದ್ಧ ಅವನ ಯುದ್ಧಗಳು, ಬಾಲಕ ಶಿವಾಜಿಯನ್ನು ರೋಮಾಂಚನಗೊಳಿಸುತ್ತಿದ್ದವು. ಎಲ್ಲಕ್ಕಿಂತ ಹೆಚ್ಚಾಗಿ ಬಾಲಕರಾದ ಕುಶ–ಲವರ ವೀರ ಸಾಹಸಗಳನ್ನು ಅನುಕರಿಸಲು ಅವನು ಸ್ಫೂರ್ತಿಗೊಳ್ಳುತ್ತಿದ್ದ.

ಸಂತರ ಹಾಡುಗಳೊಂದಿಗೆ ಸೇರಿದ ಜನರ ದುಃಖಭರಿತ ಕೂಗು ವಾತಾವರಣದಲ್ಲಿ ಮೊಳಗುತ್ತಿತ್ತು. ಅವುಗಳು ಸ್ಫೂರ್ತಿಗೊಂಡ ಶಿವಾಜಿಯಲ್ಲಿ ತನ್ನ ತಾಯ್ನಾಡು 'ಸೀತೆ'ಯನ್ನು ರಾವಣನ (ಮಹಾರಾಷ್ಟ್ರವನ್ನು ದಾಸ್ಯದಲ್ಲಿ ಹಿಡಿದವರ) ಹಿಡಿತದಿಂದ ಸಂರಕ್ಷಿಸುವ ಚಡಪಡಿಕೆಯ ಆಸೆಯನ್ನುಂಟುಮಾಡಿದವು. "ಆನಂದ–ವನ–ಭುವನ"ದ ಚಿತ್ರ, ನಂತರ ಅವನಲ್ಲಿ ತನ್ನ ಕಾರ್ಯಕ್ಕೆ ಆದರ್ಶವೊಂದನ್ನು ಒದಗಿಸಿತು. ಸಮರ್ಥ (ಶಕ್ತಿಶಾಲಿ) ರಾಮದಾಸರಿಂದ ಸ್ಥಾಪಿಸಲ್ಪಟ್ಟ ಮಠಗಳು ಆಧ್ಯಾತ್ಮಿಕ ಚಟುವಟಿಕೆಗಳ ಕೇಂದ್ರಗಳಾಗಿ ಸ್ಫೂರ್ತಿಯ ಸೆಲೆಗಳಾದವು. ಶಿವಾಜಿ ತನ್ನ ನೆರೆಯ ಕೋಟೆಗಳನ್ನು ಸೆರೆಹಿಡಿದು, ರಾಜಕೀಯ ಸ್ವಾತಂತ್ರ್ಯದ ಪ್ರಬಲ ಸ್ಥಾನವನ್ನಾಗಿ ಮಾಡಬೇಕೆಂದು ಹಂಬಲಿಸುತ್ತಿದ್ದ. ಕಾಲಕ್ರಮೇಣ ಅವನು ಕಂಡ ಕನಸೆಲ್ಲವನ್ನೂ ನೆರವೇರಿಸಿಕೊಂಡ.

ಶಿವಾಜಿ ಶೀಘ್ರವೇ ತನ್ನ ಸುತ್ತ ತರುಣರಾದ ತಾನಾಜಿ (ಸಿಂಹಗಢದ ಕೀರ್ತಿ), ಬಾಜಿ ದೇಶಪಾಂಡೆ (ಪವನಖಂಡದ ಯೋಧ) ಹಾಗೂ ಮುರಾರ್ ಬಾಜಿ (ಪುರಂದರದ ವಿಮೋಚಕ) ಮುಂತಾದವರನ್ನು ಒಟ್ಟುಗೂಡಿಸಿದ. ಮಹಾರಾಷ್ಟ್ರ ಉಳಿಯಲೆಂದು ಎಲ್ಲರೂ ತಮ್ಮನ್ನು ತಾವು ಬಲಿದಾನವಾಗಿಸಿಕೊಂಡರು. ಸಾವಿರಾರು ಮಂದಿ ತಮ್ಮ ಪಿತೃಗಳ ಭಸ್ಮಕ್ಕಾಗಿ ಮತ್ತವರ ದೇವರ ದೇವಾಲಯಗಳಿಗಾಗಿ, ಜೀವತೆತ್ತರು. ಅವರ ಸಾಹಸ ಕಾರ್ಯಗಳನ್ನು ದೇಶದ ತುಂಬೆಲ್ಲಾ 'ಪೊವಾಡಾ'ಗಳೆಂದು ಕರೆಯುವ ಸ್ಫೂರ್ತಿಯುತ ಹಾಡುಗಳ ಮೂಲಕ ಆಚರಿಸಲಾಯ್ತು.

ಉದಾಹರಣೆಯೊಂದನ್ನು ಅನುವಾದದ ಮೂಲಕ ಇಲ್ಲಿ ಹೇಳಬಹುದು. ಇದು ತಾನಾಜಿಯ ಹೆಸರಾಂತ ಲಾವಣಿಯ ಕೇವಲ ಒಂದು ತುಣುಕು–

ಹೇ ವೀರ ಮರಾಠರೇ ಕಿವಿಗೊಡಿ
ಗುಂಪುಕೇಳಲು ತಾನಾಜಿಯ ಸಾಹಸ ಕಾರ್ಯಗಳನ್ನು
ಇಡೀ ನಿಮ್ಮ ವಿಶಾಲ ನಾಡಿನಲ್ಲಿ
ಅಂಥ ಮತ್ತೊಬ್ಬನನ್ನು ಎಲ್ಲಿಂದ ಒದಗಿಸಬಹುದು?
ಇಪ್ಪತ್ತೇಳು ಕೋಟೆಗಳೆತ್ತರ
ಜಯಶಾಲಿಯಾದ ಅವನ ಖಡ್ಗ ಝಳಪಿಸಿತು.
ಕಬ್ಬಿಣದ ವರ್ಷಗಳು ಹಿಂದುರುಳಿದವು.
ಹೊನ್ನಯುಗವನು ಮರಳಿ ತಂದಿರಿಸಿವೆ ಅವನ ಖ್ಯಾತಿ
ಈ ಹಾಡ ನೀ ಯಾವಾಗ ಹಾಡುವೆಯೋ ಹಾಗು ಕೇಳುವೆಯೋ
ನಿನ್ನ ಪಾಪಗಳು ದೂರಾಗಿ, ಸ್ವರ್ಗ ಬಳಿಸಾರುವುದು ।

ಪ್ರತಾಪಗಢದಲ್ಲಿ ಅಫಜಲ್ ಖಾನನನ್ನು ಪರಾಭವಗೊಳಿಸಿದ್ದು (ಆ ಸ್ಥಳದೆದುರು ರಾಷ್ಟ್ರೀಯ ಸ್ಮಾರಕವೊಂದು ಸ್ಥಾಪಿತವಾಗಿದೆ). ಆಗ್ರಾಕ್ಕೆ ಅವನ ಭೇಟಿ (ಸಿಂಹವನ್ನು ಅದರ ಗುಹೆಯಲ್ಲೇ ಎದುರಿಸುವ) ಅಲ್ಲಿಂದ ಅವನ ಸಾಹಸಮಯ ಹಿಂತಿರುಗುವಿಕೆ ಹಾಗೂ ಸೂರತ್ ಮೇಲೆ ಅವನ ಚಾರಿತ್ರಿಕ ದಾಳಿ ಮುಂತಾದ ಸ್ವತಃ ಶಿವಾಜಿಯ ಸಾಹಸಗಳ ಬಗ್ಗೆ ನಾವು ವಿವರಿಸಬೇಕಿಲ್ಲ. "ಶಿವಾಜಿ ತಾನು ವೈಯಕ್ತಿಕವಾಗಿ ಆಂಗ್ಲರಿಗೆ ಅಥವಾ ಇತರ ವರ್ತಕರಿಗೆ ಕೆಡಕು ಮಾಡಲು ಬಂದಿಲ್ಲ. ಕೇವಲ ಔರಂಗ ಜೇಬನ (ಹಿರಿಯ ಮೊಘಲನ) ಮೇಲೆ ಸೇಡು ತೀರಿಸಿಕೊಳ್ಳಬೇಕು. ಏಕೆಂದರೆ ಅವನು ತನ್ನ ದೇಶಕ್ಕೆ ಮುತ್ತಿಗೆ ಹಾಕಿದ..." ಎಂಬ ಮುಂಬಯಿಯ ಇಂಗ್ಲೀಷ್ ಫ್ಯಾಕ್ಟರಿ ದಾಖಲೆಯ ಪ್ರಕಾರ, ಈಸ್ಟ್ ಇಂಡಿಯಾ ಕಂಪೆನಿಯ ಕೆಲಸಗಾರ ಸೂರತ್‌ನ ನಿವಾಸಿ ಶ್ರೀ ಆಂಟೋನಿ ಸ್ಮಿತ್‌ನ ಹೇಳಿಕೆ ಆಸಕ್ತಿಯುತವಾಗಿದೆ.

ಒಟ್ಟಿನಲ್ಲಿ ಆಂಗ್ಲರ ಹಾಗೂ ಇತರ ಐರೋಪ್ಯರ ಬಗ್ಗೆ ಶಿವಾಜಿಯ ನಡವಳಿಕೆ ಸ್ನೇಹಪೂರ್ಣವಾಗಿತ್ತು. ೧೬೭೪ರಲ್ಲಿ ರಾಯಗಡದ ತನ್ನ ಪಟ್ಟಾಭಿಷೇಕಕ್ಕೆ ಅವರನ್ನು ಆಹ್ವಾನಿಸಿ, ಅವರಿಗೆ ಅತ್ಯುತ್ತಮ ಆತಿಥ್ಯ ನೀಡಿದ. ಅವರ 'ಸ್ವಾಗತ ಸಮಾರಂಭ' ಅತ್ಯಂತ ಪ್ರೀತಿಯಿಂದ ಕೂಡಿತ್ತು" ಎಂದು ಆಂಗ್ಲರ ದಾಖಲೆ ತಿಳಿಸುತ್ತದೆ. ಪಟ್ಟಾಭಿಷೇಕದ ನಂತರ ದೊರೆ ತನ್ನ ಪ್ರಜೆಗಳ ಹಿತರಕ್ಷಣೆ ಮಾಡುತ್ತ, ಬಿಜಾಪುರ ಹಾಗೂ ಮೊಘಲ ರಾಜರೊಂದಿಗೆ ನಿರಂತರವಾಗಿ ಯುದ್ಧ ನಿರತನಾಗಿ, ಅದುವರೆಗೂ ಗಮನಹರಿಸಲಾಗದಿದ್ದ ವಾಣಿಜ್ಯ ಹಾಗೂ ವ್ಯಾಪಾರಗಳ ಅಭಿವೃದ್ಧಿಗೆ ರಾಜನಂತೆ ಶ್ರಮಿಸುತ್ತೇನೆಂದು ಅವರಿಗೆ ಭರವಸೆ ಕೂಡ ಕೊಟ್ಟ.

ಇತಿಹಾಸಕಾರರು ಸಾಮಾನ್ಯವಾಗಿ ಶಿವಾಜಿಯ ನಾಗರಿಕ ಸಾಧನೆಗಳ

ಬಗೆಗಿಂತ ಅವನ ಸೇನಾಕಾರ್ಯಾಚರಣೆ ಹಾಗೂ ಸಾಹಸಕಾರ್ಯಗಳ ಬಗೆಗೆ ಹೆಚ್ಚು ಗಮನವಿತ್ತಿದ್ದಾರೆ. ಶಿವಾಜಿ ಇತಿಹಾಸಕ್ಕೆ ತಿಳಿದಿರುವ ಅತ್ಯಂತ ಹಿರಿಯ ಸೇನಾ ಮೇಧಾವಿಗಳಲ್ಲೊಬ್ಬನೆನ್ನುವುದರಲ್ಲಿ ಅನುಮಾನವಿಲ್ಲ. ಅವನ ಚಲನವಲನಗಳು ಅವನಿಗಿಂತ ಹಿಂದಿನ ಅಕ್ಬರನಷ್ಟೇ ಹಾಗೂ ಅವನ ನಂತರದ ನೆಪೋಲಿಯನ್‌ನಷ್ಟೇ ಚುರುಕಾಗಿತ್ತು. ೧೬೬೪ರ ಇಂಗ್ಲಿಷ್ ಫ್ಯಾಕ್ಟರಿಯ ದಾಖಲೆ ಹೇಳುವಂತೆ "ವರದಿಗಳು ಅವನನ್ನು ಗಾಳಿಯ ಶರೀರ ಹೊಂದಿರುವುದಾಗಿ ಹೇಳಿ ರೆಕ್ಕೆಗಳನ್ನು ಜೋಡಿಸಿವೆ! ಇಲ್ಲದಿದ್ದಲ್ಲಿ ಒಂದೇ ವೇಳೆಯಲ್ಲಿ ಅವನು ಹಲವಾರು ಜಾಗಗಳಲ್ಲಿರುತ್ತಾನೆಂದು ಹೇಳುವಂತೆ ಇರುತ್ತಿದ್ದುದು ಅಸಾಧ್ಯವಾಗುತ್ತಿತ್ತು! ಆತ ಅತಿವೇಗ ಹೊಂದಿದ ಚುರುಕು ವ್ಯಕ್ತಿಯಾಗಿದ್ದು ಕಠಿಣ ಪರಿಸ್ಥಿತಿಗಳನ್ನೆದುರಿಸಲು ತನಗೆ ಸಾಧ್ಯವೆಂದು, ವಿಚಿತ್ರ ಕೆಲಸಗಳ ಹೊರೆಯನ್ನು ತಾನೇ ಹೊತ್ತು ಹೇಳಲಾಗದ ಕೌಶಲ್ಯದಿಂದ ಅತ್ತಿಂದಿತ್ತ ಚಲಿಸುವುದರೊಂದಿಗೆ ತನ್ನ ಅತಿ ಮುಖ್ಯ ಅಧಿಕಾರಿಗಳೂ ಓಡಾಡುವಂತೆ ಮಾಡುತ್ತಿದ್ದ."

ಕೇವಲ ಜಹಗೀರುದಾರನೊಬ್ಬನ ಮಗನಾಗಿದ್ದು, ಕಾಲಕ್ರಮೇಣ ಅದು ಶಕ್ತಿಶಾಲಿ ಕಾಲ್ದಳವನ್ನು ಚುರುಕು ಅಶ್ವಪಡೆಯನ್ನು ಹಾಗೂ ಪರಿಣಾಮಕಾರಿ ನೌಕಾ ವಿಭಾಗವನ್ನೂ ಒಳಗೊಂಡಿತ್ತು. ೧೬೮೦ರ ಅಂತ್ಯದಲ್ಲಿ ಮುಂಬಯಿಯಾಚೆಯ "ಹೆನ್ರಿ–ಹೆನ್ರಿ" (ಉಂಡೇರಿ ಖಂಡೇರಿ) ಎಂಬ ಅವಳಿ ದ್ವೀಪಗಳನ್ನು ಉತ್ತಮ ಸೇನಾಕಾರ್ಯಾಚರಣೆಯ ನಂತರ ಆಂಗ್ಲರಿಂದ ಅವನು ವಶಪಡಿಸಿಕೊಂಡ. "ಈ ಯುದ್ಧಗಳು ಹಾಗೂ ಯುದ್ಧದ ವದಂತಿಗಳ ನಡುವೆ ನಾವು ನಿಶ್ಶಬ್ದವಾಗಿ ಶಸ್ತ್ರಾಸ್ತ್ರಗಳನ್ನು ಕೆಳಗಿಟ್ಟೆವು" ಎಂದು ಶೀಘ್ರವೇ ಮುಂಬೈಗೆ ಭೇಟಿಕೊಟ್ಟ ಡಾ. ಫ್ರೈಯರ್ ಬರೆಯುತ್ತಾನೆ.

ಶಿವಾಜಿಯ ಅತ್ಯುತ್ತಮ ಗುಣಗಳಿಂದಾಗಿ ಅವನ ಶತ್ರುಗಳು ಅವನಿಗೆ ಹೆದರುತ್ತಿದ್ದುದಷ್ಟೇ ಅಲ್ಲ, ಅವನನ್ನು ಗೌರವಿಸುತ್ತಿದ್ದರು ಕೂಡ. ಕೇವಲ ಶಕ್ತಿಯೊಂದೇ ಪರಿಗಣಿಸಲ್ಪಡುವುದಿಲ್ಲ. ಅದನ್ನು ಉಪಯೋಗಿಸುವ ರೀತಿ ಸಹ ಮುಖ್ಯವಾದುದು. "ತನ್ನ ಸೈನಿಕರು ಲೂಟಿ ಹೊಡೆಯಲು ಹೋದಾಗ ಅವರು ಮಸೀದಿಗಳಿಗೆ, ಪವಿತ್ರ ಗ್ರಂಥಗಳಿಗೆ ಹಾಗೂ ಬೇರೆಯವರ ಸ್ತ್ರೀಯರಿಗೆ ಯಾವುದೇ ರೀತಿ ತೊಂದರೆ ಕೊಡಬಾರದು. ಪವಿತ್ರ ಕುರಾನಿನ ಪ್ರತಿ ಅವನ ಕೈಗೆ ಸಿಕ್ಕಿದಾಗ ಅದನ್ನವನು ಗೌರವಿಸಿ, ತನ್ನ ಮುಸಲ್ಮಾನ ಅನುಯಾಯಿಗಳಿಗೆ ಕೊಡುತ್ತಿದ್ದ" ಎಂದು ಮೊಘಲ್ ಇತಿಹಾಸಕಾರ ಖಾಫಿ ಖಾನ್ ಸತ್ಯವನ್ನು ದಾಖಲಿಸಿದ್ದಾನೆ.

ಕೊನೆಯ ಉಲ್ಲೇಖ ಗಮನಾರ್ಹ. ಶಿವಾಜಿಯ ಸೇನಾಪತಿಗಳಲ್ಲೊಬ್ಬ ಮುಸ್ಲಿಮನಾಗಿದ್ದ. ಖಾಸಗಿ ಕಾರ್ಯದರ್ಶಿಗಳಲ್ಲೊಬ್ಬ ಸಹ ಮುಸ್ಲಿಮನಾಗಿದ್ದ. ಜೊತೆಗೆ ಮುಸಲ್ಮಾನ ಸಂತರಾದ ಬಾಬಾಯಾಕುತ್ ಮುಂತಾದವರನ್ನು, ಹಿಂದೂ

ಸಂತರಾದ ರಾಮದಾಸ್ ಮತ್ತು ತುಕಾರಾಮರಂತೆಯೇ ಗೌರವಿಸುತ್ತಿದ್ದ. ಅವನ ಅದ್ಭುತ ಧಾರ್ಮಿಕ ಸಹನೆ ಹಾಗೂ ಧಾರಾಳ ದೃಷ್ಟಿಕೋನ ಔರಂಗಜೇಬನಿಗೆ ಅವನು ಬರೆದ ಸುಪ್ರಸಿದ್ಧ ಪತ್ರದಲ್ಲಿ ಬಲು ಚೆನ್ನಾಗಿ ಪ್ರತಿಬಿಂಬಿತವಾಗಿದೆ.

ಚಕ್ರವರ್ತಿ ಅಲಂಗೀರ್‌ರಿಗೆ,

ಈ ದೃಢ ಹಾಗೂ ಸದಾ ನಿಮ್ಮ ಹಿತಚಿಂತಕನಾದ ಶಿವಾಜಿ, ದೇವರ ಕೃಪೆಗೂ ಹಾಗೂ ಚಕ್ರವರ್ತಿಗಳ ಅನುಗ್ರಹಕ್ಕೆ ವಂದಿಸಿ ನಿಮಗೆ ತಿಳಿಸಲು ಬೇಡುತ್ತೇನೆ. ಏನೆಂದರೆ – ಇತ್ತೀಚೆಗೆ ನನ್ನ ಕಿವಿಗೆ ಬಿದ್ದ ವಿಷಯವೆಂದರೆ, ನನ್ನೊಂದಿಗಿನ ಯುದ್ಧದ ಕಾರಣದಿಂದಾಗಿ ನಿಮ್ಮ ಸಂಪತ್ತನ್ನೆಲ್ಲಾ ಖರ್ಚುಮಾಡಿ, ನಿಮ್ಮ ತಿಜೋರಿಯನ್ನು ಬರಿದಾಗಿಸಿದ್ದು, ಚಕ್ರವರ್ತಿಗಳು ಆ ಹಣವನ್ನು ಜೆಸಿಯಾ ಎಂಬ ಹೆಸರಿನಿಂದ ಹಿಂದುಗಳಿಂದ ಕಲೆ ಹಾಕಬೇಕು ಹಾಗೂ ಅದರೊಂದಿಗೆ ಸಾಮ್ರಾಜ್ಯದ ಅವಶ್ಯಕತೆಗಳನ್ನು ಪೂರೈಸಬೇಕು.

ಇದು ನಿಮ್ಮನ್ನು ತೃಪ್ತಿಪಡಿಸಲಿ ಚಕ್ರವರ್ತಿಗಳೆ !

"ರಾಜ್ಯವೆಂಬ ವಸ್ತ್ರದ ವಿನ್ಯಾಸಕಾರರಾದ ಅಕ್ಬರ್ ಪಾದ್‌ಷಾ.... ವಿವಿಧ ಪಂಗಡಗಳಾದ ಕ್ರಿಶ್ಚಿಯನ್, ಯಹೂದಿಗಳು, ಮಹಮದೀಯರು, ಆಕಾಶ – ಪೂಜಕರು, ಬ್ರಾಹ್ಮಣರು, ಜೈನರು ಹಾಗೂ ಪ್ರಾಪಂಚಿಕರು ಮತ್ತು ನಾಸ್ತಿಕರೂ ಸಹ ಸೇರಿದಂತೆ ಎಲ್ಲರ ಸಂಬಂಧಗಳಲ್ಲಿ ಸಾರ್ವತ್ರಿಕ ಸಮರಸತೆಯ (Sush-E-Kul) ಮೆಚ್ಚುಗೆಯ ನೀತಿಯನ್ನು ಅಳವಡಿಸಿಕೊಂಡರು. ಎಲ್ಲ ಜನರನ್ನು ಪ್ರೀತಿಯಿಂದ ಪಾಲಿಸಿ, ರಕ್ಷಿಸುವುದೇ ಅವರ ವಿಶಾಲ ಹೃದಯದ ಗುರಿಯಾಗಿತ್ತು. ಹಾಗಾಗಿ ಅವರು 'ಜಗದ್ಗುರು' ಎಂಬ (ಜಗತ್ತಿನ ಆಧ್ಯಾತ್ಮಿಕ ಮಾರ್ಗದರ್ಶಿ) ಬಿರುದಿನಿಂದ ಪ್ರಖ್ಯಾತರಾದರು.

ಉತ್ತಮ ಹೆಸರು ಗಳಿಸಿ ಜೀವಿಸುವವನು ಶಾಶ್ವತ ಸಂಪತ್ತನ್ನು ಗಳಿಸುತ್ತಾನೆ. ಏಕೆಂದರೆ ಅವನ ಮರಣಾನಂತರ ಅವನ ಉತ್ತಮ ಕಾರ್ಯಗಳ ಗುಣಗಾನ ಅವನ ಹೆಸರನ್ನು ಅಮರವಾಗಿಸುತ್ತದೆ.

ಇದು ನಿಮ್ಮನ್ನು ತೃಪ್ತಿಪಡಿಸಲು ಚಕ್ರವರ್ತಿಗಳೆ !

ನೀವು ನಿಜವಾದ ಭಗವದ್ಗ್ರಂಥಗಳಲ್ಲಿ ಹಾಗೂ ದೈವ ವಾಣಿಯಲ್ಲಿ ನಂಬಿಕೆ ಇಟ್ಟರೆ ಅಲ್ಲಿ ನೀವು 'ರಬ್ಬಿ–ಅಲ್–ಅಲಾಮಿನ್' (ಎಲ್ಲ ಮಾನವರ ಭಗವಂತ) ಎಂದು ರೂಪುಗೊಂಡಿರುವುದನ್ನು ಕಾಣುತ್ತೀರೇ ಹೊರತು 'ರಬ್ಬಿ–ಅಲ್–ಮುಸಲ್ಮಾನ್' (ಕೇವಲ ಮುಸಲ್ಮಾನರ ಭಗವಂತ ಮಾತ್ರ) ಎಂದು ಕಾಣುವುದಿಲ್ಲ....

ನಿಜಕ್ಕೂ ಇಸ್ಲಾಮ್ ಹಾಗೂ ಹಿಂದೂ ಧರ್ಮ ಇಡೀ ಮಾನವ ಜನಾಂಗದ ರೂಪುರೇಷೆಯನ್ನು ತುಂಬಲು ದೈವೀ ಚಿತ್ರಕಾರ ಬಳಸಿರುವ ವಿವಿಧ ಬಣ್ಣಗಳಷ್ಟೆ. ಅದು ಮಸೀದಿಯಾದರೆ ಅವನ ನೆನಪಿನಲ್ಲಿ ಪ್ರಾರ್ಥನೆಯನ್ನು ಸಲ್ಲಿಸಲಾಗುತ್ತದೆ.

ದೇವಾಲಯವಾದರೆ ಅವನಿಗಾಗೇ ಹಂಬಲಿಸಿ ಗಂಟೆಯನ್ನು ಬಾರಿಸಲಾಗುತ್ತದೆ.

ಯಾರೊಬ್ಬ ಮನುಷ್ಯನ ಧರ್ಮ ಹಾಗೂ ಆಚರಣೆಗಳ ಬಗ್ಗೆ ಸ್ವಮತಾಂಧತೆ ತೋರಿಸುವುದು, ಪವಿತ್ರಗ್ರಂಥದ ಬರಹವನ್ನೇ ವ್ಯತ್ಯಾಸಗೊಳಿಸಿದಂತೆ, ಚಿತ್ರವೊಂದರ ಮೇಲೆ ಹೊಸ ರೇಖೆಗಳನ್ನೆಳೆಯುವುದು ಚಿತ್ರಕಾರನಲ್ಲಿ ದೋಷವೆಣಿಸಿದಂತೆ....

ಕಟ್ಟುನಿಟ್ಟಾದ ನ್ಯಾಯದ ಪ್ರಕಾರ, ಜೆಸಿಯಾ ನ್ಯಾಯಸಮ್ಮತವಾದುದೇ ಅಲ್ಲ... ಅನ್ಯಾಯದ ಜೊತೆ, ಜೆಸಿಯಾವನ್ನು ವಿಧಿಸುವುದು ಭಾರತಕ್ಕೆ ಹೊಸ ಪದ್ಧತಿ ಹಾಗೂ ಅನುಚಿತವಾದುದು.... ಇರುವೆ ಹಾಗೂ ನೊಣಗಳನ್ನು ಹತ್ತಿಕ್ಕುವುದು ಶೌರ್ಯ ಹಾಗೂ ಚೈತನ್ಯಕ್ಕೆ ಹೊರತಾದುದು....

ನಿಮ್ಮ ರಾಜತ್ವದ ಸೂರ್ಯ ಹಿರಿಮೆಯ ದಿಗಂತದಲ್ಲಿ ಬೆಳಗುತ್ತಿರಲಿ!

ಎಷ್ಟು ಉದಾತ್ತತೆ ಹೃದಯ ವೈಶಾಲ್ಯತೆ ಹಾಗೂ ಸೌಶೀಲ್ಯತೆ! ನಿಜಕ್ಕೂ ಮರಾಠಾ ಸ್ವರಾಜ್ಯ ಸ್ಥಾಪಕರಾದ ಛತ್ರಪತಿ ಶಿವಾಜಿ ಮಹಾರಾಜ್ ಸ್ವ ವೈಭವೀಕರಣಕ್ಕಲ್ಲ – ಎಲ್ಲ ಜನರ ಒಳಿತಿಗಾಗಿ ಯಾರನ್ನೂ ದ್ವೇಷಿಸದೆ – ಸ್ವಾತಂತ್ರ್ಯ ಹೋರಾಟಗಾರರಿಗೊಂದು ಉತ್ತಮ ಮಾದರಿಯಾದವರು.

ಭಾರತದ ಹಿರಿಯ ಇತಿಹಾಸಕಾರ ಸರ್ ಜಾದೂನಾಥ್ ಸರ್ಕಾರ್ ಶಿವಾಜಿಯ ಅದ್ಭುತ ಸಾಧನೆಗಳನ್ನು ಈ ಮಾತುಗಳಲ್ಲಿ ಸಾರವಿಳಿಸಿದ್ದಾರೆ: "ಶಿವಾಜಿಯ ಹಿರಿಮೆ, ಅವನ ಮೂಲಭೂತ ಪರಿಕಲ್ಪನೆ ಅಥವಾ ರಾಜಕೀಯ ದೂರದೃಷ್ಟಿಗಿಂತಲೂ ಅವನ ಚಾರಿತ್ರ್ಯ ಹಾಗೂ ಸಾಮರ್ಥ್ಯದಲ್ಲಡಗಿತ್ತು. ಮತ್ತೊಬ್ಬರ ಗುಣಗಳನ್ನಳೆಯುವುದರಲ್ಲಿ ನಿಖರವಾದ ಅಂತರ್ದೃಷ್ಟಿ ಸಿದ್ಧತೆಗಳನ್ನು ಮಾಡುವ ದಕ್ಷತೆ, ಎಂಥ ಸನ್ನಿವೇಶಗಳಲ್ಲಿ ಯಾವುದು ಅನುಷ್ಠಾನಯೋಗ್ಯ ಹಾಗೂ ಹೆಚ್ಚು ಲಾಭದಾಯಕ ಎಂಬ ಪ್ರವೃತ್ತಿ, ಜನಗ್ರಹಿಕೆ ಇವು ಅವನ ಜೀವನದ ಯಶಸ್ಸಿಗೆ ಕಾರಣಗಳು. ಜೀವನದಲ್ಲಿ ಅವನ ಶಾಶ್ವತ ಸಾಧನೆ ಎಂದರೆ, ಚದುರಿಹೋಗಿದ್ದ ಮರಾಠರನ್ನು ಒಂದು ರಾಷ್ಟ್ರವಾಗಿ ಬೆಸುಗೆ ಹಾಕಿದುದು ಹಾಗೂ ಅವನ ಅತ್ಯುತ್ಕೃಷ್ಟ ಸ್ವತ್ತೆಂದರೆ, ತನ್ನ ಜನಗಳಲ್ಲಿ ಮೂಡಿಸಿದ ಚೈತನ್ಯ. ಮೊಘಲ್ ಸಾಮ್ರಾಜ್ಯ, ಬಿಜಾಪುರ, ಪೋರ್ಚುಗೀಸ್ ಭಾರತ ಹಾಗೂ ಜಂಜೀರಾದ ಅಬಿಸೀನಿಯನ್ನರು ಮುಂತಾದ ನಾಲ್ಕು ಬೃಹತ್ ಶಕ್ತಿಗಳ ವಿರೋಧದ ನಡುವೆ ಇದನ್ನವನು ಸಾಧಿಸಿದ. ಆಧುನಿಕ ಯುಗದಲ್ಲಿ ಬೇರಾವ ಹಿಂದುವೂ ಇವನಷ್ಟು ರಚನಾತ್ಮಕ ಮೇಧಾವಿತನವನ್ನು ತೋರಿಸಿಲ್ಲ. ತನ್ನದೇ ಉದಾಹರಣೆಯೊಂದಿಗೆ ಅವನು ಹಿಂದೂ ಜನಾಂಗ, ರಾಷ್ಟ್ರವೊಂದನ್ನು ಕಟ್ಟಬಲ್ಲರು, ರಾಜ್ಯವನ್ನು ರೂಪಿಸಬಲ್ಲರು, ಶತ್ರುಗಳನ್ನು ಸೋಲಿಸಬಲ್ಲರು, ತಮ್ಮ ರಕ್ಷಣೆಯನ್ನು ತಾವೇ ಮಾಡಿಕೊಳ್ಳಬಲ್ಲರು, ಅವರು ಸಾಹಿತ್ಯ, ಕಲೆ, ವಾಣಿಜ್ಯ ಹಾಗೂ ಕೈಗಾರಿಕೆಗಳನ್ನು ರಕ್ಷಿಸಿ, ಪ್ರೋತ್ಸಾಹಿಸಬಲ್ಲರು. ನೌಕಾಬಲವನ್ನು ಸಂರಕ್ಷಿಸಿ ತಮ್ಮದೇ ಆದ ಸಮುದ್ರ ವ್ಯಾಪಾರೀ ನೌಕಾದಳವನ್ನು

ಹೊಂದಬಲ್ಲರು ಹಾಗೂ ವಿದೇಶೀಯರಿಗೆ ಸಮಾನವಾಗಿ ಕಡಲ ಯುದ್ಧಗಳನ್ನು ಮಾಡಬಲ್ಲರು ಎಂದು ಸಾಧಿಸಿ ತೋರಿಸಿದ. "ಆಧುನಿಕ ಹಿಂದುಗಳಿಗೆ ತಮ್ಮ ಸಂಪೂರ್ಣ ನಿಲುವಿನೆತ್ತರಕ್ಕೆ ಬೆಳೆಯುವುದನ್ನು ಕಲಿಸಿದ. *(Short History of Aurangajeb).*

ಒಬ್ಬ ವ್ಯಕ್ತಿಯ, ಸಂಸ್ಥೆಯ ಅಥವಾ ರಾಷ್ಟ್ರದ ನಿಜವಾದ ಪರೀಕ್ಷೆ ಎಂದರೆ ಅದರ ವಿಷಮ ಪರಿಸ್ಥಿತಿಯನ್ನು ಎದುರಿಸಿ ನಿಲ್ಲುವ ಸಾಮರ್ಥ್ಯ. "ಅತ್ಯಂತ ಶಕ್ತಿಶಾಲಿಯಾದ ಶತ್ರು ಔರಂಗಜೇಬನ ನೇತೃತ್ವದಲ್ಲಿ ರಾಜ್ಯವು ಮುತ್ತಲ್ಪಟ್ಟಿತು. ತನ್ನೆಲ್ಲ ಸಂಪತ್ತು ಹಾಗೂ ಸಾಮಗ್ರಿಗಳ ಮೂಲಕ ರಾಜ್ಯವನ್ನು ನಾಶಪಡಿಸಿ, ಗೆದ್ದುಕೊಳ್ಳಲು ತನ್ನೆಲ್ಲ ಶೌರ್ಯ ಹಾಗೂ ಸಂಪನ್ಮೂಲಗಳನ್ನುಪಯೋಗಿಸಿದ. ಆದರೆ ದೇವರ ದಯದಿಂದ ಅವನೆಲ್ಲ ಪ್ರಯತ್ನಗಳೂ ವ್ಯರ್ಥವಾದವು" ಎಂದು ರಾಮಚಂದ್ರ ಫಂತ ಅಮಾತ್ಯ (ಶಿವಾಜಿಯ ಹಿರಿಯ ಮಂತ್ರಿಗಳಲ್ಲೊಬ್ಬ)ನ 'ಆಜ್ಞಾ ಪತ್ರ' ವಿವರಿಸುತ್ತದೆ.

ಮಹಾರಾಷ್ಟ್ರದ ಎಲ್ಲ ಸಂತರಿಗಿಂತ ಹೆಚ್ಚಾಗಿ ರಾಮದಾಸ "ಪ್ರಜೆಗಳ ಹೃದಯವನ್ನು ದೇವರಿಗರ್ಪಿಸಿದರೂ, ಚಿತ್ತವನ್ನು ಕರ್ತವ್ಯ ನಿರ್ವಹಣೆಯತ್ತ ಹರಿಸುವಂತೆ ಮಾಡಿದರು.... ಈ ಬೋಧನೆಯೊಂದಿಗೆ ಬೇರಾವ ಸಂತನೂ ಹಿಂದೆ ಮಾಡದ ರೀತಿ ಮರಾಠಾ ರಾಜ್ಯ ನಿರ್ಮಾಣಕ್ಕೆ ಸಹಾಯ ಮಾಡಿದರು," ಎಂದು ಪ್ರೊಫೆಸರ್ ಆರ್.ಡಿ. ರಾನಡೆ, ಮರಾಠಾಸಂತರ ಬಗೆಗಿನ ತಮ್ಮ ಹಿರಿಯ ಗ್ರಂಥವೊಂದರಲ್ಲಿ ಉಲ್ಲೇಖಿಸಿದ್ದಾರೆ.

ತಮ್ಮ ವಿಶೇಷಗುಣವಾದ ವಿನಯದೊಂದಿಗೆ ಶಿವಾಜಿ ರಾಮದಾಸರಿಗೆ ತಮ್ಮ ಕೃತಜ್ಞತೆಗಳನ್ನು ಹೀಗೆ ತಿಳಿಸುತ್ತಾರೆ. "ಎಲ್ಲರಿಗೂ ಪಿತೃಸ್ವರೂಪರಾದ ಆನಂದದ ನೆಲೆಯಾದ ನನ್ನ ಶ್ರೇಷ್ಠ ಗುರುವಿಗೆ ಪ್ರಣಾಮಗಳು." ಗುರುವಿನ ಪದತಲದಲ್ಲಿ ಕೇವಲ ಧೂಳಿನಂತಿರುವ ಶಿವಾಜಿ, ತನ್ನೊಡೆಯನ ಚರಣಗಳಲ್ಲಿ ಶಿರಬಾಗುತ್ತಾನೆ. ಹಾಗೂ ಧರ್ಮ ಸ್ಥಾಪನೆಯಲ್ಲಿ, ದೇವರ ಸೇವೆಯಲ್ಲಿ ನನ್ನ ಪ್ರಜೆಗಳ ಒಳಿತಿಗೆ, ರಕ್ಷಣೆ ಹಾಗೂ ಒತ್ತಾಸೆಗೆ ನಾನು ತಮ್ಮ ಉನ್ನತ ಶಿಕ್ಷಣದಿಂದ ಬಹುವಾಗಿ ಉಪಕರಿಸಲ್ಪಟ್ಟಿದ್ದೇನೆ... ನಾನು ಪಡೆದಿರುವ ರಾಜ್ಯವನ್ನ ತಮ್ಮ ಪದತಲದಲ್ಲರ್ಪಿಸಿದ್ದೇನೆ. ಮತ್ತು ತಮ್ಮ ಸೇವೆಗಾಗಿ ನನ್ನನ್ನು ನಾನು ಸಂಪೂರ್ಣವಾಗಿ ಅರ್ಪಿಸಿಕೊಂಡಿದ್ದೇನೆ" (ರಾಜ್ಯಾಭಿಷೇಕದ ಐದನೇ ವರ್ಷದಲ್ಲಿ ಬರೆದ ಪತ್ರ.)

೧೬೭೭ ಜನವರಿ ೨೮ರ ಮತ್ತೊಂದು ಅದ್ವಿತೀಯ ದಾಖಲೆ ತಮ್ಮ ಎಲ್ಲ ವರ್ಗದ ಎಲ್ಲ ಶ್ರೇಣಿಯ ಪ್ರಜೆಗಳನ್ನುದ್ದೇಶಿಸಿ ಛತ್ರಪತಿ ಮಾಡಿದ ಘೋಷಣೆ. ಅದು ಬ್ರಿಟಿಷ್ ಚರಿತ್ರೆಯ 'ಮ್ಯಾಗ್ನ ಕಾರ್ಟ್' (Magna Carta) ಅಥವಾ ಕಳೆದ ಶತಮಾನದ ರಾಣಿ ವಿಕ್ಟೋರಿಯಾಳ ಘೋಷಣೆಯಂತೆ ಓದಿಸಿಕೊಳ್ಳುತ್ತದೆ. ಅದರ

ಅಂತಿಮ ಭಾಗ ಈ ರೀತಿ ಇದೆ :

"ಸ್ವಾರ್ಥಿ ಹಾಗೂ ಕೆಟ್ಟಜನಗಳಿಂದ, ಧರ್ಮ ಗ್ರಂಥಗಳ ಬೋಧನೆಗೆ ವ್ಯತಿರಿಕ್ತವಾಗಿ ಹೊಸ ತೊಂದರೆಗಳನ್ನುಂಟುಮಾಡುವ ಜನರಿಂದ ದಬ್ಬಾಳಿಕೆಗೊಳಗಾಗಿ ನೊಂದವರು ಸರ್ಕಾರಕ್ಕೆ ಮನವಿ ಸಲ್ಲಿಸಬೇಕು. ವ್ಯಕ್ತಿಗಳನ್ನು ಪರಿಗಣಿಸದೆ, ಧರ್ಮಸ್ಥಾಪನೆಗಾಗಿ ಯಾವುದೇ ಪೂರ್ವಗ್ರಹವಿಲ್ಲದೆ ಧರ್ಮಗ್ರಂಥಗಳ ಪ್ರಕಾರ ಅವರ ಮೇಲೆ ಸರಿಯಾದ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗುವುದು. ಈ ದಿನಗಳಲ್ಲಿ ಉತ್ತರದ ಕಡೆಯಿಂದ ಯವನರು ನುಗ್ಗಿ ಬರುತ್ತಿದ್ದಾರೆ ಹಾಗಾಗಿ ಎಲ್ಲ ಜಾತಿಯ ಜನರೂ ಶತ್ರುವನ್ನು ಸೋಲಿಸಲು ಒಮ್ಮನದಿಂದ ಒಟ್ಟಾಗಿ ಕಾರ್ಯ ನಿರ್ವಹಿಸಬೇಕು. ಇದರಲ್ಲೇ ನಿಮ್ಮ ಹಾಗೂ ನಿಮ್ಮ ರಾಜ್ಯದ ಅಭಿವೃದ್ಧಿಯಡಗಿದೆ ಎಂಬುದನ್ನು ನೆನಪಿಡಿ. ದೇವರು ಎಲ್ಲರನ್ನು ಆಶೀರ್ವದಿಸುತ್ತಾನೆ!

ನಾವು ನೋಡಿದಂತೆ ಶಿವಾಜಿ ಇತಿಹಾಸ ತಿಳಿದ ಎಲ್ಲ ಹಿರಿಯ ಹೋರಾಟಗಾರರು ಹಾಗೂ ರಾಜರಲ್ಲೊಬ್ಬ ಎನ್ನುವುದರಲ್ಲಿ ಸಂದೇಹವಿಲ್ಲ. ಜೊತೆಗೆ ಅತ್ಯುತ್ತಮ ಹಾಗೂ ಉದಾತ್ತ ವ್ಯಕ್ತಿಗಳಲ್ಲಿ ಕೂಡ ಅವನೊಬ್ಬನಾಗಿದ್ದ. ಅವನೊಬ್ಬ ಕರ್ತವ್ಯತತ್ಪರ ಹಾಗೂ ಪ್ರೀತಿಪಾತ್ರ ಮಗನಾಗಿದ್ದ. ಅವನ ತಂದೆ ಷಹಜಿ ಅವನಿಂದ ಹೆಚ್ಚುಕಾಲ ದೂರವಿದ್ದರೂ, ತಂದೆಯ ಬಗ್ಗೆ ಅತಿ ಹೆಚ್ಚು ಗೌರವ ಹೊಂದಿದ್ದ. ತನ್ನ ಮಹಾಮಾತೆ ಶ್ರೇಷ್ಠಳಾದ ಜೀಜಾಬಾಯಿಯನ್ನು ನೆಪೋಲಿಯನ್ ತನ್ನ ತಾಯಿಯನ್ನು ಪ್ರೀತಿಸುತ್ತಿದ್ದಷ್ಟೇ ಪ್ರೀತಿಸುತ್ತಿದ್ದ – ಅಲ್ಲ – ದೇವತೆಯಂತೆ ಅವಳನ್ನು ಆರಾಧಿಸುತ್ತಿದ್ದ.

ಪ್ರಖ್ಯಾತಳಾದ ದೇವಿ ತುಳಜಾಭವಾನಿ, ಅವನ ಜೀವನದುದ್ದಕ್ಕೂ ಅವನನ್ನು ಪ್ರೋತ್ಸಾಹಿಸಿ ಸಂರಕ್ಷಿಸುತ್ತಿದ್ದಳು. ಅವಳು ಅವನಿಗಿತ್ತ ಪವಾಡ ಸದೃಶ ಕತ್ತಿಯನ್ನು ಶಿವಾಜಿ ಗೌರವದಿಂದ "ಭವಾನಿ" ಎಂದೇ ಕರೆಯುತ್ತಿದ್ದ.

ಅವನ ವೀರಪುತ್ರ ಸಾಂಬಾಜಿಯೊಬ್ಬ ನಿರ್ಭೀತ ಸೈನಿಕನಾಗಿದ್ದು, ಔರಂಗಜೇಬನ ವಿರುದ್ಧ ಹೋರಾಡುತ್ತ ಮಡಿದು ಹುತಾತ್ಮನಾದ. ಅವನ ಎರಡನೆಯ ಮಗ ರಾಜಾರಾಂ ಶಿವಾಜಿ ಮಹಾರಾಜರ ಎಲ್ಲ ಮಾನವೀಯತೆ ಹಾಗೂ ಹೃದಯ ವೈಶಾಲ್ಯತೆಯನ್ನು ಪಡೆದಿದ್ದ.

ಶಿವಾಜಿ ಹೊಂದಿದ್ದ "ಛತ್ರಪತಿ" (ಛತ್ರಿಯ ಒಡೆಯ) ಎಂಬ ಬಿರುದು "ಬಿಸಿಲು–ಮಳೆಗಳಲ್ಲಿ" ಶಾಂತಿ ಹಾಗೂ ಯುದ್ಧದ ಸಮಯದಲ್ಲಿ ಅವನು ತನ್ನ ಪ್ರಜೆಗಳಿಗೆ ನೀಡಿದ ಕರುಣೆ ತುಂಬಿದ ರಕ್ಷಣೆಗೆ ಸಾಂಕೇತಿಕವಾಗಿತ್ತು.

* * * *

೬. ರಾಲ್ಫ್ ವಾಲ್ಡೋ ಎಮರ್ಸನ್

ಡಾ. ಎ.ಕೆ. ದಾಸಗುಪ್ತ

ರಾಲ್ಫ್ ವಾಲ್ಡೋ ಎಮರ್ಸನ್ ೧೮೦೩ರ ಮೇ ೨೫ರಂದು ಹುಟ್ಟಿದ. ಅವನ ತಂದೆ ವಿಲಿಯಂ ಎಮರ್ಸನ್ ಹಾರ್ವರ್ಡ್ ಕಾಲೇಜಿನಲ್ಲಿ ಪದವೀಧರನಾಗಿ ಹಾರ್ವರ್ಡ್ ಹಳ್ಳಿಯಲ್ಲಿ ಪಾದ್ರಿಯಾಗಿದ್ದ. ಅವನ ತಾಯಿ ರತ್ ಹಾಸ್ಕಿನ್ಸ್. ಎಮರ್ಸನ್ ಅವರ ನಾಲ್ಕನೆಯ ಮಗುವಾಗಿ, ಮೂರನೇ ಮಗನಾಗಿದ್ದ.

ಬಾಸ್ಟನ್ನಿನ ನ್ಯೂ ಇಂಗ್ಲೆಂಡಿನ, ನ್ಯೂಕಾಲೋನಿಯ ಮತ್ತೊಬ್ಬ ಅಷ್ಟೇ ಪ್ರತಿಭಾಶಾಲಿ ಪುತ್ರ ಬೆಂಜಮಿನ್ ಫ್ರಾಂಕ್ಲಿನ್. ಅವನೂ ಅದೇ ದಿನ ಹುಟ್ಟಿದ. ಆ ಜಾಗಗಳೂ ಯಾವುದೇ ಅಂತರದಿಂದ ಪ್ರತ್ಯೇಕವಾಗಿರಲಿಲ್ಲ. ಇಬ್ಬರು ಮಕ್ಕಳೂ ಒಂದೇ ವಾತಾವರಣದಲ್ಲಿ ಬೆಳೆಯುತ್ತಿದ್ದರು.

ರಾಲ್ಫ್‌ನ ವಿದ್ಯಾಭ್ಯಾಸ ಮೂರನೇ ವರ್ಷದಿಂದ ಪ್ರಾರಂಭವಾಯ್ತು. ಅವನ ತಂದೆ ವಿಲಿಯಂ ಮತ್ತು ರಾಲ್ಫರ ವಿದ್ಯಾಭ್ಯಾಸಕ್ಕೆ ವೈಯಕ್ತಿಕ ಆಸಕ್ತಿ ವಹಿಸಿದ. ಇಂಗ್ಲಿಷ್ ವ್ಯಾಕರಣದಲ್ಲಿ ಅವರ ಪ್ರಗತಿಯನ್ನು ತೋರಿಸಲು ಪ್ರತಿನಿತ್ಯ ಉಪಾಹಾರಕ್ಕೆ ಮೊದಲೇ ಅವನೆದುರು ಹಾಜರಾಗಬೇಕಿತ್ತು.

ಕುಟುಂಬ ಸರಳ, ನಿರಾಡಂಬರವಾಗಿ ಜೀವಿಸುತಿತ್ತು. ಮಕ್ಕಳು ಕುಟುಂಬಕ್ಕೆ ಸಹಾಯಕರಾಗಿರಲು ಕಷ್ಟಪಟ್ಟು ದುಡಿದು ನಿಸ್ವಾರ್ಥಿಗಳಾಗಿ ಶಿಸ್ತಿನಿಂದ ಕೂಡಿದ್ದರು. ಇತರರಿಗೆ ಸಹಾಯ ಮಾಡಲು ಅವರು ತಮ್ಮ ವೈಯಕ್ತಿಕ ಸುಖವನ್ನು ತ್ಯಾಗ ಮಾಡಲು ಕಲಿತರು. ನೀತಿಯ ಶಿಸ್ತು ಅವರಿಗೆ ರಕ್ತಗತವಾಗಿತ್ತು.

ರಾಲ್ಫನ ಆರೋಗ್ಯ ಅಷ್ಟೇನೂ ಉತ್ತಮವಾಗಿರಲಿಲ್ಲ. ಆದರೆ ಬೆಳೆದಂತೆಲ್ಲಾ ಅವನು ವ್ಯರ್ಥವಾಗಿ ಕಾಲ ಕಳೆಯುತ್ತಿರಲಿಲ್ಲ. ಗಂಭೀರ ಪ್ರವೃತ್ತಿಯವನಾಗಿದ್ದು, ತನ್ನ ಬಗ್ಗೆ ಒಳ್ಳೆಯ ಅಭಿಪ್ರಾಯ ಬರುವಂತೆ ಮಾಡಲು ಪ್ರಯತ್ನಿಸುತ್ತಿದ್ದ. ಅವನು ವಾಚಾಳಿಯಾಗಿರಲಿಲ್ಲ. ಆಡುವ ಪ್ರತಿ ಮಾತನ್ನೂ ತೂಗಿ ಆಡುತ್ತಿದ್ದ. ಅವನ ನಡತೆ ಉತ್ತಮವಾಗಿದ್ದು, ಯಾವಾಗಲೂ ಒಳ್ಳೆಯ ನಡತೆ ತೋರುತ್ತಿದ್ದ. ತನ್ನ ತರುಣ ಮಿತ್ರರ ಸಂಗದಲ್ಲಿದ್ದಾಗ ಅವರಿಗೆ ಬೇಸರಪಡಿಸುವ ಮಾತಾಡುತ್ತಿರಲಿಲ್ಲ. ಶಾಂತ ಮನೋಭಾವ ಹಾಗೂ ಸ್ಥಿರಸ್ವಭಾವದವನಾಗಿದ್ದ. ಹುಡುಗ ಎಮರ್ಸನ್, ಉಗ್ರವಾಗಿ

ಕೋಪೋದ್ರಿಕ್ತನಾದುದನ್ನು ಎಂದೂ ಯಾರೂ ಕಾಣಲಿಲ್ಲ. ತಾನು ಯಾರೊಂದಿಗೆ ಸೇರಿದರೂ ಅವರಿಗೆ ಮೆಚ್ಚಿಗೆಯಾಗುವಂತೆ ನಡೆದುಕೊಳ್ಳುತ್ತಿದ್ದ.

ಮಗುವಾಗಿದ್ದಾಗಿಂದಲೂ ರಾಲ್ಫ್, ಗ್ರೀಕ್ ಮತ್ತು ಲ್ಯಾಟಿನ್ ಭಾಷೆಯ ಬಗ್ಗೆ ಆಸಕ್ತಿ ಬೆಳೆಸಿಕೊಂಡ. ಅವನು ನಾಚಿಕೆ ಹಾಗೂ ಹಿಂಜರಿಕೆಯ ಸ್ವಭಾವದವನು. ಗೋಡೆಯೊಂದರ ಮೇಲೆ ಕುಳಿತು, ಪಿಯರ್ಸ್ ಹಣ್ಣುಗಳು ಬೆಳೆಯುತ್ತಿದ್ದ ತೋಟವೊಂದನ್ನು ನೋಡುವುದು ಅವನ ಇಷ್ಟವಾದ ಹವ್ಯಾಸವಾಗಿತ್ತು.

ಹನ್ನೊಂದನೇ ವಯಸ್ಸಿಗೆ ರಾಲ್ಫ್, ವರ್ಜಿಲ್ ಅನ್ನು ಇಂಗ್ಲಿಷ್ ಕವಿತೆಯ ರೂಪಕ್ಕೆ ಅನುವಾದಿಸಿದ. ಇದಕ್ಕೂ ಮೊದಲೇ ಫ್ರೆಂಚ್ ಅಭ್ಯಸಿಸಿದ. ಅವನ ಹೆಚ್ಚಿನ ವಿದ್ಯಾಭ್ಯಾಸವೆಲ್ಲ ಮಾಸ್ಟರ್ ಬೆಂಜಮಿನ್ ಗೋಲ್ಡನಿಂದ ಲ್ಯಾಟಿನ್ ಶಾಲೆಯಲ್ಲಿ ನಡೆಯಿತು. ಹುಡುಗ ರಾಲ್ಫ್ ಶಾಲೆಯ ವೇಳೆಯಲ್ಲಿ, ವೆಬ್ಸ್‌ನ ಶಾಲೆಯಿಂದ ಓಡಿ ಹೋಗಿ, ಕದ್ದ ಶಾಲೆಯ ವೇಳೆಯನ್ನು ಗೋಮಾಳದಲ್ಲಿ ಸಂತೋಷದಿಂದ ಕಳೆಯುತ್ತಿದ್ದನೆಂಬ ದಾಖಲೆ ಇದೆ. ಹೆಸರಾಂತ ಬೆಲ್ಜಿಯನ್ ಕವಿ ಮಾರಿಸ್ ಮ್ಯಾಟರ್ ಲಿಂಕ್ (೧೮೬೨-೧೯೪೯) ಶಾಲೆ ತಪ್ಪಿಸುತ್ತಿರಲಿಲ್ಲವೇನು? ಮುಂದೆ ರಾಲ್ಫ್ ಇತಿಹಾಸ, ಕಟ್ಟುಕಥೆಗಳು ಕಾವ್ಯ ಹಾಗೂ ಭಾಷಾ ಚಾತುರ್ಯ ತುಂಬಿದ್ದ ಉದ್ಧೃತ ಭಾಗಗಳ ಬಗ್ಗೆ ಉತ್ಸಾಹಭರಿತ ಆಸಕ್ತಿ ಬೆಳೆಸಿಕೊಂಡ.

ರಾಲ್ಫ್‌ನ ತಾಯಿ, ಸುಸಂಸ್ಕೃತ, ನಾಜೂಕಿನ ಧಾರ್ಮಿಕ ಸ್ವಭಾವದ, ಗೌರವಯುತ ಮಹಿಳೆಯಾಗಿದ್ದಳು. ಅವಳು ಅವನಿಗೆ ಕಲಿಸಿದ ನಯ ಹಾಗೂ ಗಾಂಭೀರ್ಯ ಅವನನ್ನು ಇತರರಿಗಿಂತ ಭಿನ್ನವಾಗಿ ತೋರಿಸಿತು. ರಾಲ್ಫ್ ಮೇಲೆ ಆರೋಗ್ಯಕರ ಪ್ರಭಾವ ಬೀರಿದ ಮತ್ತೋರ್ವ ಮಹಿಳೆ ಅವನ ಚಿಕ್ಕಮ್ಮ ಮೇರಿ ಎಮರ್ಸನ್. ನಿರಂತರವಾಗಿ ಓದಿ, ದರ್ಶನ ಹಾಗೂ ಧರ್ಮಶಾಸ್ತ್ರದ ವಿಷಯದ ಬಗ್ಗೆ ಚರ್ಚಿಸಿ ಸಮಾಜದ ಎಲ್ಲ ಕಾಪಟ್ಯವನ್ನೂ ವಿರೋಧಿಸಿದಳು. ಎಮರ್ಸನ್ ಸಹೋದರರು ಧೈರ್ಯಶಾಲಿಗಳಾಗಿ ಸ್ವಾವಲಂಬಿಗಳಾಗಿ ಬೆಳೆಯುವುದರಲ್ಲಿ ನಿಸ್ಸಂದೇಹವಾಗಿಯೂ ಅವಳ ಪಾತ್ರವಿತ್ತು.

ಇಬ್ಬರು ಮಹಿಳೆಯರೂ ಮಕ್ಕಳ ಶರೀರಕ್ಕಿಂತ ಹೆಚ್ಚಾಗಿ ಅವರ ಆತ್ಮದ, ಚಿತ್ತದ ಬೆಳವಣಿಗೆಗೆ ಒತ್ತುಕೊಟ್ಟರು. ಹಾಗಾಗಿ ಮಕ್ಕಳ ಊಟ, ಬಟ್ಟೆಯ ಬಗ್ಗೆ ಅವರು ಹೆಚ್ಚು ಗಮನ ಕೊಡಲಿಲ್ಲ. ಆತ್ಮದ ರಕ್ಷಣೆ ಹಾಗೂ ಕಲ್ಯಾಣವೇ ಅವರಿಗೆ ಸರ್ವಸ್ವವಾಗಿತ್ತು.

ಪರೀಕ್ಷೆಯೊಂದರಲ್ಲಿ ಉತ್ತೀರ್ಣನಾದ ನಂತರ ೧೮೧೭ರಲ್ಲಿ ಎಮರ್ಸನ್ ಹಾರ್ವರ್ಡ್ ಕಾಲೇಜಿಗೆ ಸೇರಿಸಲ್ಪಟ್ಟ ಹಾಗೂ ಅಧ್ಯಕ್ಷರ ಫ್ರೆಶ್‌ಮನ್ – ಅಂದರೆ – ಓಲೆಕಾರನಾಗಿ ನಿಯಮಿಸಲ್ಪಟ್ಟ. ಅಧ್ಯಕ್ಷರ ನಿವಾಸದಲ್ಲಿ ಅವನಿಗೆ ಉಚಿತ ವಾಸ ಕಲ್ಪಿಸಲಾಯ್ತು. ಗೋಮಾಳದ ಪರಿಚಾರಕನಾಗಿಯೂ ನಿಯುಕ್ತನಾಗಿ ಸಂಪಾದಿಸುತ್ತಿದ್ದ

ಸ್ವಲ್ಪ ಹಣದಲ್ಲಿ ಭೋಜನದ ಹೆಚ್ಚಿನ ವೆಚ್ಚ ಕಳೆಯುತ್ತಿತ್ತು. ಈ ಅನುಕೂಲಗಳಿಲ್ಲದಿದ್ದರೆ ಅವನು ಉನ್ನತ ಶಿಕ್ಷಣ ಪಡೆಯುವುದು ಕಷ್ಟವಾಗುತ್ತಿತ್ತು.

ಅಧ್ಯಕ್ಷ ಧಾರಾಳಿಯಾಗಿದ್ದು, ಬಡವಿದ್ಯಾರ್ಥಿಗಳಿಗಿದ್ದ ಎಡರ್‌ಪೆನ್ ದತ್ತಿಯ ಹತ್ತು ಪೌಂಡುಗಳ ಧನಸಹಾಯವನ್ನೊದಗಿಸಿದ. ಖಾಸಗಿ ಶಿಕ್ಷಕನಾಗಿ ಗೊತ್ತುಮಾಡಿ ಅವನಿಗೆ ಮತ್ತಷ್ಟು ಸಹಾಯ ಒದಗಿಸಿದ. ಅಧ್ಯಕ್ಷ ಕಿರ್ಕ್‌ಲ್ಯಾಂಡ್‌ನ ಅಣ್ಣನ ಮಗ ಲೋತ್ರೋಪ್ ರೆವರೆಂಡ್ ಡಾ. ಸಾಮ್ಯುಯಲ್ ಕಿರ್ಕ್‌ಲ್ಯಾಂಡ್ ಲೋತ್ರೋಪ್ ಎನಿಸಿದ. ಎಮರ್ಸನ್ ಬಗ್ಗೆ ಮುಂದುವರೆದ ಅವನ ಆಸಕ್ತಿ ಅವನ ಉದಾತ್ತತೆಯನ್ನು ತೋರಿಸಿತು. ಎಮರ್ಸನ್ನನ ವಿದ್ಯಾಭ್ಯಾಸಕ್ಕೆ ತೊಂದರೆಯಾಗಬಹುದೆಂಬ ಕಾರಣಕ್ಕಾಗಿ ಮುಂದಿನ ವರ್ಷ ಶಾಲೆ ಪ್ರಾರಂಭವಾಗುವ ವೇಳೆಗೆ ಅವನು ಖಾಸಗಿ ಶಿಕ್ಷಕನ ಜವಾಬ್ದಾರಿಯಿಂದ ವಿಮುಕ್ತಗೊಳಿಸಲ್ಪಟ್ಟ.

೧೬ನೇ ವಯಸ್ಸಿನಲ್ಲಿ ಎಮರ್ಸನ್ "*Charater of Socrates*" ಹಾಗೂ *Present State of Ethical Philosophy*" ಎಂಬ ಪ್ರಬಂಧಗಳಿಗೆ ಬಹುಮಾನ ಗಳಿಸಿದ. ಭಾಷಣ ಸ್ಪರ್ಧೆಯಲ್ಲಿ "Babyston" ಬಹುಮಾನ (೩೦ ಡಾಲರ್‌ಗಳು) ಕೂಡ ಪಡೆದ. ತಾಯಿಗಾಗಿ ಬೆಚ್ಚನೆಯ ಉಡುಪು ಕೊಳ್ಳಲು ಆ ಹಣವನ್ನವನು ಮನೆಗೆ ತಂದ. ಆದರೆ ಕೊಟ್ಟಿಗೆಯಂಗಡಿಯವನಿಗೆ ಸಾಲ ಚುಕ್ತಾ ಮಾಡಬೇಕಾಗಿದ್ದು, ಆ ಹಣವೆಲ್ಲಾ ಅದಕ್ಕೇ ಖರ್ಚಾದುದಕ್ಕಾಗಿ ವ್ಯಥೆಪಟ್ಟ.

ಎಮರ್ಸನ್ ಕಾಲೇಜು ವಿದ್ಯಾಭ್ಯಾಸದಿಂದ ಸಾಧ್ಯವಾದಷ್ಟನ್ನು ಕಲಿತ. ಆದರೂ ಅತೃಪ್ತನಾಗೇ ಉಳಿದ. ಗಣಿತದ ಬಗ್ಗೆ ತನಗೆ ಬುದ್ಧಿ ಇಲ್ಲವೆಂದೊಪ್ಪಿದ. ರೇಖಾಗಣಿತದ ಬಗ್ಗೆ ಅವನಿಗೆ ಸ್ವಲ್ಪವೂ ಇಷ್ಟವಿರಲಿಲ್ಲ. ರಾತ್ರಿಯಲ್ಲಿ ತನ್ನ ಓದಿನ ವಿಧಾನ ಬದಲಿಸಿ ಚಾಸರ್, ಮಾಂಟೇನ್, ಪ್ಲೇಟೋ ಹಾಗೂ ಪ್ಲೂಟಾರ್ಕರ ಕೃತಿಗಳನ್ನೋದಿದ. ೧೮೨೧ರಲ್ಲಿ ಪದವೀಧರನಾದ. ಅವನು ತನ್ನ ಬೌದ್ಧಿಕ ಪ್ರತಿಭೆಯ ಸಾಕ್ಷಿಯೊದಗಿಸಲಿಲ್ಲ. ೫೯ ಮಕ್ಕಳಿದ್ದ ಕಾಲೇಜಿನಲ್ಲಿ ಅವನು ೩೦ನೇ ಸ್ಥಾನ ಪಡೆದ. ೧೮೬೬ರಲ್ಲಿ 'Doctor of Laws' ಪದವಿ ಪಡೆದ.

ತರುಣ ಎಮರ್ಸನ್‌ಗೆ ಭಾವೋದ್ರಿಕ್ತ ಭಾಷಣ ಮಾಡುವ ಸಾಮರ್ಥ್ಯವಿತ್ತು ಎನ್ನುವುದು ಆಸಕ್ತಿಯುತ ವಿಷಯ. ಸಕ್ಕರೆಯ ಪಿಪಾಯಿಯೊಂದರ ಮೇಲೆ ನಿಂತು ಪ್ರೇಕ್ಷಕ ಗೆಳೆಯರಿಗೆ ಕ್ಯಾಂಪ್‌ಬೆಲ್ ಹಾಗೂ ಮಿಲ್ಟನ್ನರ ಕಾವ್ಯಗಳನ್ನು ಓದುವುದರೊಂದಿಗೆ ಸಾಹಿತ್ಯದ ರುಚಿಯುಣಿಸುತ್ತಿದ್ದ.

ತನ್ನ ಪ್ರತ್ಯೇಕತೆ ಹಾಗೂ ಸಂಯಮದ ನಡತೆಯಿಂದಾಗಿ ಎಮರ್ಸನ್ ಗುಂಪಿನಿಂದ ಹೊರತಾಗಿಯೇ ಗುರುತಿಸಲ್ಪಡುತ್ತಿದ್ದ. ಆದರೆ ಈ ಬಿಗಿಧೋರಣೆ ಅವನ ಮೇಲರಿಮೆಯ ಭಾವನೆಯಿಂದ ಬಂದುದಾಗಿರಲಿಲ್ಲ. ಅವನು ಸ್ವಾಭಾವಿಕವಾಗಿಯೇ ಸಂಕೋಚಪ್ರವೃತ್ತಿಯವನಾಗಿದ್ದು, ಎಲ್ಲರಿಂದ ಪ್ರತ್ಯೇಕವಾಗಿಯೇ ಇರುತ್ತಿದ್ದ.

ಎಮರ್ಸನ್ ಒಬ್ಬ ಸರ್ವಾಧ್ಯಾಯಿಯಾಗಿದ್ದು ಬಹುಮಟ್ಟಿಗೆ ಎಲ್ಲವನ್ನೂ ತಿಳಿದುಕೊಳ್ಳುವ ಓದುಗನೆಂದೇ ಹೇಳಬಹುದು. ೧೮೨೪ ಹಾಗೂ ೧೮೩೨ರ ನಡುವೆ, ವಿಶ್ವದ ಎಲ್ಲ ಹಿರಿಯ ಬರಹಗಾರರ ಕೃತಿಗಳನ್ನು ಓದಿದ್ದ.

ಸಂದರ್ಭಗಳ ಒತ್ತಡಕ್ಕೊಳಪಟ್ಟು ಶಾಲಾ ಶಿಕ್ಷಕನಾಗಿ ಜೀವನವನ್ನಾರಂಭಿಸಿದ ಎಮರ್ಸನ್, ವಿಶ್ವಶಿಕ್ಷಕನಾಗಿ ಜೀವಿಸಿ ಮರಣ ಹೊಂದಿದ. ತನ್ನ ಸೋದರ ವಿಲಿಯಂನಿಂದ ಬಾಸ್ಟನ್‌ನಲ್ಲಿ ಹುಡುಗಿಯರಿಗಾಗಿ ಸ್ಥಾಪಿಸಲ್ಪಟ್ಟ ಶಾಲೆಯೊಂದರಲ್ಲಿ ಅವನು ಸುಮಾರು ಒಂದು ವರ್ಷದವರೆಗೂ ಕೆಲಸ ಮಾಡಿದ. ಶಾಲೆಯ ತನ್ನ ಕೆಲಸವನ್ನು ಇಷ್ಟಪಡುತ್ತಿದ್ದು ಶಾಲೆಯ ಮಧ್ಯಂತರದ ತನ್ನ ವಿರಾಮ ವೇಳೆಯಲ್ಲಿ ನೀತಿ ಪಾಠಗಳ ಬಗ್ಗೆ ತನ್ನ ಅನಿಸಿಕೆಗಳನ್ನು ಬರೆದುಕೊಳ್ಳುತ್ತಿದ್ದುದು, ಅವನ ಮುಂದಿನ ಜೀವನದ ಅನೇಕ ವರ್ಷಗಳನ್ನು ಮಧುರವಾಗಿಸಿತು.

ಶಾಲಾ ನಿರ್ವಹಣೆ ಭರವಸೆ ಕಾಣದ ಅನಾಕರ್ಷಕ ಕೆಲಸವೆನಿಸಿತು. "ಶಿಕ್ಷಣದ ಬೀಜ ಬಿತ್ತುವುದಕ್ಕಿಂತ ನಾವೆಯ ಹುಟ್ಟು ಜಗ್ಗಿರಿ, ಗಣಿ ಅಗೆಯಿರಿ, ಸೌದೆ ಕತ್ತರಿಸಿ; ಸೆಣಬು ಬಿತ್ತಿರಿ; ಎಂಬ ಅಭಿಪ್ರಾಯ ಮೂಡಿಸುವುದುತ್ತಮ" ಎಂದು ಎಮರ್ಸನ್ ಬರೆಯುತ್ತಾನೆ.

ಅವನ ಕಾಲದ ಕಾಲೇಜು ಶಿಕ್ಷಣ ಎಮರ್ಸನ್‌ನಲ್ಲಿ ಉತ್ಸಾಹ ಬೆಳೆಸಲಿಲ್ಲ. "ಹತ್ತು ವರ್ಷಗಳ ಕಾಲೇಜು ಶಿಕ್ಷಣ ಮುಗಿಸಿ ಹೊರಬಂದು ತನ್ನ ಬಾಳ ಪಯಣಕ್ಕೆ ಸಿದ್ಧನಾಗಿರುವ ತರುಣ, ಇಡೀ ಹಡಗು ಜೇನುಗೂಡಿನಂತಹ ಕೊಳೆತ ಸಾಂಪ್ರದಾಯಿಕ ಮರದಿಂದ ಮಾಡಿದ್ದು, ಒಂದೇ ಒಂದು ಅಂಗುಲದಷ್ಟು ಹೊಸ ಹಲಗೆ ಹಡಗಿನ ರಚನೆಯಲ್ಲಿಲ್ಲದಿರುವ ಈ ದುಃಖಕರ ದೃಶ್ಯ ಇತ್ತೀಚೆಗೆ ಪದೇ ಪದೇ ಕಾಣುತ್ತಿದ್ದುದರ ಬಗ್ಗೆ, ಎಮರ್ಸನ್ ಅವನ ತೀವ್ರ ನಿರಾಸೆಯನ್ನು ಹೀಗೆ ವ್ಯಕ್ತ ಪಡಿಸಿದ್ದಾನೆ. ಎಮರ್ಸನ್ನನ ಪ್ರಕಾರ "ಪಂಡಿತನೆಂದರೆ ಅವನು ವಿಶ್ವದ ಕಣ್ಣು ಮತ್ತು ವಿಶ್ವದ ಹೃದಯ" "ವೈಭವದ ಪ್ರಪಂಚಕ್ಕೆ ಮುಖ್ಯವಾದ ಸಾಹಸೋದ್ಯಮವೆಂದರೆ ಮನುಷ್ಯನ ವ್ಯಕ್ತಿತ್ವ ನಿರ್ಮಾಣ."

ಬಾಸ್ಟನ್ ವ್ಯಾಪಾರಿಯೊಬ್ಬನ ಮಗಳಾದ ಕಡು ಚೆಲುವೆ ಎಲ್ಲೆನ್ ಲೂಯಿಸಾ ಟಕ್ಕರ್ (Ellen Louisa Tucker)ಳನ್ನು ಪ್ರೀತಿಸಿ ೯ ತಿಂಗಳ ನಂತರ ೧೮೨೯ರ ಸೆಪ್ಟೆಂಬರ್ ೩೦ರಂದು ಅವಳನ್ನು ಮದುವೆಯಾದ. ಆಗವನಿಗೆ ೨೬ ವರ್ಷ ಹಾಗೂ ಅವನ ವಧುವಿಗೆ ೧೮ ವರ್ಷಗಳು. ಅವನ ಸಂತೋಷ ತುಂಬಿ ಬಂದಿತ್ತು. ಆದರೆ ಅಳು–ನಗುವಿನ ನಡುವೆ ತೂಗುಯ್ಯಾಲೆ ಆಡುವ ಜೀವನದ ಬದಲಾಗದ ಕಾನೂನಿನಂತೆ ಬರಲಿರುವ ದುಃಖದ ಸುಳಿವರಿತ. ೧೮೩೨ರ ಮಾರ್ಚ್ ೨೯ರಂದು ಅವನ ಮಡದಿ ಕ್ಷಯದಿಂದ ಮೃತಳಾದಳು.

ಪ್ರಖ್ಯಾತ ಅರೆವಳಿಕೆಯ ವೈದ್ಯ ಡಾ. ಜಾಕ್ಸನ್‌ನ ಸೋದರಿ ಪ್ಲೇಮೌತನ (ಮಸಾಚುಸೆಟ್ಸ್) ಮಿಸ್ ಲಿಡಿಯಾ ಜಾಕ್ಸನ್‌ಳನ್ನು ೧೮೩೫ರಲ್ಲಿ ಮರು ವಿವಾಹವಾದ.

ಅದೇ ವರ್ಷ ವಿವಾಹವಾದ ಕೂಡಲೇ ನಗರದ 'hog-reeves' ಗಳಲ್ಲೊಬ್ಬನೆಂದು ಆಯ್ಕೆಯಾಗುವ ಗೌರವ ಸಿಕ್ಕಿತು.

ಎಲೆನ್ ಮತ್ತು ಎಡಿತ್ ಎಮರ್ಸನ್ನನ ಇಬ್ಬರು ಹೆಣ್ಣುಮಕ್ಕಳು. ಅವನ ಮೂರನೆಯ ಮಗು ಪುಟ್ಟ ವಾಲ್ಡೋ ೧೮೪೨ರ ಜನವರಿ ೨೭ರಂದು ತನ್ನ ಐದನೆಯ ವರ್ಷದಲ್ಲಿ ಸತ್ತಿತು. ಮೊದಲ ಹೆಂಡತಿ ಸತ್ತ ಹತ್ತು ವರ್ಷಗಳ ನಂತರ ಕುಟುಂಬದಲ್ಲಿ ನಡೆದ ಈ ಸಾವು ಎಮರ್ಸನ್ನನ ಸುಖ ಶಾಂತಿಗೆ ದೊಡ್ಡ ಆಘಾತವಾಯ್ತು. ಅವನ ಕಿರಿಯ ಮಗ ಎಡ್ವರ್ಡ್ ವಾಲ್ಡೋ ೧೮೪೪ರ ಜುಲೈ ೧೦ ರಂದು ಹುಟ್ಟಿ ವೈದ್ಯನಾದ.

ಇದೇ ಸಮಯದಲ್ಲಿ ಕಾರ್ಲೈಲ್‌ನ ಕೃತಿಯೊಂದನ್ನು ಸಂಪಾದಿಸುವಲ್ಲಿ ಎಮರ್ಸನ್ ಅಮೆರಿಕಾದಲ್ಲಿ ಕಾರ್ಯನಿರತನಾಗಿದ್ದ.

ಎಮರ್ಸನ್ ಒಬ್ಬ ಆದರ್ಶ ತಂದೆ. ಅವನು ತನ್ನ ಕುಟುಂಬವನ್ನು ಪ್ರೀತಿಸುತ್ತಿದ್ದ ಹಾಗೂ ತನ್ನ ಬಗ್ಗೆ ಪ್ರೀತಿಯ ಕಾಳಜಿ ವಹಿಸುತ್ತಿದ್ದ ತನ್ನ ಹೆಂಡತಿಯನ್ನು ತೀವ್ರ ಮೆಚ್ಚುತ್ತಿದ್ದ. ತನ್ನ ದೀರ್ಘ, ಸಂತಸಕರ ವೈವಾಹಿಕ ಜೀವನದ ಬಗ್ಗೆ ದೇವರಿಗೆ ವಂದನೆಗಳನ್ನು ಸಲ್ಲಿಸುತ್ತಿದ್ದ.

ಚಳಿಗಾಲದ ನಾಲ್ಕು ತಿಂಗಳುಗಳು ಎಮರ್ಸನ್ ದೊಡ್ಡ ಸಭೆಗಳನ್ನುದ್ದೇಶಿಸಿ ಮಾತನಾಡಿ, ನೈತಿಕ, ಧಾರ್ಮಿಕ, ತಾತ್ವಿಕ ಮುಂತಾದ ವಿವಿಧ ವಿಷಯಗಳ ಬಗ್ಗೆ ಜನರಲ್ಲಿ ತಿಳಿವಳಿಕೆ ಮೂಡಿಸಲು ಯತ್ನಿಸುತ್ತಿದ್ದ. ವರ್ಷದ ಉಳಿದ ಕಾಲವನ್ನು ಸಾಹಿತ್ಯಕ್ಕೆ ಸಂಬಂಧಿಸಿದ ಕೆಲಸಗಳಲ್ಲೂ ಹಾಗೂ ಸಾಮೂಹಿಕ ಸಭೆಗಳಲ್ಲಿ ಉಪನ್ಯಾಸ ನೀಡಲು ತಯಾರಿ ನಡೆಸಲು ಬಳಸುತ್ತಿದ್ದ. ವಾಸ್ತವವಾಗಿ ಸಾಮೂಹಿಕ ಉಪನ್ಯಾಸಗಳಿಂದಲೇ ಅವನ ಜೀವನ ನಿರ್ವಹಣೆಯಾಗುತ್ತಿತ್ತು. ಬಾಸ್ಟನ್‌ನಲ್ಲಿ ಹತ್ತು ಉಪನ್ಯಾಸ ಮಾಲಿಕೆಗೆ ಅವನು ೫೦೦ ಡಾಲರ್ ಪಡೆಯುತ್ತಿದ್ದ. ಅವನ ಆದಾಯ ಕಡಿಮೆ ಇತ್ತು. ಅವನ ಚಿಕ್ಕಪ್ಪ ರೆವರೆಂಡ್ ಸಾಮ್ಯುಯಲ್ ರಿಪ್ಲೆ ಅಗತ್ಯವಿದ್ದಾಗ ಉಪಯೋಗಿಸುವಂತೆ ಅವನಿಗಾಗಿ ಹಣವಿಟ್ಟಿರುತ್ತಿದ್ದ.

ಇಪ್ಪತ್ಮೂರು ವರ್ಷಗಳ ಚಿಕ್ಕ ವಯಸ್ಸಿನಲ್ಲೇ ಎಮರ್ಸನ್ ಪ್ರತಿ ಪ್ರವಚನದ ನಂತರ ಎದೆಯಲ್ಲಿ ಆಯಾಸವಾದಂತೆ ಕಾಣುತ್ತಿದ್ದ. ಆದರೆ ಐವತ್ತನೇ ವರ್ಷದಲ್ಲೂ ಅವನು ಹೊರಾಂಗಣ ಕ್ರೀಡೆಗಳನ್ನು ಇಷ್ಟಪಟ್ಟು ತನ್ನ ಮಕ್ಕಳೊಂದಿಗೆ ಹಿಮ ಜಾರಿಕೆಯ ಕ್ರೀಡೆಯಾಡುತ್ತಿದ್ದ (Skating).

ಎಮರ್ಸನ್ ಯಾವಾಗಲೂ ಸರಳವಾಗಿ ಮೇಲೆದ್ದು ಕಾಣದಂತೆ ಉಡುಪು ಧರಿಸುತ್ತಿದ್ದ. ಅವನು ಉತ್ಸಾಹಕರ ಸೌಜನ್ಯಕ್ಕೂ ಹಾಗೂ ಮಧುರ ಹಿತಕರ ಸಂಬೋಧನೆಗೂ ಹೆಸರಾಗಿದ್ದ. ಒಂಟಿತನವನ್ನಿಷ್ಟಪಟ್ಟರೂ, ತೀವ್ರ ಸುಸಂಸ್ಕೃತರಾದವರ ಸಮಾಜವನ್ನು ಇಷ್ಟಪಡುತ್ತಿದ್ದ. ಆದರೆ ಅವನೊಬ್ಬ ಜನಪ್ರಿಯ ಸಾಮಾಜಿಕ ವ್ಯಕ್ತಿ

ಎಂದು ಯಾವುದೇ ರೀತಿಯಲ್ಲೂ ಊಹಿಸಲು ಸಾಧ್ಯವಿಲ್ಲ. ಕಣ್ಸೆಳೆಯುವ ಗುಂಪುಗಳೊಂದಿಗೆ ಅವನು ಮಿಳಿತವಾಗುತ್ತಿರಲಿಲ್ಲ. ಒಬ್ಬ ಋಷಿ ಹಾಗೂ ಒಬ್ಬ ಪ್ರಾಜ್ಞ ಉತ್ತಮವಾಗಿ ಮಿಳಿತವಾಗುವವರಲ್ಲ.

ಪ್ರತಿ ಮನೆಯೂ ಒಂದು ದೇವಾಲಯ, ಪವಿತ್ರ ಸ್ಥಳ. ಸತ್ಯ, ವೃದ್ಧಿ ಹೊಂದುವ ಎಲ್ಲ ಮನುಷ್ಯನ ಕರುಣೆಯ ಚೇತನ ಹೊಳೆದು ಎಲ್ಲರಿಗೂ ಸಹಾನುಭೂತಿ ತೋರುವವರಾಗಬೇಕೆಂಬ ಕನಸು ಕಂಡ. ಚೈತನ್ಯಕ್ಕೆ ಬಡತನ ಹಾಗೂ ಬದುಕಿನ ವೈಭವ ಒಳ್ಳೆಯ ಮನೆಗಳಿಂದ ಮೈಲುಗಳಂತರದಲ್ಲಿರಬೇಕು. "ಬಡವನ ಗುಡಿಸಲಿನಿಂದ ಮಾತ್ರ ಆ ಶಕ್ತಿ ಹಾಗೂ ಪಾವಿತ್ರ್ಯ ಬರುತ್ತದೆ." "ಹೃದಯ ಸಂಪತ್ತಿಲ್ಲದ ಐಶ್ವರ್ಯ ಕುರೂಪಿ ಭಿಕ್ಷುಕನಂತೆ" ಎಂದು ಹೇಳಿದ.

ಎಮರ್ಸನ್ ತನ್ನ ಅಭ್ಯಾಸಗಳಲ್ಲಿ, ಅಭಿರುಚಿಯಲ್ಲಿ ಮಿತವ್ಯಯಿ ಹಾಗೂ ಸರಳವಾಗಿದ್ದು ನಮ್ಮ ನ್ಯಾಯದ ಸಂಕುಚಿತತೆಯನ್ನು ತೋರಿಸುವ ಮಾಂಸ ಭಕ್ಷಣೆಯನ್ನು ಇಷ್ಟಪಡುತ್ತಿರಲಿಲ್ಲ. ತಾನು ತಿನ್ನುವ ಪ್ರಾಣಿಗಿಂತ ಮನುಷ್ಯ ಮೇಲ್ಮಟ್ಟದಲ್ಲಿರುವುದಿಲ್ಲವೆನ್ನುವುದು ಅವನ ಆಲೋಚನೆ.

ಥೋರೋನಂತೆ ಎಮರ್ಸನ್ ತನ್ನ ಅವಶ್ಯಕತೆಗಳನ್ನು ತೀರಾ ಮಿತಗೊಳಿಸಿ ಸರಳ ಆಹಾರ ತಿಂದು, ಮೂರ್ಖರು ಹಾಗೂ ಹೃದಯವಂತಿಕೆ ಇಲ್ಲದವರಿಗಿಂತ ತಾನು ಶ್ರೀಮಂತರಲ್ಲಿ ಅತಿ ಶ್ರೀಮಂತ ಎಂದು ಭಾವಿಸುತ್ತಿದ್ದ. ಥೋರೋವಿನಂತೆ ಎಮರ್ಸನ್ ಕೀಳು ಪ್ರಭಾವ ಬೀರುವ ಆಲ್ಕೋಹಾಲನ್ನು ಕುಡಿಯಲಿಚ್ಛಿಸದಿದ್ದರೂ, ಗಣ್ಯ ಅತಿಥಿಗಳ ಸಂಗದಲ್ಲಿ ಸ್ವಲ್ಪ ದ್ರಾಕ್ಷಾರಸವನ್ನು ಮಾತ್ರ ಸೇವಿಸುತ್ತಿದ್ದ. ಸಂಗಡಿಗರ ಜೊತೆಯಲ್ಲಷ್ಟೆ ಸಿಗಾರಿನ ತುಣುಕೊಂದನ್ನು ಸೇದಿ, ತಂಬಾಕನ್ನು 'ಮಿದುಳನ್ನು ಚದುರಿಸುವ ತಂಬಾಕು' ಎಂದು ಹೇಳುತ್ತಿದ್ದನಲ್ಲದೆ ಸರ್ ಜೇಮ್ಸ್ ಬ್ಯಾರಿಯಂತೆ ನಿಕೋಟಿನ್ ನನ್ನ ಪ್ರಿಯತಮೆ ಎಂದು ಹೇಳುತ್ತಿರಲಿಲ್ಲ. ಮನೆಯಲ್ಲಿ ಯಾವಾಗಲೂ ಅತಿಥಿಗಳಿರುವುದನ್ನು ಅವನು ಇಷ್ಟಪಡುತ್ತಿರಲಿಲ್ಲ. ಅದು ಸೌಜನ್ಯದ ಕೊರತೆಯಿಂದಲ್ಲ. ಆದರೆ ವೇಳೆಯ ಮಹತ್ವದ ಬಗ್ಗೆ ಸೂಕ್ಷ್ಮಪ್ರಜ್ಞೆ ಹೊಂದಿದ್ದು, ಉಪಯೋಗಕ್ಕೆ ಬರುವ ಕೆಲಸಗಳಿಂದ ಆ ವೇಳೆಯನ್ನು ತುಂಬುವುದನ್ನು ಬಿಟ್ಟು ವ್ಯರ್ಥವಾಗಿ ಕಾಲಕಳೆಯುವುದನ್ನವನು ಒಪ್ಪುತ್ತಿರಲಿಲ್ಲ. ಕಲ್ಪನೆ ಇಲ್ಲದೆ ಭೇಟಿಗಾಗಿ ಬರುವವನು "ದಿನವನ್ನು ಹಾಳು ಮಾಡುವಂಥವನು" ಎಂದವನ ಭಾವನೆ.

ಹೊಸ ಹುರುಪನ್ನು ಸಮಾಧಾನವನ್ನು ತರುವ ಸ್ನಾನ ಹಾಗೂ ಔಷಧಿಗಳಂತೆಯೇ ಇರುವ ಸಂಗೀತವನ್ನವನು ಪ್ರೀತಿಸುತ್ತಿದ್ದ. "ಸಂಗೀತ ನಮ್ಮನ್ನು ಯಥಾರ್ಥತೆಯಿಂದ ಹೊರಗೊಯ್ದು" ನಾವು ಯಾರು, ಏನು, ಯಾವಾಗ ಎಲ್ಲಿಗೆ ಎನ್ನುವ ನಮ್ಮ ಅಚ್ಚರಿಯನ್ನು ತಬ್ಬಿಬ್ಬುಗೊಳಿಸುವ ಮಬ್ಬು ರಹಸ್ಯಗಳನ್ನು ಪಿಸುಗುಡುತ್ತದೆ ಎಂದವನು ಬರೆದ.

ದೇವರು ಒಳಿತನ್ನು ಹಾಗೂ ಹಿರಿತನವನ್ನು ರಕ್ಷಿಸುತ್ತಾನೆ. ತನ್ನ ಮೊದಲ ಹೆಂಡತಿಯ ಸಾವು, ಪ್ರೀತಿಯ ಹಾಗೂ ಪ್ರೀತಿಸಬಹುದಾದ ಇಬ್ಬರು ಸೋದರರು ಹಾಗೂ ಐದು ವರ್ಷದ ಮಗ ವಾಲ್ಡೋನನ್ನು ಕಳೆದುಕೊಂಡುದನ್ನು ಸಮಾಧಾನ, ಸ್ಥಿತಪ್ರಜ್ಞತೆಯೊಂದಿಗೆ ಸಹಿಸಿದ. ನಂತರ ಬಂದುದು ಮನೆಯುರಿದು ಹೋದ ದುರಾದೃಷ್ಟ. ಈ ವಿಪತ್ತಿನಿಂದ ಮನೆಯನ್ನು ಮತ್ತೆ ಹಿಂದಿನ ರೂಪಕ್ಕೆ ತರಲು ಬೇಕಾದ ಹಣ ಹಾಗೂ ನೆರವು ಸ್ನೇಹಿತರಿಂದ ಕೂಡಲೇ ಸಿಕ್ಕಿತು.

ಈ ಹಿರಿಯ ವ್ಯಕ್ತಿ ಬದಲಾದ ದೃಶ್ಯ ಹಾಗೂ ಪರಿಸರದಿಂದ ಹೊಸಶಕ್ತಿಯನ್ನು ಪಡೆಯಬಹುದೆಂದು ಅವನ ಸ್ನೇಹಿತರು ಎಮರ್ಸನ್ ಹಾಗೂ ಅವನ ಮಗಳು ಎಲೆನ್‌ಗೆ ವಿದೇಶ ಪ್ರವಾಸದ ಏರ್ಪಾಡು ಮಾಡಿದರು. ಇಂಗ್ಲಿಷರು ಸಹ ಅವನ ಮನೆಯ ಪುನರ್ನಿರ್ಮಾಣಕ್ಕೆ ಸಹಾಯ ನೀಡುವುದಾಗಿ ಹೇಳಿದರೂ ತನ್ನ ದೇಶದ ಜನಗಳು ಕೊಟ್ಟಿರುವ ಸಹಾಯವೇ ಸಾಕೆಂದು ಯೋಚಿಸಿ ಅವರ ಸಹಾಯವನ್ನು ನಿರಾಕರಿಸಿದ.

೧೮೬೭ರಲ್ಲಿ ತನ್ನ ಕೊನೆಯ ಪದ್ಯ "ಟರ್ಮಿನಸ್" ಬರೆದಾಗ ಎಮರ್ಸನ್ ವೃದ್ಧಾಪ್ಯದ ಮುಷ್ಟಿಯಲ್ಲಿದ್ದು (ಆಗ ೬೩ ವರ್ಷಗಳು) ಟ್ಯಾಗೋರರಂತೆ ಸಾವಿನ ಭಯವನ್ನು ಗೆದ್ದುದನ್ನು ಕೆಳಗಿನ ಸಾಲುಗಳು ತೋರಿಸುತ್ತದೆ.

ವಿಶ್ವಾಸದೊಂದಿಗೆ ಭಯವನು ಅಟ್ಟುದೂರ,
ನೇರವಾಗಿ ಮುಂದೆ ಸಾಗು ತೊಂದರೆ ಇಲ್ಲದೆ ;
ಬಂದರು, ಕಾವಲ ಹಡಗು, ಬಳಿ ಇದೆ ;
ಪ್ರತಿ ಅಲೆಯೂ ಮನಮೋಹಕವಾಗಿದೆ.

ಅವನ ನಡುವಯಸ್ಸಿನಲ್ಲಿ ಕೂಡ "ನನ್ನ ಜೀವನವೊಂದು ಮೆ–ಉತ್ಸವದ ವ್ಯಾಯಾಮಕ್ರೀಡೆ. ನಾನು ನನ್ನಿಚ್ಛೆಯಂತೆ ಬದುಕುತ್ತೇನೆ. ನಾನು, ನಿನ್ನ ನೇರ, ದಣಿದ ರೀತಿ–ನೀತಿಗಳನ್ನು ವಿರೋಧಿಸುತ್ತೇನೆ. ಆಗಸ ನೀಲಿಯಾಗಿದೆ. ಗದ್ದೆ–ತೋಪುಗಳು ಹಸಿರಾಗಿವೆ, ಚಿಲುಮೆಗಳಲ್ಲಿ ಹೊಸತನವಿದೆ. ನದಿಗಳು ಸಂತಸದಿಂದಿವೆ. ಸೂರ್ಯ ತಾರೆಯರ ಭವ್ಯತೆ ಸತ್ಕರಿಸುವಂತಿದೆ. ನಾನು ನನ್ನ ಆಟವನ್ನು ಮುಂದುವರಿಸುತ್ತೇನೆ."

ಎಮರ್ಸನ್ ದೈಹಿಕ ಶ್ರಮವನ್ನು ಪ್ರತಿಪಾದಿಸಿದ. ಪ್ರತಿಯೊಬ್ಬನಿಂದಲೂ ತನ್ನ ಕೈಗಳ ಉಪಯೋಗವಾಗಬೇಕು. ಒಬ್ಬ ವ್ಯಕ್ತಿಗೆ ಸಂಸ್ಕೃತಿಯ ಉಳುಮೆಗಾಗಿ ಹೊಲ ಅಥವಾ ಯಂತ್ರವೊಂದಿರಬೇಕು. ನಮ್ಮ ಹಿರಿಯ ಸಾಧನೆಗೆ ಕವನ ಹಾಗೂ ತತ್ವಚಿಂತನೆಯ ಸೂಕ್ಷ್ಮ ಮನರಂಜನೆಗೆ ನಮ್ಮ ಕೈಗಳ ಕೆಲಸದಲ್ಲಿ.... ದುಡಿಮೆ ದೇವರ ಶಿಕ್ಷಣ...." "ಅಭಿವೃದ್ಧಿಗಿಂತ ಸ್ವಲ್ಪ ಪ್ರಾಮಾಣಿಕತೆ ಉತ್ತಮವಾದುದು" ಎಂದವನು ತರುಣರಿಗೆ ವಿಶೇಷವಾಗಿ ಹೇಳುತ್ತಿದ್ದ : "ನಿಮ್ಮ ಸ್ವಂತ ಮಾನಸಿಕ

ಪ್ರಾಮಾಣಿಕತೆಗಿಂತ ಪವಿತ್ರವಾದುದು ಬೇರೇನೂ ಇಲ್ಲ." ಎಮರ್ಸನ್ ಸಮಾಜಕ್ಕಾಗಿ ದುಡಿಯುವುದರಲ್ಲಿ ನಂಬಿಕೆ ಇಟ್ಟಿದ್ದ. ಅಗ್ನಿ ಸಂಸ್ಥೆಯ ಸದಸ್ಯನಾಗಿ ಸೇವೆ ಸಲ್ಲಿಸಿದ. ಯಾವುದೇ ಸಣ್ಣ ದರ್ಜೆಯಲ್ಲಿದ್ದು ಕೂಡ ತನ್ನ ಜೊತೆಗಾರರ ಸೇವೆ ಮಾಡಲು ಹಿಂಜರಿಯುತ್ತಿರಲಿಲ್ಲ. ಸಮಾಜ ಹಾಗೂ ರಾಜ್ಯದ ಬಗ್ಗೆ ಅವನಲ್ಲಿ ಉದಾತ್ತ ನಿಷ್ಠೆ ತುಂಬಿತ್ತು.

ಎಮರ್ಸನ್ನನ ಪ್ರಕಾರ ಒಬ್ಬ ನಿಷ್ಠಾವಂತ ವಿದ್ವಾಂಸ ತನ್ನ ರಚನಾತ್ಮಕತೆಯಲ್ಲಿ, ಸ್ವಾತಂತ್ರ್ಯ, ಶೌರ್ಯ, ನಿಷ್ಠೆ, ಸತ್ವಪರಿಪಾಲನೆ ಹಿರಿಯ ಕಾರ್ಯಗಳಿಗಾಗಿ ತ್ಯಾಗದ ಹುಮ್ಮಸ್ಸು ಮುಂತಾದ ಗುಣಗಳನ್ನು ಹೊಂದಿರಬೇಕು. ಸಮಾಜದಲ್ಲಿ ಬಾಲಿಶತನ ತುಂಬಿರುವುದನ್ನು ಅವನು ಗಮನಿಸಿದ. ಪ್ರತಿ ಉದ್ಯಮಶೀಲವ್ಯಕ್ತಿ ತನ್ನ ಜೀವನೋಪಾಯವನ್ನು ಸತ್ಯ ಮಾರ್ಗಗಳ ಹೊರತು ಪಡೆಯುವವರೆಗೂ ಸಮಾಜವು ಅನಾಗರಿಕವೆನಿಸುತ್ತದೆ. ಹಿರಿಯ ನಗರಗಳಲ್ಲಿ ಸಮಾಜವು ಬಾಲಿಶವಾಗಿದೆ ಹಾಗೂ ಸಂಪತ್ತು ಒಂದು ಆಟಿಕೆಯಾಗಿ ಮಾಡಲ್ಪಟ್ಟಿದೆ ಎಂದವನು ಬರೆದ.

ಮತ್ತೆ, ''ಉತ್ತಮ ಗುರಿ ಹೊಂದಿದ ಸಮಾಜದ ಉಗಮ, ನೀತಿಯುತವಾಗಿರಬೇಕು. ಅದು ಸ್ವರ್ಗೀಯ ಚಕ್ರಗಳ ಜಾಡಿನಲ್ಲೇ ಓಡಬೇಕು. ಅದು ತನ್ನ ಗುರಿಗಳಲ್ಲಿ ಮನೋವೈಶಾಲ್ಯ ಹೊಂದಿರಬೇಕು" ಎಂದು ಬರೆದ. ಸಮಾಜದ ಸೌಂದರ್ಯಪ್ರಜ್ಞೆಯ ಬಗ್ಗೆ ಅವನ ಹೇಳಿಕೆಗಳು "ಸೌಂದರ್ಯ ಪ್ರಜ್ಞೆ" ಎಂಬ ಪದ ಸಂಕುಚಿತ ಹಾಗೂ ಕೆಲವೊಮ್ಮೆ ಅತಿನಿಂದ್ಯ ಅರ್ಥ ಕೊಡುತ್ತದೆ. ಅಲಂಕಾರ ಪ್ರಜ್ಞೆಯ ಶ್ರೇಷ್ಠತೆ ಹಾಳಾಗಿದೆ.... ಉಗಿ, ಭಾವಚಿತ್ರಗಳು, ಬಲೂನ್‌ಗಳು ಅಥವಾ ಖಗೋಳ ಶಾಸ್ತ್ರ.......ಗಳಿಗಿಂತ ನಾವು ನಮ್ಮ ನಾಗರಿಕತೆಗಾಗಿ ಆಳವಾಗಿ ನೋಡಬೇಕೆನ್ನುವುದರ ಬಗ್ಗೆ ಅನೇಕ ವಿಷಯಗಳು ಸಹಮತವಾಗಿವೆ... ಅದು (ನಾಗರಿಕತೆ) ನಾಯಕನಲ್ಲಿ ಅಂತ್ಯಗೊಂಡಿಲ್ಲ ಅಥವಾ ಅಂತ್ಯಗೊಳ್ಳುವ ಲಕ್ಷಣಗಳನ್ನು ನೀಡಿಲ್ಲ. ಇದೊಂದು ಮಧ್ಯಮ ವರ್ಗದವರ ಸ್ವೇಚ್ಛಾ ಜೀವನದ ಸುಳ್ಳಿನ ತೇಪೆಯ ಉನ್ಮತ್ತ ಪ್ರಜ್ಞಾಪ್ರಭುತ್ವ.

ಎಮರ್ಸನ್ ಅಲೆದಾಟದ ಪ್ರವೃತ್ತಿಯ ವ್ಯಕ್ತಿಯನ್ನು ಇಷ್ಟಪಡುತ್ತಿರಲಿಲ್ಲ. (ಎಲ್ಲಿಯೋ ಇದ್ದು) ಎಲ್ಲೆಡೆಯೂ ಇದ್ದಂತಿದ್ದು ಆದರೆ ಇಲ್ಲಿ ಇಲ್ಲದವರ ಅವನ ಒಪ್ಪಿಗೆಯನ್ನು ಪಡೆಯಲಾಗುತ್ತಿರಲಿಲ್ಲ. ಪ್ರಯಾಣದ ಬಗ್ಗೆ ಆತ ನಿರಾಸಕ್ತ.

ಎಲ್ಲ ಸಂದರ್ಭಗಳಲ್ಲೂ ಸ್ಥಿಮಿತವನ್ನು ಕಾಯ್ದುಕೊಳ್ಳುತ್ತಿದ್ದ ವ್ಯಕ್ತಿ ಎಮರ್ಸನ್. ಯಾರಾದರೂ ಸಹ ಜೀವಿಗಳಿಗೆ ತನ್ನ ಮನೆಯಲ್ಲಿ ಆಶ್ರಯ ಕೊಟ್ಟಿದ್ದರೆ ಅವನು ಹೆಚ್ಚು ಸುಖಿಯಾಗುತ್ತಿದ್ದ. ಅಲ್ಕಿಟರಿಗೆ (ದಂಪತಿಗಳಿಗೆ) ಆತ ಒಂದು ವರ್ಷ ಉಚಿತ ಆತಿಥ್ಯ ಒದಗಿಸಿದ. ಆದರೆ ಅವನ ಯೋಜನೆ ನಿರಾಶಾದಾಯಕವೆಂದು ಸಿದ್ಧವಾಯ್ತು. ತನ್ನ ನೌಕರರ ಬಗ್ಗೆ ದಯಾಳುವಾಗಿ ವರ್ತಿಸುತ್ತಿದ್ದ. ಸಾಮಾನ್ಯ

ಕುಟುಂಬ ಮಂಡಳಿಯ ಪಿತೃಪ್ರಧಾನ ಸಂಸ್ಥೆಯೊಂದನ್ನು ಪುನರುಜ್ಜೀವನಗೊಳಿಸಲು ಇಚ್ಛಿಸಿದ. ಆದರೆ ಕೆಲಸದಾಳು ಲೂಸಿಯ ಅಡಿಗೆಯವಳಾದ ಲಿಡಿಯಾ ಜೊತೆ ಕೂಡುತ್ತಿರಲಿಲ್ಲ ಹಾಗೂ ತನ್ನೊಂದಿಗೆ ಕುರ್ಚಿಯಲ್ಲಿ ಕೂಡಲು ಲೂಸಿಯ ಅನರ್ಹಳು ಎನ್ನುವುದು ಲಿಡಿಯಾಳ ಅಭಿಪ್ರಾಯ. ಹಾಗಾಗಿ ಈ ಭವ್ಯ ಆಲೋಚನೆ ಹಾಸ್ಯಾಸ್ಪದವಾಗಿ ಕೊನೆಗೊಂಡಿತು.

ಏಕಾಂತತೆಯೊಂದಿಗೆ ಸಂಧಿಮಾಡಿಕೊಂಡ ಸಂತನಾದರೂ ನಿಜ ಜೀವನದೊಂದಿಗೆ ಸಂಬಂದ ಕಳಚಿಕೊಂಡವನಲ್ಲ. ಅತಿ ಶೀಘ್ರವೇ ಯಶಸ್ಸು ಅವನನ್ನು ಹಿಂಬಾಲಿಸಿತು. ೧೮೬೩ರಲ್ಲಿ ವೆಸ್ಟ್ ಪಾಯಿಂಟಿನ ಮಿಲಿಟರಿ ಅಕಾಡೆಮಿಯ "ವಿಸಿಟರ್"ಆಗಿ ಮಾಡಲ್ಪಟ್ಟ. ಹಾಗೂ ೧೮೬೬ರಲ್ಲಿ ಹಾರ್ವರ್ಡಿನ "Phi Beta Kappa" ಭಾಷಣಕಾರನಾದನು; ೧೮೬೭ರಲ್ಲಿ ತನ್ನ ಸ್ವಂತ ಕಾಲೇಜಿನಿಂದಲೇ L.L.D. ಪದವಿಯನ್ನು ಅವನಿಗೆ ನೀಡಲಾಯ್ತು. ೧೮೬೭–೧೮೭೯ರವರೆಗೂ ಹಾರ್ವರ್ಡ್ ಓವರ್‌ಸೀರ್ ಆಗಿ ಸೇವೆ ಸಲ್ಲಿಸಿದ. ೧೮೭೦ರಲ್ಲಿ "Natural History of Intellect" ಎಂಬ ವಿಷಯದ ಬಗ್ಗೆ ಉಪನ್ಯಾಸ ಸರಣಿಯೊಂದನ್ನು ನೀಡಿದ. ೧೮೭೪ ರಲ್ಲಿ ಗ್ಲಾಸ್ಗೋ ವಿಶ್ವವಿದ್ಯಾಲಯದ ಮುಖ್ಯಾಧಿಕಾರಿಯಾಗಿ ನೇಮಿಸಲ್ಪಟ್ಟ. ೧೮೭೬ರಲ್ಲಿ ವರ್ಜೀನಿಯಾ ವಿಶ್ವವಿದ್ಯಾಲಯವನ್ನುದ್ದೇಶಿಸಿ ಮಾತನಾಡುವ ಗೌರವ ಪ್ರಾಪ್ತವಾಯ್ತು. ೧೮೮೧ರಲ್ಲಿ ಕಾರ್ಲೈಲ್‌ನ ಸಾವಿನ ಬಗ್ಗೆ ಮಾತಾಡಿದ. ೧೮೮೨ರಲ್ಲಿ ಲಾಂಗ್‌ಫೆಲೋನ ಅಂತ್ಯಕ್ರಿಯೆಯ ಸಂದರ್ಭದಲ್ಲಿ ಮಾತನಾಡಿದ.

ಎಮರ್ಸನ್ ೧೮೨೫ ರಿಂದ ೧೮೨೬ರವರೆಗೂ ಡಿವಿನಿಟಿ ಶಾಲೆಯಲ್ಲಿದ್ದು, ೧೮೨೬ರಲ್ಲಿ ಅವನನ್ನೇ ಉಪದೇಶಕನನ್ನಾಗಿ ಮಾಡಿದ್ದು ೧೮೩೨ರಲ್ಲಿ ಅವನು ಚರ್ಚಿನಿಂದ ಪ್ರತ್ಯೇಕಗೊಂಡ ವಿಷಯ ಓದುಗರಿಗೆ ಆಸಕ್ತಿದಾಯಕವಾಗಿರಬಹುದು. ಅವನು ತನ್ನನ್ನು ತಾನೇ ಸಾರ್ವಜನಿಕ ಭಾಷಣಕಾರ ಹಾಗೂ ಉಪದೇಶಕನನ್ನಾಗಿಸಿಕೊಂಡ.

ಗುಲಾಮಗಿರಿಯನ್ನು ಖಂಡಿಸುವ ಅವನ ಶಕ್ತಿಶಾಲಿ ಭಾಷಣಗಳು, ಸಮಾಜದ ತಪ್ಪುಗಳು ಹಾಗೂ ಕುಂದು ಕೊರತೆಗಳತ್ತ ಜನರ ಜೀವನವನ್ನು ತಿನ್ನುವ ರೋಗದ ಕ್ರಿಮಿಗಳಂಥ ಕಪಟ ಹಾಗೂ ಬೂಟಾಟಿಕೆಯತ್ತ, ಹೃದಯ ಹೀನ ಹಾಗೂ ಶ್ರೀಮಂತ ಭಿಕ್ಷುಕರತ್ತ ಗುರಿಹೊಂದಿದ್ದು, ಅವನ ಎಲ್ಲ ಭಾಷಣಗಳಂತೆಯೇ ಅದ್ಭುತವಾಗಿದ್ದವು. ಗುಲಾಮರ ಸಾಗಾಣಿಕೆಯ ಸಮಸ್ಯೆ ಎರಡು ದಶಕಗಳವರೆಗೂ ಅವನನ್ನು ಕಾರ್ಯನಿರತನನ್ನಾಗಿಸಿ, ವಿದ್ಯಾರ್ಥಿ ಹಾಗೂ ಕಾನೂನಿನ ಪ್ರತಿಪಾದಕನನ್ನಾಗಿಸಿತು. ೧೮೭೨ರ ವೇಳೆಗೆ ಅವನು ಸಾರ್ವಜನಿಕ ಸಂಸ್ಥೆಯಂತಾಗಿ ಇಡೀ ನಾಗರಿಕ ಪ್ರಪಂಚದ ಮೇಲೆ ತಾರೆಯಂಥ ಪ್ರಭಾವ ಬೀರಿದ.

ಎಮರ್ಸನ್ನನ ಇಡೀ ವ್ಯಕ್ತಿತ್ವ, ಅಸತ್ಯತೆ ಬೂಟಾಟಿಕೆ, ಅನ್ಯಾಯಗಳ ವಿರುದ್ಧ ಸಿಡಿದೆದ್ದಿತ್ತು. ಅಮೆರಿಕ ಹಾಗೂ ಚೆರೋಕೀ ಜನಗಳ (ಆದಿನಿವಾಸಿಗಳು) ನಡುವಿನ ಸಂಘರ್ಷದಲ್ಲಿ ಆದ ಒಪ್ಪಂದದ ಪ್ರಕಾರ ಚೆರೂಕಿಯ ಎಲ್ಲಾ ಪ್ರದೇಶವೂ ಗುತ್ತಿಗೆ ಹಿಡಿಯಲ್ಪಟ್ಟಿದ್ದು (ಡಿಸೆಂಬರ್ ೧೮೩೫ರಲ್ಲಿ), ಎರಡೂ ಕಡೆಯ ಇಬ್ಬಂದಿ ವ್ಯಕ್ತಿಗಳಿಂದ ಅಂತ್ಯಗೊಂಡಿತು. ಎಮರ್ಸನ್ ೧೮೩೭ರಲ್ಲಿ ಅಧ್ಯಕ್ಷ ಮಾರ್ಟಿನ್ ವಾನ್ ಬ್ಯುರೆನ್‌ಗೊಂದು ಪತ್ರ ಬರೆದ. ಆ ಪತ್ರದ ಆಯ್ದ ಭಾಗವೊಂದು ಎಮರ್ಸನ್ನನ ನಿರ್ಭೀತ ಮನೋಭಾವವನ್ನು ತೋರಿಸುತ್ತದೆ. "ಸರ್, ಈ ಒಪ್ಪಂದಕ್ಕೆ ನಿಮ್ಮ ಮುದ್ರೆ ಒತ್ತಿದ್ದೇ ಆದರೆ, ನೀವು ಕುಳಿತುಕೊಳ್ಳುವ ಪ್ರಖ್ಯಾತ ಆಸೀನವನ್ನು ನೀವು ಕುಖ್ಯಾತಿಗೊಳಿಸುತ್ತೀರಿ ಹಾಗೂ ಇದುವರೆಗೂ ಧರ್ಮ ಮತ್ತು ಸ್ವಾತಂತ್ರ್ಯದ ಮಧುರ ಸೂಚಕವಾಗಿದ್ದ ಈ ರಾಷ್ಟ್ರದ ಹೆಸರು ವಿಶ್ವದ ದೃಷ್ಟಿಯಲ್ಲಿ ದುರ್ಗಂಧ ಬೀರುವಂತಾಗುತ್ತದೆ.... ನರಳುವವನು ಎಷ್ಟೇ ಅಶಕ್ತನಾಗಿರಲಿ, ದಬ್ಬಾಳಿಕೆ ನಡೆಸುವವನು ಎಷ್ಟೇ ಶಕ್ತನಾಗಿರಲಿ, ಹೊಡೆತ ದಬ್ಬಾಳಿಕೆ ನಡೆಸುವವನನ್ನೇ ಸುತ್ತಿಕೊಳ್ಳುತ್ತದೆ ಎನ್ನುವುದು ಪ್ರಕೃತಿ ನಿಯಮ. ಕಾರಣ ದೇವರು ಭಾವನೆಗಳಲ್ಲಿರುತ್ತಾನೆ. ಅದು ಸಹಿಸಲು ಸಾಧ್ಯವಾಗದ್ದು....."

ಎಮರ್ಸನ್‌ನಲ್ಲಿದ್ದ ದಾರ್ಶನಿಕತೆ, ದಯಾಳು ರಾಜರು ಹಾಗೂ ಕುಲೀನರನ್ನು ಒಪ್ಪಿತೇ ಹೊರತು, ಕೂಡಲೇ ನಿರಂಕುಶಾಧಿಕಾರಕ್ಕೆ ತಿರುಗುವ ಪಿತೃ ಪ್ರಧಾನ ರೂಪದ ಸರ್ಕಾರವನ್ನಲ್ಲ. ಅಮೆರಿಕನ್ನರಿಗೆ ಬೇರಾವ ರೂಪದ ಸರ್ಕಾರಕ್ಕಿಂತ ಪ್ರಜಾಪ್ರಭುತ್ವ ಸರಿಹೊಂದುತ್ತಿತ್ತು. ಕಾರಣ ಜನರ ಧಾರ್ಮಿಕ ಭಾವನೆಗಳು ಪ್ರಜಾಪ್ರಭುತ್ವದ ಪ್ರಕಾರಕ್ಕೆ (ಒಡಂಬಡಿಕೆಗೆ) ಸರಿಹೊಂದುತ್ತಿದ್ದವು. ಈ ದೃಷ್ಟಿಯಲ್ಲಿ "ಪ್ರತಿಯೊಂದು ರಾಜ್ಯವೂ ಭ್ರಷ್ಟವಾದುದು. ಒಳ್ಳೆಯ ವ್ಯಕ್ತಿಗಳು ನ್ಯಾಯಕ್ಕೆ ಅತಿಯಾಗಿ ವಿಧೇಯರಾಗಿರಬಾರದು." ಕೇವಲ ಹಕ್ಕು ಹಾಗೂ ಪ್ರೀತಿಯ ತತ್ವಗಳ ಮೇಲೆ ರಾಜ್ಯ ನವೀಕರಣವಾಗಬಲ್ಲದು.

ರಾಜಕೀಯದಲ್ಲಿದ್ದು ಕಳಂಕಿತನಾಗುವುದು ಎಮರ್ಸನ್ನನ ಸ್ವಭಾವಕ್ಕೆ ವಿರೋಧವಾದುದು. ಆದರೆ ರಾಜಕೀಯ ಸಮಸ್ಯೆಗಳು ಅವನನ್ನು ಕಾಡದಿರಲಿಲ್ಲ. ರಾಜಕೀಯದ ಬಗ್ಗೆ ಯೋಚಿಸಿದಷ್ಟು ಸರ್ಕಾರದ ಗುರಿಯೇ ನೀತಿಯಾಗಿರಬೇಕೆಂದು ಯೋಚಿಸುತ್ತಿದ್ದ. ಎಮರ್ಸನ್ ಒಬ್ಬ ಸಮಾಜವಾದಿಯೆ? ಅವನನ್ನೊಬ್ಬ ರಾಜಕಾರಣಿ ಎಂದು ವಿಂಗಡಿಸದಿರುವುದು ಒಳ್ಳೆಯದು. ಅನೇಕ ಬುದ್ಧಿಜೀವಿಗಳ ಪ್ರಕಾರ ಎಮರ್ಸನ್ ಕ್ರಾಂತಿಯ ಚೈತನ್ಯವನ್ನು ಪ್ರತಿನಿಧಿಸುತ್ತಿದ್ದ. ಅವನು ಯಾವಾಗಲೂ ವ್ಯಕ್ತಿಯನ್ನು ಸಮಾಜದ ಬಹುಮುಖ್ಯ ಘಟಕವೆಂದು ಯೋಚಿಸುತ್ತಿದ್ದ. ಸ್ವಾವಲಂಬನೆ ಹಾಗೂ ಅವಕಾಶದ ತತ್ವಗಳು ಪ್ರಜಾಪ್ರಭುತ್ವದತ್ತ ಅವನನ್ನು ಓಲುವಂತೆ ಮಾಡುತ್ತಿದ್ದವು.

ಧರ್ಮಬೋಧಕ, ಕವಿ ಹಾಗೂ ದಾರ್ಶನಿಕನಾಗಿ ಎಮರ್ಸನ್ನನನ್ನು

ಮರೆಯುವಂತಿಲ್ಲ. ಅವನು ತನ್ನ ಕವನಗಳು, ಪ್ರಬಂಧಗಳು ಹಾಗೂ ಭಾಷಣಗಳ ಮೂಲಕ ಜೀವಂತವಾಗಿದ್ದಾನೆ. ಕೊನೆ ಇಲ್ಲದ ವೈವಿಧ್ಯಮಯ ವಿಷಯಗಳ ಮೇಲಿನ ಶ್ರೀಮಂತ ಗದ್ಯರಚನೆಗಳು (ಬ್ರಹ್ಮ) *Brahma, Wardnotes, Friendship, Beauty, May Day, Borton Hymen, Give all to Love.* ಇತ್ಯಾದಿ ವಿವಿಧ ವಿಷಯಗಳ ಸುತ್ತ ಹೆಣೆದ ಚಿತ್ರಾಕಾರದ ಅವನ ಕವನಗಳು ಆಳವಾದ ಆಲೋಚನೆಗಳಿಂದ ಕೂಡಿವೆ.

Spiritual laws, Love, Self Reliance, Friendship, the Over-soul, Art, Character of the Poet ಮುಂತಾದ ಪ್ರಬಂಧಗಳಲ್ಲದೆ ವಿಶ್ವವು ಎಮರ್ಸನ್ನನನ್ನು *'Representative Men'* (ಪ್ಲೇಟೋ, ಸ್ವೆಡನ್‌ಬರ್ಗ್ ನೆಪೋಲಿಯನ್, ಶೇಕ್ಸ್‌ಪಿಯರ್, ಗಯಟೆ ಮುಂತಾದವರ ಬಗ್ಗೆ ವಿದ್ವತ್ಪೂರ್ಣ ವಿಮರ್ಶೆಗಳು) *Society & Solitude English Traits, the Conduct of Life, Letters & Social Aims, & Addrerses (On the American Scholar, Literary Ethics, The Method of Nature, The Transcendetalist etc)* ಮುಂತಾದವುಗಳ ಹೆಸರಾಂತ ಬರಹಗಾರನೆಂದು ನೆನೆಯುತ್ತದೆ. ಎಮರ್ಸನ್ ಪ್ರಾಚೀನ ಭಾರತದ ಧಾರ್ಮಿಕ ಸಿದ್ಧಾಂತಗಳ ಸಾರ ಹೀರಿದ್ದನೆನ್ನುವುದು ಅವನ ಬರವಣಿಗೆಗಳಿಂದ ಸ್ಪಷ್ಟವಾಗಿದೆ.

ಅಂತ್ಯ ಸಮೀಪಿಸುತ್ತಿದ್ದಂತೆ ಅವನ ಶಕ್ತಿ ವೇಗವಾಗಿ ಉಡುಗಿತು. ಅವನ ಸ್ನೇಹಿತರಿಗೆ ಅವನ ಅತ್ಯಂತ ಪ್ರೀತಿಯ ಗೆಳೆಯ ಕಾರ್ಲೈಲ್‌ನಿಗೂ ಕಾಗದ ಬರೆಯುವ ಹಾಗೂ ಯಾವುದೇ ಗೋಜಲು ವಿಷಯಗಳ ಬೆನ್ನಟ್ಟುವ ಶಕ್ತಿ ಉಳಿದಿರಲಿಲ್ಲ. ವಾರದ ಹಿಂದಷ್ಟೇ ತಾನು ಅಂತ್ಯಕ್ರಿಯೆಗೆ ಹೋಗಿದ್ದ ಲಾಂಗ್‌ಫೆಲೋನ ರೂಪವನ್ನು ಚಿತ್ರಿಸಿಕೊಳ್ಳಲು ಅವನಿಗೆ ಕಷ್ಟವಾಯ್ತು. ಸಂಧಿಯ ಕಥೆಯಾಗಿದ್ದು ಅವನನ್ನು ಸಂತೋಷಗೊಳಿಸುತ್ತಿದ್ದ *Paul Revere's Ride* ನ ಭಾಗವೊಂದನ್ನು ಅವನ ಮಗ ಇ.ಡಬ್ಲ್ಯು. ಎಮರ್ಸನ್ ಅವನಿಗೆ ಓದಿ ಹೇಳುತ್ತಿದ್ದ – ಬಹುಶಃ ಕೊನೆಯ ಭಾಗವನ್ನು ಅವನು ಇಷ್ಟಪಟ್ಟಿದ್ದ.

೧೮೮೨ರ ಏಪ್ರಿಲ್‌ನ ಮಧ್ಯಭಾಗದ ವೇಳೆಗೆ ಎಮರ್ಸನ್‌ಗೆ ಛಳಿ ಹಿಡಿದು, ಕೆಲದಿನ ಜ್ವರ ಕಾದು, ಓವರ್‌ಕೋಟ್ ಹಾಕಿಕೊಳ್ಳದೆ ಮಳೆಯಲ್ಲಿ ನಡೆದುದು ಅವನ ರೋಗ ಉಲ್ಬಣವಾಗುವಂತೆ ಮಾಡಿತು. ಶೀತ ನ್ಯುಮೋನಿಯಾಕ್ಕೆ ತಿರುಗಿತು. ಡಾ. ಚಾರ್ಲ್ಸ್ ಪುಟ್ನಂಗೆ, ಕೆಂಕಾರ್ಡಿನ ಸಂತ ಎಮರ್ಸನ್ನನಿಗೆ ಚಿಕಿತ್ಸೆ ನೀಡುವ ಹೆಗ್ಗಳಿಕೆ ಹಾಗೂ ಹಕ್ಕುಗಳು ದೊರೆತವು. ಮರಣ ಸಂಕಟ ಬಂದಾಗ, ನಿದ್ರೆ ಬರಿಸಲು ಅವನಿಗೆ ಈಥರ್ ನೀಡಲಾಯ್ತು. ೧೮೮೨ರ ಏಪ್ರಿಲ್ ೨೭ರಂದು ಅವನು ಶಾಂತಿಯಿಂದ ಕೊನೆಯುಸಿರೆಳೆದ.

ಮೂರು ದಿನಗಳ ನಂತರ ಭಾನುವಾರ ಏಪ್ರಿಲ್ ೩೦ರಂದು ಸ್ಲೀಪಿ

ಹಾಲೋ ಎನ್ನುವ ಗುಡ್ಡದ ಮೇಲೆ ಅವನ ತಾಯಿ ಹಾಗೂ ಮಗುವಿನ ಪಕ್ಕ, ಪೈನ್ ಮರವೊಂದರ ಕೆಳಗೆ ಅವನ ಶರೀರವನ್ನು ಸಮಾಧಿ ಮಾಡಲಾಯ್ತು. ಸಾಯುವ ಸಮಯಕ್ಕೆ ಬಹಳ ಹಿಂದೆಯೇ ಎಮರ್ಸನ್ ತಾನೇ ತನ್ನ ಚಿರ ವಿಶ್ರಾಂತಿಯ ಜಾಗವನ್ನು ಆಯ್ಕೆ ಮಾಡಿಕೊಂಡಿದ್ದ.

ಹೀಗೆ ಎಮರ್ಸನ್ನನ ಭವ್ಯ ಜೀವನ ಕೊನೆಗೊಂಡಿತ್ತು, ಆದರೆ ಅವನ ಪ್ರಭಾವವಲ್ಲ. ಇಂದಿಗೂ ನಾವು ನಮ್ಮ ಆಧ್ಯಾತ್ಮಿಕ ಸಮಸ್ಯೆಗಳನ್ನು ನ್ಯೂಟನ್ ಹಾಗೂ ಐನ್‌ಸ್ಟೀನರಿಗಿಂತ, ಬುದ್ಧ, ಯೇಸುಕ್ರಿಸ್ತ ಎಮರ್ಸನ್, ಟಾಲ್‌ಸ್ಟಾಯ್, ರಾಮಕೃಷ್ಣ ಹಾಗೂ ಗಾಂಧಿಯವರಲ್ಲಿಗೊಯ್ಯುತ್ತೇವೆ.

* * * *

೭. ಲಿಯೋ ಟಾಲ್‌ಸ್ಟಾಯ್

ಡಾ. ಎ.ಕೆ. ದಾಸಗುಪ್ತ

ಲಿಯೋ ಟಾಲ್‌ಸ್ಟಾಯ್, ರಷ್ಯದ ಸುಪ್ರಸಿದ್ಧ ಟಾಲ್‌ಸ್ಟಾಯ್ ವಂಶದಿಂದ ಬಂದವನು. ಅವನ ಪೂರ್ವಜರು ಹಿರಿಯ ಜಮೀನ್‌ದಾರರು ಮತ್ತು ಸಾವಿರಾರು ಜೀತದಾಳು ಹಾಗೂ ಆಶ್ರಯಿಗಳ ಒಡೆಯರು. ದರ್ಬಾರಿನ ಪಿತೂರಿ ಹಾಗೂ ರಾಜಕೀಯ ಯುಕ್ತಿ ಕೌಶಲ್ಯಗಳನ್ನು ಇಷ್ಟಪಟ್ಟಂತೆಯೇ ಯುದ್ಧವನ್ನು ಇಷ್ಟಪಡುತ್ತಿದ್ದ ಸಾಮರ್ಥ್ಯ ಶಾಲಿಗಳು. ಅವರಲ್ಲಿ ಕೆಲವರು ಆಡಳಿತ ಹಾಗೂ ಯುದ್ಧ ರೀತಿಯ ಕಾರ್ಯಾಚರಣೆಯಲ್ಲೂ ಹಾಗೂ ನೆಪೋಲಿಯನ್‌ನ ಯುದ್ಧಗಳಲ್ಲಿಯೂ ಸಕ್ರಿಯವಾಗಿ ಭಾಗವಹಿಸಿದ್ದರು.

ಲಿಯೋನ ತಂದೆ, ನಿಕೋಲಾಯ್ ಟಾಲ್‌ಸ್ಟಾಯ್ (*War and Peace*ನಲ್ಲಿ ರೋಸ್ಟೋವ್‌ನ ರೂಪದರ್ಶಿ) ೧೮೧೨ರ ನೆಪೋಲಿಯನ್ ವಿರುದ್ಧ ಕಾರ್ಯಾಚರಣೆಗೆ ಹೋದ. ಅವನ ತಾಯಿ, ರಾಜಕುಮಾರಿ ವೆಲ್ಕೋಂಸ್ಕಿ ರಷ್ಯನ್, ಫ್ರೆಂಚ್, ಜರ್ಮನ್, ಇಂಗ್ಲಿಷ್ ಮತ್ತು ಇಟಾಲಿಯನ್ ಭಾಷೆ ತಿಳಿದಿದ್ದು, ಜಾನಪದ ಕಥೆ ಹೆಣೆಯಬಲ್ಲವಳಾಗಿದ್ದಳು. ಅವಳಲ್ಲಿ ಗೌರವಾನ್ವಿತ ಗುಣಗಳಿದ್ದವು. ಟಾಲ್‌ಸ್ಟಾಯ್ ದಂಪತಿಗಳು ಎಲ್ಲ ರಷ್ಯನ್ ಗೌರವಾನ್ವಿತ ಕುಟುಂಬಗಳಂತೆ ಮದುವೆಯ ಮೂಲಕ ಒಳ ಸಂಬಂಧಿಗಳಾಗಿದ್ದರು.

ಲಿಯೋ ಎರಡು ವರ್ಷದವನಾಗುವ ಮೊದಲೇ ತನ್ನ ತಾಯಿಯನ್ನು ಕಳೆದುಕೊಂಡ. ಅವನು ತನ್ನ ಚಿಕ್ಕಮ್ಮಂದಿರು ಹಾಗೂ ಮನೆಯ ಆಳುಗಳಿಂದ ತನ್ನ ತಾಯಿಯ ಬಗ್ಗೆ ಸಾಕಷ್ಟು ಕೇಳಿದ್ದ. ತನ್ನ ತಾಯಿಯ ಆಧ್ಯಾತ್ಮಿಕ ಗುಣಗಳ ಬಗ್ಗೆ ತುಂಬಾ ಗೌರವವಿಟ್ಟಿದ್ದ. ಅವಳನ್ನು ಜ್ಞಾಪಿಸಿಕೊಂಡಾಗಲೆಲ್ಲಾ ಅವಳ ಪುಣ್ಯ ಜೀವನದ ಬಗ್ಗೆ ನೆನೆಯುತ್ತಿದ್ದ. ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಅವಳಿಗೆ ರೂಸೋನ ಎಮಿಲಿಯೇ ಸ್ಫೂರ್ತಿ. ತನ್ನ ಮಕ್ಕಳು ಕೇವಲ ಎಚ್ಚರಿಕೆಯ ಸ್ವಭಾವದವರಾಗಿರುವುದಷ್ಟೇ ಅಲ್ಲ, ಅವರು ದಯಾಳುಗಳೂ ಆಗಿರುವುದನ್ನವಳು ಇಷ್ಟಪಡುತ್ತಿದ್ದಳು.

೧೮೨೮ರ ಆಗಸ್ಟ್ ೨೮ರಂದು ಲಿಯೋ ಈ ಪ್ರಪಂಚಕ್ಕೆ ಬಂದ. ಅವನಿಗೆ ಮೂವರು ಸೋದರರಿದ್ದರು. ನಿಕೊಲಾಯ್ (ಲಿಯೋನ ಪ್ರಿಲೆಪಾತ್ರ), ಸೆರ್ಗೈ

(ಒಬ್ಬ ಸೊಗಸುಗಾರ), ಮಿತ್ರಿ (ನಯವಂಚಕ ಅನ್ನಾ ಕಕರೆನಿನದ ಲೆವಿನ್‌ನ ಸೋದರನ ರೂಪದರ್ಶಿ) ಹಾಗೂ ಮತ್ತೊಬ್ಬ ಸೋದರಿ ಮರ್ಫಾ ನಿಕೋಲಾಯೆವ್ನಾ (ಅವಳು ಸನ್ಯಾಸಿಯಾದಳು). ಯಾಸ್ನಾಯಾ ಪೊಲ್ಯಾನಾದಲ್ಲಿ ನೆಲಸಿ, ಅಸಾಮಾನ್ಯವಾಗಿ ತನ್ನ ಜೀತದಾಳುಗಳ ಬಗ್ಗೆ ದಯಾಳುವಾಗಿದ್ದ ಅವನ ತಂದೆಯ ಸುಂದರ ವ್ಯಕ್ತಿತ್ವದಿಂದ ಲಿಯೋ ಬಹಳ ಪ್ರಭಾವಿತನಾಗಿದ್ದ. ಬೇಟೆಯ ಬಗ್ಗೆ ತನ್ನ ತಂದೆಯ ಆಸಕ್ತಿ ಕೂಡ ಅವನ ಕಾಲ್ಪನಿಕ ಚಿತ್ತವನ್ನಾಕರ್ಷಿಸಿತ್ತು.

ಲಿಯೋ ತನ್ನ ಪ್ರಾರಂಭದ ಬಾಲ್ಯದ ದಿನಗಳನ್ನು ಸ್ತ್ರೀ ಪರಿಸರದಲ್ಲಿ ಕಳೆದ. ಅವನ ಅಜ್ಜಿ ಕಥೆಗಳ ರಸಪಾಕ ಉಣಿಸಿ, ಪ್ರೀತಿಸುವುದರಿಂದ ಸಿಗುವ ಸಂತೋಷವನ್ನು ಅವನಿಗೆ ತಿಳಿಸಿಕೊಟ್ಟಳು. ಅಜ್ಜಿ ಮಕ್ಕಳನ್ನು ಸವಾರಿ ಬಂಡಿಯೊಂದರಲ್ಲಿ ಎಲೆಗಳ ಕಂಪು ತುಂಬಿದ ಹೇಜಲ್ ಮರಗಳ ತೋಪಿನ ಬಯಲಿಗೆ ಕರೆದುಕೊಂಡು ಹೋಗುತ್ತಿದ್ದಳು.

ಅವನ ಸೋದರರಲ್ಲಿ ಸುಂದರವಾಗಿ, ಹೆಮ್ಮೆ ಹಾಗೂ ಆತ್ಮ ವಿಶ್ವಾಸ ತುಂಬಿದ ಸೆರ್ಗೈ ಅವನಲ್ಲಿ ಆರಾಧನಾ ಭಾವ ತುಂಬುತ್ತಿದ್ದ. ತಮ್ಮ ತಾಯಿಯ ಮಾನಸಿಕ ಹಾಗೂ ನೀತಿಯ ಸದ್ಗುಣಗಳನ್ನು ಪಡೆದ ಹಿರಿಯಣ್ಣ ನಿಕೊಲಾಯ್‌ನನ್ನು ಲಿಯೋ ಆಳವಾಗಿ ಪ್ರೀತಿಸುತ್ತಿದ್ದ.

ಮೊದಲಬಾರಿಗೆ ಅವನ ಜೀವನದಲ್ಲಿ ಲಿಯೋನನ್ನು ಗಾಂಭೀರ್ಯದಿಂದ ವರ್ತಿಸುವಂತೆ ಮಾಡಿದ್ದೇನು? ಅದವರ ಬೇಸರಗೊಳಿಸುವ ಕೆಲಸದ ಸಮಯದ ಬಗ್ಗೆ ಒತ್ತಾಯಿಸುವ ಕಟ್ಟುನಿಟ್ಟಿನ ಜರ್ಮನ್ ಶಿಕ್ಷಕ. "*Childhood*" ನಲ್ಲಿ ಟಾಲ್ಸ್‌ಟಾಯ್ ತನ್ನ ಶಿಕ್ಷಕನ ಚಿತ್ರಣವೊಂದನ್ನು ಕೊಡುತ್ತಾನೆ. : "ಫಾಯ್‌ಡೊರ್ ಇವಾನೋವಿಚ್ ಒಬ್ಬ ಬೂಟು ತಯಾರಕ ; ಒಬ್ಬ ಸೈನಿಕ, ಹಗ್ಗ ಮಾಡುವವ ಹಾಗೂ ವಿಲಾಸಿ" ಆದರೆ ಇವಾನೋವಿಚ್ ದಯಾಳು ಹಾಗೂ ಭಾವಾತಿರೇಕದವನು; ಮರೆವಿನ ಸ್ವಭಾವದವನು ಹಾಗೂ ಕೆಲವೊಮ್ಮೆ ಜಲಸಮಸ್ಥಿತಿಶಾಸ್ತ್ರದಲ್ಲಿ ಮೈಮರೆಯುತ್ತಿದ್ದ. ಏನೇ ಆದರೂ ತನ್ನ ವಿದ್ಯಾರ್ಥಿಗಳು ಪಾಠಗಳ ಬಗ್ಗೆ ಅಸಡ್ಡೆ ಮಾಡಿದರೆ, ಅವರಿಗೆ ಮೂಲೆಯಲ್ಲಿ ಮಂಡಿಯೂರಿ ಕುಳಿತುಕೊಳ್ಳುವ ಶಿಕ್ಷೆ ಕೊಡುತ್ತಿದ್ದ.

ಅವನ ಜರ್ಮನ್ ಪಾಠಗಳಿಗಿಂತ ಅವನ ನೀತಿ ಪಾಠಗಳು ಬಡವರು ಹಾಗೂ ನಿರ್ಗತಿಕರ ಬಗ್ಗೆ ಸಹನೆ ಹಾಗೂ ದಯೆಯನ್ನು ಪ್ರೋತ್ಸಾಹಿಸುತ್ತಿದ್ದವು. ಟಾಲ್ಸ್‌ಟಾಯ್ ಸೋದರರಲ್ಲಿ ಸಣ್ಣ ನಿಯತಕಾಲಿಕೆಯೊಂದನ್ನು ಪ್ರಕಟಿಸುವ ಆಸಕ್ತಿಯನ್ನು ಉತ್ತೇಜಿಸಿದ ಕೀರ್ತಿ ಇವಾನೋವಿಚ್‌ಗೆ ಸಲ್ಲಬೇಕು.

ಲಿಯೋ ಆಗಿನ್ನೂ ಏಳರ ಬಾಲಕ, ಹದ್ದು, ಗಿಡುಗ, ಗೂಬೆ, ಗಿಣಿ, ಹುಂಜ ಹಾಗೂ ಹಾಡು–ಹಕ್ಕಿಯ ಬಗ್ಗೆ ಸಣ್ಣ ಲೇಖನಗಳನ್ನು ಬರೆಯುತ್ತಿದ್ದುದು ಆಸಕ್ತಿಕರ ವಿಷಯ. ಚಿಕ್ಕಮ್ಮ ತತ್ಯಾನ ಫ್ರೆಂಚ್ ಕಲಿಸುತ್ತಿದ್ದು ಲಿಯೋಗೆ ಭದ್ರಬುನಾದಿ ಹಾಕಿದಳು.

ಒಂಬತ್ತು ವರ್ಷಗಳವರೆಗೆ ಲಿಯೊಗೆ ಕ್ರಮಬದ್ಧವಾದ ವಿದ್ಯಾಭ್ಯಾಸವಿರಲಿಲ್ಲವೆಂದು ತೋರುತ್ತದೆ.

೧೮೩೭ರ ಮೊದಲ ಭಾಗದಲ್ಲಿ ಕುಟುಂಬವು ಮಾಸ್ಕೋಗೆ ವಾಸ್ತವ್ಯ ಬದಲಿಸಿತು. ತಂದೆ ಟಾಲ್ಸ್‌ಟಾಯ್ ಮಕ್ಕಳಿಗೆ ಅಪರೂಪನಾದ. ಬೇಸಿಗೆಯಲ್ಲಿ ಅವನು ವ್ಯಾಪಾರಕ್ಕಾಗಿ ಟ್ಯೂಲಾಕ್ಕೆ ಹೋದ. ಅವನ ಮಿತ್ರ ಟೆಮ್ಯಾಷೋವ್‌ನ ಭೇಟಿಗೆ ಹೋದಾಗ ಇದ್ದಕ್ಕಿದ್ದಂತೆ ರಸ್ತೆಯ ಮೇಲೆ ಬಿದ್ದು ಸತ್ತ. ಅಂತ್ಯಕ್ರಿಯೆಗಾಗಿ ದೇಹವನ್ನು ಯಾಸ್ನಾಯಾ ಪೊಲ್ಯಾನಾಕ್ಕೆ ತರಲಾಯ್ತು. ಲಿಯೋನ ಸೂಕ್ಷ್ಮ ಮನಸ್ಸಿಗೆ ಸಾವು ಧಾರ್ಮಿಕ ದಿಗಿಲಿನ ಭಾವನೆಯನ್ನು ಹುಟ್ಟಿಸಿ, ಸಾವು–ಬದುಕಿನ ಶಾಶ್ವತ ಪ್ರಶ್ನೆಗಳನ್ನು ಎಬ್ಬಿಸಿತು.

ಬಾಲ್ಯದಲ್ಲಾಗಲೀ ಯೌವ್ವನದಲ್ಲಾಗಲೀ ಟಾಲ್ಸ್‌ಟಾಯ್ ಬುದ್ಧಿವಂತ ವಿದ್ಯಾರ್ಥಿ ಎಂದು ಸಿದ್ಧಪಡಿಸಿರಲಿಲ್ಲ. ಅವನ ಬೌದ್ಧಿಕ ಕುತೂಹಲವನ್ನು ಎಚ್ಚರಿಸುವವರೆಗೂ ಅವನು ಯಾವುದೇ ಪಾಠವನ್ನು ಸಮೀಕರಣಗೊಳಿಸಿಕೊಳ್ಳಲು ನಿರಾಕರಿಸುತ್ತಿದ್ದ. ಸಾಂಪ್ರದಾಯಿಕ ಶಿಕ್ಷಣ ಪದ್ಧತಿಗಳು ಅವನ ಮೇಲೆ ಪರಿಣಾಮ ಬೀರುತ್ತಿರಲಿಲ್ಲ. ಒಂಬತ್ತರಿಂದ ಮೂವತ್ತು ವರ್ಷಗಳವರೆಗೆ ಅವನ ಆಸಕ್ತಿಯನ್ನು ಕೆರಳಿಸಲು, ಅನೇಕ ಶಿಕ್ಷಕರು, ವಿದ್ಯಾರ್ಥಿ ಶಿಕ್ಷಕರು ಸಂಘಟಿತವಾಗಿ ಪ್ರಯತ್ನಿಸಿ ಸೋತರು.

ಆ ಮಂದಬುದ್ಧಿಯ ವಿದ್ಯಾರ್ಥಿ ಲಿಯೋ ಟಾಲ್ಸ್‌ಟಾಯ್‌ನ ಮನದಲ್ಲಿ ನಡೆಯುತ್ತಿದ್ದುದಾದರೂ ಏನು? ಮಾನವನ ಸಂತಸದ ಸಮಸ್ಯೆ ಅವನ ತರುಣ ಮನಸ್ಸನ್ನು ಚಿತ್ರಹಿಂಸೆಗೊಳಪಡಿಸಿತ್ತು. ತಾನೊಂದು ಪರಿಹಾರ ಕಂಡು ಹಿಡಿದಿದ್ದೇನೆಂದು ಯೋಚಿಸಿದ, ಅವನು ಕೂಡಲೇ ಅದರ ಅಭ್ಯಾಸಕ್ಕಿಳಿದ. ಮನುಷ್ಯ ನರಳುವಿಕೆಯನ್ನು ಒಪ್ಪಿ ಸಹಿಸಲು ಸಾಧ್ಯವಾದರೆ ಅವನು ಎಂದಿಗೂ ಅಸುಖಿಯಾಗಲಾರ.

ನೋವು, ನರಳಿಕೆಗೆ ಒಗ್ಗಿಕೊಳ್ಳಲು ಅವನು ಕಣ್ಣಿನಲ್ಲಿ ನೀರು ಬರುವಂತೆ ತನ್ನ ಬರಿಯ ಬೆನ್ನನ್ನು ಚಾವಟಿಯಿಂದ ಹೊಡೆದುಕೊಳ್ಳುತ್ತಿದ್ದ. ಹಾಗಾಗಿ ಅನೇಕ ದಿನಗಳವರೆಗೂ ತನ್ನ ಪಾಠಗಳತ್ತ ಗಮನ ಕೊಡುತ್ತಿರಲಿಲ್ಲ.

ಜೀವನದಲ್ಲಿ ಬಲು ಬೇಗನೆ ಲಿಯೋ ಸ್ವಾಭಿಮಾನಿಯಾದ. ಅವನ ದಪ್ಪತುಟಿಗಳು, ಅಗಲವಾದ ಮೂಗು, ಸಣ್ಣ ಕಣ್ಣುಗಳು ಹಾಗೂ ಜುಟ್ಟಿನ ಕೂದಲು ಅತಿಯಾದ ನಾಚಿಕೆಯ ಸ್ವಭಾವ, ಸ್ವಾಭಿಮಾನದ ಹಮ್ಮು ಮುಂತಾದ ವೈಯಕ್ತಿಕ ಕುರೂಪತೆಯ ಬಗ್ಗೆ ಅವನಿಗೆ ನೋವೆನಿಸುವಷ್ಟು ಎಚ್ಚರಿಕೆ ಇತ್ತು.

ಬಾಲ್ಯದಲ್ಲಿ ಅವನು ತೀರ ಒಂಟಿಯಾಗಿದ್ದ. ಕತ್ತಿವರಸೆ ಹಾಗೂ ಕುದುರೆಸವಾರಿಯ ಶಿಕ್ಷಣಕ್ಕೆ ಸೇರಿಸಲಾಗಿದ್ದು, ಅವನ ಯೋಚನೆ ಸೇನೆಯತ್ತ ತಿರುಗಿತು.

ವೇಗವಾದ ಕುದುರೆಗಳು ಎಳೆಯುವ ಅಗ್ನಿ ಶಾಮಕ ಯಂತ್ರಗಳ ಶಬ್ದ ಹುಡುಗನನ್ನು ಕೆರಳಿಸುತ್ತಿತ್ತು. ಹುಡುಗ ಟಾಲ್‌ಸ್ಟಾಯ್ ಕೆಲವು ವಿಚಿತ್ರ ಕೆಲಸಗಳನ್ನು ಮಾಡುತ್ತಿದ್ದ. ಯಾವಾಗಲೂ ಇತರರ ಲಕ್ಷ್ಯವನ್ನು ತನ್ನತ್ತ ಸೆಳೆಯಲು ಯತ್ನಿಸುತ್ತಿದ್ದ. ಒಮ್ಮೆ ಅವನು ತನ್ನ ಕಣ್ಣಿನ ಹುಬ್ಬುಗಳನ್ನು ಮಂಡಿಯ ಸುತ್ತ ಬಳಸಿ ಗಗನಕ್ಕೆ ಹಾರಬಹುದೆಂದು ನಿಶ್ಚಯ ಮಾಡಿಕೊಂಡಿದ್ದ. ಪರಿಣಾಮವೇನು? ೧೮ ಅಡಿ ಕೆಳಗೆ ಬಿದ್ದು ಪ್ರಜ್ಞಾಶೂನ್ಯ ಸ್ಥಿತಿಯಲ್ಲಿ ಅವನನ್ನು ಎತ್ತಿಕೊಂಡೊಯ್ಯಬೇಕಾಯ್ತು.

೧೮೩೮ರಲ್ಲಿ ತನ್ನ ಅಜ್ಜಿಯ ಮರಣಾನಂತರ ಮಿತವ್ಯಯದ ಸಲುವಾಗಿ ನಿಕೋಲಾಯ್ ಮತ್ತು ಸರ್ಗೈಯನ್ನು ಉನ್ನತ ವಿದ್ಯಾಭ್ಯಾಸಕ್ಕಾಗಿ ಮಾಸ್ಕೋದಲ್ಲಿ ಅವನ ಚಿಕ್ಕಮ್ಮ ಅಲೆಗ್ಸಾಂಡ್ರಾಳ ಬಳಿ ಇರಿಸಲಾಗಿತ್ತು.

ವಿಶ್ವವಿದ್ಯಾಲಯ ಪ್ರವೇಶಕ್ಕೆ ಲಿಯೋ ಇನ್ನು ಚಿಕ್ಕವನಾಗಿದ್ದ. ಅವನು ನೌಕರಿಯ ಬಗ್ಗೆ ಆಲೋಚಿಸುತ್ತಿದ್ದ. ಚಿಕ್ಕಮ್ಮ ಪೆಲಾಗೆಯಾ ಎಳೆಯ ತಲೆಯಲ್ಲಿ ಮಹತ್ವಾಕಾಂಕ್ಷೆಯ ಬೀಜ ಬಿತ್ತಿದಳು. ಚಕ್ರವರ್ತಿಗೆ ಸಹಾಯಕ ಅಧಿಕಾರಿ (ಎ.ಡಿ.ಸಿ) ಆಗಿರಲು ಅವನನ್ನು ಪ್ರೋತ್ಸಾಹಿಸಿದಳು.

ಕಜ್ಹನ್‌ನಲ್ಲಿದ್ದ ಪೆಲಾಗೆಯಾಳ ಮನೆ ನಗರದ ಸಾಮಾಜಿಕ ಕೇಂದ್ರವಾಗಿದ್ದು, ಟಾಲ್‌ಸ್ಟಾಯ್ ಮನೆತನದ ಮಕ್ಕಳು ಪ್ರಮುಖ ಸ್ತ್ರೀ ಪುರುಷರೊಂದಿಗೆ ಬೆರೆಯುವ ಅವಕಾಶ ಸಿಕ್ಕಿತು. ೧೮೪೪ರ ಮೇ ತಿಂಗಳಲ್ಲಿ ಅವನು ಪ್ರವೇಶ ಪರೀಕ್ಷೆ ತೆಗೆದುಕೊಂಡ. ಇತಿಹಾಸ, ಭೂಗೋಳ, ಸಂಖ್ಯಾಶಾಸ್ತ್ರ ಹಾಗೂ ಲ್ಯಾಟಿನ್‌ನಲ್ಲಿ ಅವನ ಕೆಳಮಟ್ಟದ ಸಾಧನೆಗಾಗಿ ಅವನಿಗೆ ಪ್ರವೇಶ ನಿರಾಕರಿಸಲಾಯ್ತು. ಮುಂದೆ ಪ್ರವೇಶ ಸಿಕ್ಕಿದ ನಂತರ, ವಿಶ್ವವಿದ್ಯಾಲಯ ಸಾಮಾಜಿಕ ಜೀವನದ ಬಗ್ಗೆ ಅವನ ಉತ್ಸಾಹ ಕ್ಷೀಣಿಸಿತು. ಉಪನ್ಯಾಸಗಳನ್ನು ತಪ್ಪಿಸಿ, ವಾರ್ಷಿಕ ಪರೀಕ್ಷೆಯಲ್ಲಿ ಪಡೆದ ತೀರಾ ಕೆಳದರ್ಜೆಯ ಫಲಿತಾಂಶ ಎಷ್ಟೆಂದರೆ ಹಿಂತಿರುಗಿ ಓದಲು ವಿಶ್ವವಿದ್ಯಾಲಯದ ಅಧಿಕಾರಿಗಳಿಂದ ಅನುಮತಿ ಸಿಗಲಿಲ್ಲ. ೧೮೪೫ರಲ್ಲಿ ಅವನು ನ್ಯಾಯಶಾಸ್ತ್ರ ಕೌಶಲ ವಿಭಾಗಕ್ಕೆ ವರ್ಗ ಮಾಡಿಸಿಕೊಂಡ. ಈ ವಿಭಾಗ ಅಶಿಸ್ತು ಹಾಗೂ ಕ್ಷುಲ್ಲಕತನಕ್ಕೆ ಹೆಸರಾಗಿತ್ತು. ಅಪರಾಧಿ ಕ್ರಿಮಿನಲ್ ಕಾನೂನಿನ ಬಗ್ಗೆ ಅವನು ಸಾಕಷ್ಟು ಆಸಕ್ತಿ ವಹಿಸಿದ. ನಡುವಾರ್ಷಿಕ ಪರೀಕ್ಷೆಯಲ್ಲಿ, ಕೆಳದರ್ಜೆಯ ಫಲಿತಾಂಶ ಹೊಂದಿದರೂ, ವಾರ್ಷಿಕ ಪರೀಕ್ಷೆಯಲ್ಲಿ ಉತ್ತಮವಾಗಿ ಮಾಡಿ ಎರಡನೆಯ ವರ್ಷಕ್ಕೆ ತೇರ್ಗಡೆ ಹೊಂದಿದ.

ವಿಶ್ವವಿದ್ಯಾಲಯದಲ್ಲಿರುವಾಗ ಅವನು ವಿಶ್ವವಿದ್ಯಾಲಯದ ಬಗ್ಗೆ, ಪ್ರಾಧ್ಯಾಪಕರ ಬಗ್ಗೆ ಹಾಗೂ ಒಪ್ಪಿಗೆ ಪಡೆದ ಸಂಸ್ಥೆಗಳ ಬಗ್ಗೆ (ಕ್ಯಾಥರೀನಳ ನಕಾಸ್) Catherinels Nakas (ಕಾನೂನಿನ ಒಂದು ನಿಯಮ) ಬಗ್ಗೆ ವಿಶ್ಲೇಷಣಾತ್ಮಕ ಟೀಕೆ ಮಾಡುತ್ತಿದ್ದ. ೧೮೪೭ರ ಏಪ್ರಿಲ್‌ನಲ್ಲಿ (ನ್ಯಾಯ ಶಾಸ್ತ್ರ ಕೌಶಲ ವಿಭಾಗ) Faculty of Jurisprudence ನಲ್ಲಿ ಅಂತಿಮ ಪರೀಕ್ಷೆ ತೆಗೆದುಕೊಳ್ಳುವ ಮೊದಲೇ ವಿಶ್ವವಿದ್ಯಾಲಯವನ್ನು

ಬಿಡಲು ಅನುಮತಿ ಕೋರಿದ. ಅವನ ಪ್ರಾರ್ಥನೆಗೆ ಅನುಮತಿ ಸಿಕ್ಕಿತು. ಅವನ ಪ್ರಾಧ್ಯಾಪಕರು "ತೀರಾ ದಡ್ಡ" ಎಂದು ಟೀಕಿಸಿದರು.

ಸು ಮತ್ತು ಡ್ಯೂಮಾನ ಫ್ರೆಂಚ್ ಕಾದಂಬರಿಗಳು, ಸ್ಟರ್ನ್‌ನ *'Sentimental Journey'* ಡಿಕನ್ಸ್‌ನ *David Copprfield,* ಗೋಗೋಲ್‌ನ *Dead Souls & Tales,* ಟರ್ಗಿನೆವ್‌ನ *Sportsman's Note Book* ಪುಷ್ಕಿನ್‌ನ *Eugene Onegin,* ಸ್ಕಿಲ್ಲರ್ಸ್‌ನ *The Robbers* ಮುಂತಾದವನ್ನು ಓದಿ ಮನನ ಮಾಡಿದ್ದ. ರೂಸೋನ ಎಲ್ಲಾ ಕೃತಿಗಳನ್ನು ಓದಿದ, ಅದೇ ರೂಸೋ ಅವನ ಆಲೋಚನೆಗಳ ಮೇಲೆ ಅತಿ ಹೆಚ್ಚು ಪ್ರಭಾವ ಬೀರಿದವನು.

೨೩ ವರ್ಷಗಳಲ್ಲಿ ಟಾಲ್‌ಸ್ಟಾಯ್ ಕಂಡ ಯಶಸ್ಸು ಅತ್ಯಲ್ಪ. ಅವನು ವಿಶ್ವವಿದ್ಯಾಲಯದ ಪದವಿ ಪಡೆಯುವುದರಲ್ಲಿ ಅವನ ಜೀತದಾಳುಗಳ ಪರಿಸ್ಥಿತಿಯನ್ನು ಸುಧಾರಿಸುವುದರಲ್ಲಾಗಲೀ ಸೇನೆಯಲ್ಲೊಂದು ಒಳ್ಳೆಯ ಸ್ಥಾನ ಹೊಂದುವುದರಲ್ಲಾಗಲೀ, ಸಿವಿಲ್ ಸರ್ವಿಸಸ್ ಅಥವಾ ಸಮಾಜದಲ್ಲೊಂದು ಉನ್ನತ ಸ್ಥಾನಗಳಿಸುವುದರಲ್ಲಾಗಲೀ ವಿಫಲವಾದ. ಪುಷ್ಕಿನ್ ಮಾರ್ಲಿನ್ಸ್ಕಿ, ಲೆರ್‌ಮಾಂಟೋವ್‌ರವರನ್ನು ಸ್ಫೂರ್ತಿಗೊಳಿಸಿದ ಪ್ರೇಕ್ಷಣೀಯ ಕಾಡಿನ ಕಾಕಸಸ್‌ಗೆ ೧೮೫೧ರ ಏಪ್ರಿಲ್‌ನಲ್ಲಿ ತನ್ನ ಸೋದರ ನಿಕೊಲಾಯ್‌ನೊಂದಿಗೆ ಹೊರಟ.

ಯುದ್ಧ ಮುಂತಾದ ಚಟುವಟಿಕೆಗಳ ನಡುವೆಯೂ ಟಾಲ್‌ಸ್ಟಾಯ್ ತನ್ನ ಸಾಹಿತ್ಯದ ಕೆಲಸಗಳನ್ನು ಮುಂದುವರೆಸಿದ. *'Childhood'* ನ ನಂತರ ಅವನು *'Boyhood'* ಕೃತಿಯ ಬಗ್ಗೆ ಕೆಲಸ ಮಾಡಿದ.

೧೮೫೫ರ ಫೆಬ್ರವರಿ ೧೮ರಂದು ಚಕ್ರವರ್ತಿ ಮೊದಲನೆಯ ನಿಕೊಲಾಸ್ ಮರಣಿಸಿದ. ಅವನ ಉತ್ತರಾಧಿಕಾರಿ ಎರಡನೆ ಅಲೆಗ್ಸಾಂಡರ್ ಇಂಗ್ಲೆಂಡ್ ಹಾಗೂ ಫ್ರಾನ್ಸ್‌ಗಳ ವಿರುದ್ಧ ಯುದ್ಧ ಮುಂದುವರಿಸಲು ನಿಶ್ಚಯಿಸಿದ. ಇಂಕರ್‌ಮನ್ ಯುದ್ಧದಲ್ಲಿ ರಷ್ಯ ೧೦,೦೦೦ ಜನರನ್ನು ಕಳೆದುಕೊಂಡಿತು. ಸೆವಾಸ್ಟೋಪೋಲ್‌ನಲ್ಲಿ ಟಾಲ್‌ಸ್ಟಾಯ್ ಕಾಳಗವನ್ನು ಕಣ್ಣಾರೆ ಕಂಡ. ಯುದ್ಧ ವರದಿಗಳನ್ನು ಬರೆದ. ಅವನ ಮೂರು ಚಿತ್ರಣಗಳು ಅವನನ್ನು ಪ್ರಖ್ಯಾತನನ್ನಾಗಿ ಮಾಡಿದವು. ಅವನ ಪ್ರಕಾರ ಯುದ್ಧ ಮನುಷ್ಯನ ಆತ್ಮಕ್ಕೆ ಊನತೆ ಹಾಗೂ ಸಾವನ್ನು ತರುವಂಥದು.

ಸ್ವಲ್ಪ ಸಮಯದವರೆಗೂ ಟಾಲ್‌ಸ್ಟಾಯ್ ಪೀಟರ್ಸ್‌ಬರ್ಗ್‌ನ ಶಸ್ತ್ರಾಸ್ತ್ರ ಕಾರ್ಖಾನೆಯೊಂದರಲ್ಲಿ ಇನ್ಸ್‌ಪೆಕ್ಟರ್ ಆಗಿ ಸೇವೆ ಸಲ್ಲಿಸಿದ. ಅವನು ಮಾಸ್ಕೋದಲ್ಲಿ ರಜೆಯಲ್ಲಿದ್ದ. ಆಗ ರಷ್ಯಾದ ಸಾಹಿತ್ಯಲೋಕದ ಮುಂದಾಳುವೆನಿಸಿದ್ದ ಟರ್ಗಿನೆವ್ ಟಾಲ್‌ಸ್ಟಾಯ್‌ನನ್ನು ಸಾಹಿತ್ಯವರ್ಗಕ್ಕೆ ಪರಿಚಯಿಸಿದ. ಮಾಸ್ಕೋದಿಂದ ತನ್ನ ಸೋದರ ಡ್ಮಿಟ್ರಿ ಕ್ಷಯದಿಂದ ಮರಣಿಸಿದ ಓರೋಲ್‌ಗೆ ಲಗುಬಗೆಯಿಂದ ಹೊರಟ. ಆ ಕರುಣಾಜನಕ ದೃಶ್ಯವನ್ನು ಅನ್ನಾಕರೆನಿನಾದಲ್ಲಿ ನಿಕೋಲಾಯ್ ಲೆವಿನ್‌ನ

ಸಾವನ್ನು ವರ್ಣಿಸುವಾಗ ಟಾಲ್‌ಸ್ಟಾಯ್ ಚಿತ್ರಿಸಿದ್ದಾನೆ.

೧೮೫೫ರ ಅಂತ್ಯದ ವೇಳೆಗೆ ಲೆಫ್ಟಿನೆಂಟ್ ಆಗಿದ್ದ ಟಾಲ್‌ಸ್ಟಾಯ್ ಸೇನೆಗೆ ತನ್ನ ರಾಜಿನಾಮೆಯನ್ನು ಕಳಿಸಿದ. ೧೮೫೬ರ ಕೊನೆಯ ವೇಳೆಗೆ ಬಿಡುಗಡೆ ಪಡೆದ. ಕ್ರಿಮಿಯ ಯುದ್ಧದಲ್ಲಿ ಅವನ ಪಾತ್ರ ಒಂದು ಗಮನಾರ್ಹ ದಾಖಲೆ. ಸೆವೆಸ್ಟೋಪೋಲ್ ಹತ್ಯೆಯ ನಂತರ ಅವನು ಶಾಂತಿವಾದಿಯಾಗಿ ಪರಿವರ್ತಿತನಾಗಿ ಟರ್ಗನೆವ್‌ನೊಂದಿಗೆ ವಾಸಿಸಲು ಬಂದ. ಟರ್ಗನೆವ್‌ಗೆ ತರುಣ ಟಾಲ್‌ಸ್ಟಾಯ್ ಒಬ್ಬ ಅಸಾಧಾರಣ ವ್ಯಕ್ತಿಯಾಗಿ ಕಂಡ.

೨೯ ವರ್ಷದ ವಿಚಾರವಂತ ಟಾಲ್‌ಸ್ಟಾಯ್ ದುಃಖಿಯಾಗಿ ಆದರೆ ಪ್ರಾಜ್ಞನಾಗಿ ಯಾಸ್ನಾಯಕ್ಕೆ ಹಿಂತಿರುಗಿದ. ಗಂಡನಿಂದ ಬೇರ್ಪಟ್ಟ ತನ್ನ ಸಹೋದರಿ ಮರ್‍ಯಾಳ ಬಗ್ಗೆ ಚಿಂತಿಸತೊಡಗಿದ. ಇತರರಿಗಾಗಿ ಜೀವಿಸಿ ಕೆಲಸಮಾಡಬೇಕೆಂದು ಇಚ್ಛಿಸಿದರೂ ಆಧ್ಯಾತ್ಮಿಕ ಮಬ್ಬು ಅವನ ಮೇಲೆ ಕವಿಯತೊಡಗಿತ್ತು.

೧೮೬೧ರ ಪ್ರಾರಂಭದಲ್ಲಿ ಟಾಲ್‌ಸ್ಟಾಯ್ ವಿದ್ಯಾಮಂಡಳಿಯ ಪ್ರಚಾರಕನಾಗಿ, ಲಂಡನ್ನಿಗೆ ಹೋಗಿ ಡಿಕನ್ಸ್‌ನಿಂದ ವಿದ್ಯಾಭ್ಯಾಸದ ಬಗ್ಗೆ ಒಂದು ಉಪನ್ಯಾಸ ಕೇಳಿದನು: ಪ್ರಧಾನಮಂತ್ರಿ ಪಾಮರ್‌ಸ್ಟೋನ್‌ನಿಂದ ಹೌಸ್ ಆಫ್ ಕಾಮನ್ಸ್‌ನಲ್ಲಿ ದೀರ್ಘ ಭಾಷಣ ಕೇಳಿದನು: ಮ್ಯಾಥ್ಯೂ ಆರ್ನಾಲ್ಡ್‌ನನ್ನು ಸಂಪರ್ಕಿಸಿ (ಹೆಸರಾಂತ ಶಾಲಾ ಇನ್ಸ್‌ಪೆಕ್ಟರ್) ಕೆನ್ಸಿಂಗ್‌ಟನ್ ಸಂಗ್ರಹಾಲಯವನ್ನು ಸಂದರ್ಶಿಸಿ (ಟಾಲ್‌ಸ್ಟಾಯ್ ಪ್ರಕಾರ ಉನ್ನತ ಶಿಕ್ಷಣದ ಅತ್ಯುತ್ತಮ ಸಂಸ್ಥೆ) ಗಡೀಪಾರಾಗಿದ್ದ ರಷ್ಯನ್ ಕ್ರಾಂತಿಕಾರಿ ಅಲೆಗ್ಸಾಂಡರ್ ಹರ್‍ಜನ್‌ನನ್ನು ಲಂಡನ್ನಿನಲ್ಲಿ ಭೇಟಿ ಮಾಡಿದ. ಗಡೀಪಾರಾಗಿದ್ದ ಫ್ರೆಂಚ್ ಸಮಾಜವಾದಿ ಪ್ರಾಧೋನ್‌ನನ್ನು ಭೇಟಿಮಾಡಲು ಲಂಡನ್‌ನಿಂದ ಬ್ರಸಲ್ಸ್‌ಗೆ ಹೋಗಿ ತನ್ನ ವಿದ್ಯೆ ಹಾಗೂ ಬುದ್ಧಿವಂತಿಕೆಯಿಂದ ಅವನ ಮೇಲೆ ಹೆಚ್ಚಿನ ಪ್ರಭಾವ ಬೀರಿದ. ಪ್ರಾಧೋನ್‌ನ "Ya Guerre et la paisc" ಯುದ್ಧದ ಕಾನೂನುಗಳ ಬಗೆಗಿನ ಪುಸ್ತಕಕ್ಕೂ ಟಾಲ್‌ಸ್ಟಾಯ್‌ನ *"War and Peace"* ಗೂ ನಿಕಟ ಸಂಪರ್ಕವಿತ್ತು.

ಬೋಧನೆಯ ಯಾತ್ರೆ ಅವನನ್ನು ಜರ್ಮನಿಗೆ ಕರೆತಂದಾಗ "Weimer & Gotha" ಕಿಂಡರ್‌ಗಾರ್ಟನ್ ಶಾಲೆಗಳಿಗೆ ಅವನು ಭೇಟಿ ನೀಡಿದ. ಆದರೆ ಅವುಗಳಲ್ಲಿ ಅವನು ಜ್ಯಾಮಿತಿಯ ಚಿತ್ರಗಳು ಹಾಗು ಬುಟ್ಟಿಗಳ ಕೆಲಸದಂಥ ಕ್ಷುಲ್ಲಕ ವಿಷಯಗಳಲ್ಲದೆ ಬೇರೇನೂ ನೋಡಲಿಲ್ಲ."

ಬರ್ಲಿನ್‌ನಲ್ಲಿ ಅವನು ತೀವ್ರ ಮೆಚ್ಚಿದ ಹಳ್ಳಿಯ ಜೀವನದ ಮೇಲೊಂದು ಕಾದಂಬರಿ *"Eier Neeces Leber"*ನ ಲೇಖಕ, ಕಾದಂಬರಿಕಾರ ಬರ್ತೋಲ್ಡ್ ಅರ್ಬಾಸ್‌ನನ್ನು ಭೇಟಿ ಮಾಡಿದ. ಆನಂತರ ಅವನು ಅರ್ಬಾಸ್ ತನಗೆ ಬೆಳಕು ತೋರಿದನೆಂದು ಬರೆದ. ಟಾಲ್‌ಸ್ಟಾಯ್‌ನ ಉಜ್ವಲ ಸ್ವಭಾವ ಅರ್ಬಾಸ್‌ನ ಮೇಲೆ

ಅಚ್ಚೊತ್ತಿತು. ೧೮೬೧ರ ಏಪ್ರಿಲ್‌ನಲ್ಲಿ ಅವನು ರಷ್ಯಾಕ್ಕೆ ಹಿಂತಿರುಗಿದ ನಂತರ ತನ್ನ ಜೀವನದ ಮುಂದಿನ ಐವತ್ತು ವರ್ಷಗಳವರೆಗೆ ತನ್ನ ದೇಶವನ್ನು ಬಿಟ್ಟು ಹೋಗಲಿಲ್ಲ.

ರೈತಾಪಿ ಹುಡುಗ, ಹುಡುಗಿಯರ ವಿದ್ಯಾಭ್ಯಾಸಕ್ಕಾಗಿ ಅವನು ತನ್ನೆಲ್ಲ ಸಮಯ ಹಾಗೂ ಲಕ್ಷ್ಯವನ್ನು ಕಾದಿರಿಸಿದ. ಅವನ ದೃಷ್ಟಿಯಲ್ಲಿ ವಿದ್ಯಾಭ್ಯಾಸ ಖಾಸಗಿಯೇ ಹೊರತು ಸಾಮಾಜಿಕವಲ್ಲ. ವಿದ್ಯಾಭ್ಯಾಸ ಒಬ್ಬ ವ್ಯಕ್ತಿಗೆ ಮಾನವತೆಗೆ ಸೇವೆಮಾಡುವ ಸಾಮರ್ಥ್ಯವನ್ನು ಮತ್ತು ಸಮಾನತೆಯ ಇಚ್ಛೆಯನ್ನು ಬೆಳೆಸಿಕೊಳ್ಳಲು ಸಹಾಯ ಮಾಡಬೇಕು. ವಿದ್ಯಾಭ್ಯಾಸದ ವಿಷಯದಲ್ಲಿ ಅವನು ಮೆಕಾಲೆ ಹಾಗೂ ಹೆಗಲ್‌ರನ್ನು ಲಕ್ಷಿಸಲಿಲ್ಲ. ಅವನ ಯಾಸ್ನೋ-ಪೊಲ್ಯಾನಾ ಶಾಲೆಯಲ್ಲಿ ಮಕ್ಕಳಿಗೆ ವರ್ಗೀಕೃತ ಓದುವಿಕೆ, ವ್ಯಾಕರಣ (ಟಾಲ್‌ಸ್ಟಾಯ್ ಇಷ್ಟಪಡದ) ಪ್ರಬಂಧ ರಚನೆ, ಉತ್ತಮ ಲಿಪಿಗಾರಿಕೆ, ಧಾರ್ಮಿಕ ಇತಿಹಾಸ, ರಷ್ಯನ್ ಇತಿಹಾಸ, ಸಂಗೀತ, ಚಿತ್ರರಚನೆ, ಗಣಿತ, ಸ್ವಾಭಾವಿಕ ವಿಜ್ಞಾನ, ಧರ್ಮ ಮುಂತಾದವಕ್ಕೆ ಒತ್ತುಕೊಡಲಾಗುತ್ತಿತ್ತು. ಕಠಿಣ ಶಿಸ್ತನ್ನಲ್ಲ, ಸ್ವಾತಂತ್ರ್ಯಕ್ಕೆ ಒತ್ತುಕೊಡಲಾಗುತ್ತಿತ್ತು.

ವಿದ್ಯಾಭ್ಯಾಸದ ಕ್ರಮ ಸಮಾಜದ ಸ್ಥಿತಿಗಳಿಂದ ನಿರ್ಧರಿಸಲ್ಪಡುತ್ತದೆನ್ನುವುದು ಟಾಲ್‌ಸ್ಟಾಯ್‌ನ ಶಾಲೆಗಳ ಬಾಗಿಲುಗಳ ಮೇಲೆ ಸ್ಫುಟವಾದ ಅಕ್ಷರಗಳಲ್ಲಿ ಬರೆಯಲಾಗಿತ್ತು. ವಿದ್ಯಾಭ್ಯಾಸದ ತತ್ವಗಳನ್ನು ಸಾರ್ವಜನಿಕವಾಗಿ ಹರಡಲು ಪ್ರಯತ್ನಿಸಿ ಶಾಲಾ ನಿಯತಕಾಲಿಕೆಯೊಂದನ್ನು ಹೊರಡಿಸಿ, ಅವನು ಆಹ್ವಾನಿಸಿಕೊಂಡ ಕಟು ಟೀಕೆಗಳು *"The Contemporary"* ಯ ಪುಟಗಳಲ್ಲಿ ಅಚ್ಚಾದವು. ಅವನು ವಿದ್ಯಾಭ್ಯಾಸದ ವಿಷಯದಲ್ಲಿ ಮೂಢನೆಂದೂ ಅವನ ಶಾಲೆಯೊಂದು "ಅಲೆಮಾರಿಗಳ ತಂಡವೆಂದೂ" (Gypsy Encampment) ಟೀಕೆ ಮಾಡಲಾಯ್ತು. ಸ್ವಾತಂತ್ರ್ಯದ ಅವನ ಕಲ್ಪನೆ ಅನಾಯಕತ್ವದ ಅಂಚಿನಲ್ಲಿದೆ ಎಂದೂ ರಾಜ್ಯದ ಅಧಿಕಾರಕ್ಕೆ ಅದೊಂದು ಬೆದರಿಕೆ ಎಂದೂ ಅವನ ವಿಮರ್ಶಕರು ಯೋಚಿಸಿದರು.

ಎದ್ದುಕಾಣುವ ಅವನ ವಿಫಲತೆಯ ನಡುವೆಯೂ ಅವನು ತನ್ನ ಮುಂದಿನ ಜೀವನದಲ್ಲಿ ಶಾಲೆಯ ಅವನ ಶಿಕ್ಷಣದ ಅನುಭವವನ್ನು ಅದ್ಭುತ ಹಾಗೂ ಅತ್ಯಂತ ಪ್ರಕಾಶಮಾನವಾದುದೆಂದು ನೆನೆಸಿದ.

ಟಾಲ್‌ಸ್ಟಾಯ್‌ಗೆ ದೈಹಿಕ ಶ್ರಮದ ಬಗ್ಗೆ ಅತ್ಯಂತ ಗೌರವವಿದ್ದಿತು. ಪ್ರಾಪಂಚಿಕ ವಸ್ತುಗಳಿಗಾಗಿ ತನ್ನ ಕೈಗಳನ್ನುಪಯೋಗಿಸುವುದು ತನ್ನ ಧಾರ್ಮಿಕ ಕರ್ತವ್ಯವೆಂದು ಭಾವಿಸಿದ. ಅವನು ಸ್ವತಃ "ರೊಟ್ಟಿಯ ಶ್ರಮ" (bread labour)ದಲ್ಲಿ ಆಸಕ್ತಿ ವಹಿಸಿದ. ಈ ವಿಷಯದಲ್ಲಿ ಬೇರಾರೂ ಬೀರದಷ್ಟು ಪ್ರಭಾವವನ್ನು ಗಾಂಧೀಜಿಯ ಮೇಲೆ ಬೀರಿದ. ಸ್ಪಿನೋಜಾನಂತೆ "ಭವ್ಯ ಆಲೋಚನೆಗಳಿಗಾಗಿ ನಿಮ್ಮ ತಲೆಯನ್ನುಪಯೋಗಿಸಿ ಪ್ರಾಪಂಚಿಕ ವಸ್ತುಗಳಿಗಾಗಿ ನಿಮ್ಮ ಕೈಗಳನ್ನು ಉಪಯೋಗಿಸಿ" ಎಂದು ಹೇಳುತ್ತಿದ್ದ.

ಮದುವೆಗೆ ಮುನ್ನ ಟಾಲ್‌ಸ್ಟಾಯ್ ಪ್ರಾಪಂಚಿಕತೆ ಹಾಗೂ ಆಧ್ಯಾತ್ಮಿಕತೆಯ ನಡುವೆ ತೂಗುಯ್ಯಾಲೆಯಾಡುತ್ತಿದ್ದ. ಅವನಿಗೆ ಮಾನಸಿಕ ವಿರಾಮವಿರಲಿಲ್ಲ. ಟಾಲ್‌ಸ್ಟಾಯ್ ಆಗ ೩೪ ವರ್ಷದವ. ಅವನ ಲಕ್ಷ್ಯ ತನ್ನ ಮನೆಯಿಂದ ೨೫ ಮೈಲಿ ದೂರದಲ್ಲಿ ವಾಸಿಸುತ್ತಿದ್ದ (Bers) ಬೆರ್ಸ್ ಕುಟುಂಬದ ಮೇಲಿದ್ದು, ಕೌಟುಂಬಿಕ ಸುಖಕ್ಕಾಗಿ ಅವನು ಹಂಬಲಿಸಿದ. ಮೂವರು ಬೆರ್ಸ್ ಸಹೋದರಿಯರು ಆ ಕುಲೀನ ಮನೆತನದಲ್ಲಿದ್ದು ಚಿತ್ರಕಲೆ, ಸಂಗೀತ ಹಾಗೂ ಸಾಹಿತ್ಯಾಸಕ್ತರಾಗಿದ್ದರು. ಮಾಸ್ಕೋದಲ್ಲಿದ್ದಾಗ ಟಾಲ್‌ಸ್ಟಾಯ್ ಬೆರ್ಸ್ ಕುಟುಂಬಕ್ಕೆ ಅನೇಕ ಬಾರಿ ಭೇಟಿ ನೀಡಿದ.

ಸ್ವಲ್ಪ ಸಮಯದವರೆಗೆ ಅವನಿಗೆ ಆ ಸೋದರಿಯರಲ್ಲಿ ಯಾರನ್ನು ಆಯ್ಕೆ ಮಾಡಿಕೊಳ್ಳುವುದೆಂದು ತಿಳಿಯಲಿಲ್ಲ. ಅಂತಿಮವಾಗಿ ೧೮ ವರ್ಷಗಳ ಆರೋಗ್ಯವಂತ ಹುಡುಗಿ ಸೋನ್ಯಾ (Sofya Andreyevna)ಳನ್ನು ಆಯ್ಕೆ ಮಾಡಿದ. ೧೮೬೨ರ ಸೆಪ್ಟೆಂಬರ್ ೨೩ರಂದು ಮದುವೆ ವಿಧ್ಯುಕ್ತವಾಯ್ತು.

ಊಹಿಸಿ! ವರ, ವಧುವಿನ ಪರಿವಾರವನ್ನು ಅತಿಥಿಗಳನ್ನು ಪುರೋಹಿತರನ್ನೂ ಚರ್ಚಿನಲ್ಲಿ ಕಾಯುವಂತೆ ಮಾಡಿದ. ಅವನ ಸೇವಕ ತನ್ನ ಯಜಮಾನನಿಗೆ ಧರಿಸಲು ಶುಭ್ರವಾದ ಷರ್ಟ್ ಇಲ್ಲವೆಂದು ತಿಳಿಸಲು ಬಂದ! ಅಂತೂ ಅದನ್ನು ಹೇಗೋ ಹೊಂದಿಸಿದ್ದಾಯ್ತು!

ಕೆಲವು ತಿಂಗಳುಗಳು ಸನ್ಮಾನದಲ್ಲೇ ಕಳೆದವು. ಪ್ರೀತಿ, ಸಂತೋಷಗಳ ಮೊದಲ ಹರಿವಿನ ನಂತರ, ಅವರಲ್ಲಿ ಜಗಳಗಳೂ ಒಪ್ಪಂದಗಳೂ ನಡೆದವು.

ಟಾಲ್‌ಸ್ಟಾಯ್ ಗೌರವಯುತ ಕೌಟುಂಬಿಕ ಜೀವನ ನಡೆಸಿದ. ಸಾಕಷ್ಟು ಶಾಂತಿ, ಸಮಾಧಾನಗಳನ್ನು ಪಡೆದ. ಹೃದಯದ ಆ ಹೊಯ್ದಾಟ ಅವನನ್ನು ಹಿಡಿದ ಆ ಹತಾಶೆ, ಅಹಂಕಾರಗಳೊಂದೂ ಇಲ್ಲವಾದವು. ತನ್ನ ಶಾಲೆ ಹಾಗೂ ಶಾಲೆಯ ನಿಯತಕಾಲಿಕೆಯ ಬಗ್ಗೆ ಕೆಲಸಮಾಡುವುದನ್ನು ನಿಲ್ಲಿಸಿದ. ತನ್ನ ಸೃಜನಾತ್ಮಕ ಸಾಹಿತ್ಯದ ಕೆಲಸದಲ್ಲವನು ಮಗ್ನನಾದ.

೧೮೬೩ರ ಸೆಪ್ಟೆಂಬರ್ ವೇಳೆಗೆ *'War and Peace'* ಅವನ ಲಕ್ಷ್ಯವನ್ನೆಲ್ಲಾ ಸೆಳೆದುಕೊಂಡಿತ್ತು. ಈ ಕಾದಂಬರಿ ವಾಸ್ತವವಾಗಿ ರಾಷ್ಟ್ರಗಳ ಹೋರಾಟ, ಅವರ ಸುಖ, ದುಃಖ, ಅವಮಾನಗಳ ಕಥೆಯಾಗಿದ್ದು ಇದನ್ನು ಪೂರ್ಣಗೊಳಿಸಲು ಅವನು ೫ ವರ್ಷ ತೆಗೆದುಕೊಂಡ. (೧೮೬೪–೧೮೬೯) ಅವನು ಜೀವನದಲ್ಲಿ ತಿಳಿದಿದ್ದಂಥ ಜನಗಳಿಂದಲೇ ಪಾತ್ರಗಳು ಸೂಚಿಸಲ್ಪಟ್ಟಿದ್ದವು.

ಈ ಅದ್ಭುತ ಕಾದಂಬರಿಯೊಂದು ದೊಡ್ಡ ಚಿತ್ರಪಟದ ಬಟ್ಟೆ (Canvas) ಆಗಿದ್ದು "The Beast of Revolution" ಎನಿಸಿದ ನೆಪೋಲಿಯನ್‌ನ ಕೈಕೆಳಗೆ ಫ್ರಾನ್ಸ್ ಮತ್ತು ರಷ್ಯಾದ ನಡುವಿನ ಬಲವಾದ ಹೋರಾಟದ ವೇಳೆ ಚಿತ್ರಿಸಲಾಗಿದ್ದ

ಜೀವನದ ವಿಸ್ತೃತ ದರ್ಶನವೇ ಆಗಿತ್ತು. ನಾಲ್ಕುನೂರು ಸಾವಿರ ಜನರ ಫ್ರೆಂಚ್ ಸೇನೆ ರಷ್ಯಾದಲ್ಲಿ ದೂರ ದೂರಕ್ಕೆ ಎಳೆಯಲ್ಪಟ್ಟರೆ, ರಷ್ಯಾಸೇನೆ ಯುದ್ಧಕ್ಕೆ ತೊಡಗಿಸಿಕೊಳ್ಳಲು ನಿರಾಕರಿಸುತ್ತಿರುವುದು; ರಾಜಕುಮಾರ ಆಂಡ್ರೆ ಗಾಯಗೊಂಡು ರಕ್ತ ಸುರಿಸುತ್ತಿರುವುದು ; ಕೊನೆಗೆ ತಾನು ಅತಿಯಾಗಿ ಪ್ರೀತಿಸುತ್ತಿದ್ದ ಹುಡುಗಿ ನಟಾಶಾಳ ಮನೆಯಲ್ಲಿ ಸಾಯುತ್ತಿರುವುದು, ವಿಯರೆ ಫ್ರೆಂಚರಿಂದ ಸೆರೆಹಿಡಿಯಲ್ಪಟ್ಟು ಕರಗುತ್ತಿರುವ ಹಿಮದ ಮೇಲೆ ಸಾಯುತ್ತಿರುವ ಹಾಗೂ ಸಹ ಕೈದಿಗಳ ಕೊಳೆಯುತ್ತಿರುವ ನಾಯಿ, ಕುದುರೆಗಳ ಹೆಣಗಳ ಮಧ್ಯೆ ನಗು ಹಾಗೂ ಕಥೆಗಳಿಂದ ಮತ್ತು ಸಮಾಧಾನಕರ ನೀತಿಯ ಆಣತಿಗಳಿಂದ ಅವನನ್ನು ಗೆಲುವಾಗಿಸುತ್ತಿದ್ದ ಒಬ್ಬನೆಂದರೆ ಪ್ಲೆಟೋನ್ ಕರಟೆವ್. “ಜಗತ್ತಿನ ಶಿಲ್ಪಿಗಿಂತ ಹೆಚ್ಚು, ದೈವಶಾಸ್ತ್ರಜ್ಞರಿಗೆ ತಿಳಿದುದಕ್ಕಿಂತ" ಆ ಬಡ ಸರಳ ಮನುಷ್ಯ ಕರಟೆವ್‌ನ ದೇವರು ಉದಾತ್ತ ಹಾಗೂ ಹೆಚ್ಚು ವಾಸ್ತವ ಎಂದು ಖಚಿತಪಡಿಸುತ್ತ ನೆಪೋಲಿಯನ್ ಸೆಮ್ಯಾನೋವ್‌ಸ್ಕೊಯೆಯ ಎತ್ತರದಿಂದ ಕಂಡ ರಣರಂಗದ ಹೊಗೆ ಹಾಗೂ ಭಯಾನಕತೆಯನ್ನು ಸಾವಿರಾರು ಮಂದಿ ಸತ್ತ ಹಾಗೂ ಗಾಯಗೊಂಡವರು ಹರಡಿದ ಸೋಲು, ಗೆಲುವುಗಳು ಒಂದು ಅಣಕೆಂದೂ ಹಾಗೂ ಇಡೀ ಹೋರಾಟವೇ ಅರ್ಥಹೀನವಾದುದೆನಿಸಿತು. *War and Peace* ಟಾಲ್‌ಸ್ಟಾಯಿಯ ಇತಿಹಾಸದ ತತ್ವವನ್ನು ಪರಿಚಯ ಮಾಡಿಸಿತು.

ಅವನ ದೃಷ್ಟಿಯಲ್ಲಿ ಇತಿಹಾಸದ ಪ್ರಮುಖ ಘಟನೆಗಳು ಯಾವುದೇ ಒಬ್ಬ ವ್ಯಕ್ತಿ ನೆಪೋಲಿಯನ್ ಅಥವಾ ವೆಲ್ಲಿಂಗ್‌ಟನ್‌ನ ಇಷ್ಟದ ಮೇಲೆ ಅವಲಂಬಿತವಾಗಿರುವುದಿಲ್ಲ. ಆದರೆ ಅವು ಪೂರ್ವನಿಯೋಜಿತವಾದವು. ದಂಡನಾಯಕರು, ದೊರೆಗಳು ಮತ್ತು ಚಕ್ರವರ್ತಿಗಳು ಇತಿಹಾಸದ ಗುಲಾಮರು ಎಂದು ಟಾಲ್‌ಸ್ಟಾಯ್ ವಾದಿಸಿದ.

೧೮೭೩ರ ಮಾರ್ಚ್ ೨೦ರಂದು ಟಾಲ್‌ಸ್ಟಾಯ್ ‘ಅನ್ನ ಕರೇನಿನಾ’ ಪ್ರಾರಂಭಿಸಿದ. ಪುಷ್ಕಿನ್‌ನ *"Tales and Belkin"* ನಿಂದ ಸುಳಿವು ಪಡೆದ. ‘ವಾರ್ ಅಂಡ್ ಪೀಸ್’ನಲ್ಲಿರುವಂತೆ “ಅನ್ನಕರೆನಿನಾ"ದಲ್ಲೂ ಜೀವನದ ಸತ್ವದ ಬಗ್ಗೆ ಬರೆದ. ಇಲ್ಲಿ ಶ್ರೀಮಂತ ಸಮಾಜದಲ್ಲಿ ಮದುವೆಯಾದ ಹೆಣ್ಣೊಬ್ಬಳ ನೈತಿಕಪತನದ ಬಗ್ಗೆ ವಿಚಾರ ಮಾಡಿದ್ದಾನೆ. ಅನ್ನಾ ವೈವಾಹಿಕ ಜೀವನದ ಎಂಟು ವರ್ಷಗಳ ನಂತರ ಪವಿತ್ರವಾದುದೆಲ್ಲವನ್ನು ರೋಂಸ್ಕಿ ಎಂಬ ವ್ಯಕ್ತಿಗೋಸ್ಕರ ತ್ಯಾಗವಾಡಿ, ಅಧೋಗತಿಗಿಳಿದು, ಸ್ವಾರ್ಥ, ಈರ್ಷೆ ಹಾಗೂ ದ್ವೇಷದಿಂದ ಚಿತ್ರಹಿಂಸೆ ಹೊಂದಿ, ಓಡುವ ರೈಲಿನಡಿ ಬಿದ್ದು ಜೀವನವನ್ನು ಅಂತ್ಯಗೊಳಿಸುತ್ತಾಳೆ. ಟಾಲ್‌ಸ್ಟಾಯ್ ಕಾದಂಬರಿಯಲ್ಲಿ ಕಿಟ್ಟಿ ಮತ್ತು ಲೆವಿನ್‌ರ ನಡುವಿನ ಪ್ರೀತಿಯನ್ನು ಇನ್ನೊಂದು ಸಮಾನಾಂತರ ಕಥೆಯಾಗಿ ಹೆಣೆದ. ಟಾಲ್‌ಸ್ಟಾಯ್ ತನ್ನ ಸ್ವಂತ ವ್ಯಕ್ತಿತ್ವವನ್ನು ಲೆವಿನ್‌ಗೂ ಮತ್ತು ಸತ್ತ ಸೋದರ ಡ್ಮಿಟ್ರಿ ಯದನ್ನು ಲೆವಿನ್‌ನ ಸೋದರ

ನಿಕೋಲಾಯ್‌ನ ಮೂಲಕ ಪರಿಕಲ್ಪಿಸಿದ. ಟಾಲ್‌ಸ್ಟಾಯ್‌ನ ಸ್ವಂತ ಜೀವನದ ಚಿತ್ರಗಳನ್ನು ಕಾದಂಬರಿಗೆ ಅಳವಡಿಸಿದ್ದು ಅವನ ಕಲ್ಪನೆಯ ಸ್ಪರ್ಶದಿಂದ ಕಾದಂಬರಿ ಭವ್ಯವಾಗಿ ಮೂಡಿ ಬಂದಿದೆ. ಕಲೆಯ ಒಂದು ಕೃತಿಯಾಗಿ ಅನ್ನಾ ಕರೆನಿನಾ ಪರಿಪೂರ್ಣತೆಯ ಒಂದು ಮಾದರಿಯಾಗಿದ್ದು ಡೊಸ್ಟೋಯೆವ್‌ಸ್ಕಿಯಿಂದ ಬಹುವಾಗಿ ಪ್ರಶಂಸಿಸಲ್ಪಟ್ಟಿದೆ. ಈ ಕಲಾಕೃತಿಯಲ್ಲಿ ಟಾಲ್‌ಸ್ಟಾಯ್ ಹಿಂದೆಂದೂ ಇಲ್ಲದ ರೀತಿಯಲ್ಲಿ ಮನುಷ್ಯನ ಅದೃಷ್ಟದ ನಿಗೂಢತೆಯನ್ನು ವಿಶೇಷವಾಗಿ ವಿಚಾರ ಮಾಡಿದ್ದಾನೆ ಹಾಗೂ ಮನುಷ್ಯನ ಸುಖ ಪ್ರಕೃತಿಯ ನಿರ್ದಿಷ್ಟ ಕಾನೂನಿನ ಮೇಲೆ ಅವಲಂಬಿತವಾಗಿರುತ್ತದೆಂದು ಮೈಮರೆಸುವ ರೀತಿಯಲ್ಲಿ ವಿವರಿಸಿದ್ದಾನೆ. ೧೮೭೭ರಲ್ಲಿ ಇದು ಪೂರ್ಣಗೊಂಡಿತು. ವಾರ್ ಅಂಡ್ ಪೀಸ್‌ನಂತೆ ಅಪರಿಮಿತ ಅವಕಾಶಗಳಿಲ್ಲದಿದ್ದರೂ ಈ ಪ್ರತಿಷ್ಠಿತ ಕೃತಿ ಟಾಲ್‌ಸ್ಟಾಯಿಯ ಸೃಜನಾತ್ಮಕ ಕಲೆ ಹಾಗೂ ಕಾಲ್ಪನಿಕ ದೃಷ್ಟಿಯನ್ನು ಒಮ್ಮೆಲೇ ನಿದರ್ಶಿಸುವಂಥದಾಗಿತ್ತು. ರಷ್ಯನ್ ಬರಹಗಾರರಲ್ಲಿ ಅತಿ ಪ್ರತಿಷ್ಠಿತನೆನ್ನುವ ಅವನ ಖ್ಯಾತಿ ಸ್ಥಿರಪಟ್ಟಿತು.

ಅವನ ಇತರ ಶ್ರೇಷ್ಠ ಕೃತಿಗಳು *The Cossacks (1863) My Confession (1879-82), The Power of Darkness (1855), The Kingdom of God is within You (1893), Resurrection (1899)* ಮುಂತಾದವು.

ಟಾಲ್‌ಸ್ಟಾಯಿಯ ಆಧ್ಯಾತ್ಮಿಕ ಅನ್ವೇಷಣೆ ಮುಂದುವರಿಯಿತು. ರಷ್ಯದ ರೈತನಿಗೆ ದೇವರಲ್ಲಿ ನಂಬಿಕೆ ಇರುವ ವಿಷಯವನ್ನು ಅವನು ಗಮನಿಸಿದ್ದ. ದೇವರಲ್ಲಿ ನಂಬಿಕೆ ಇದ್ದಾಗ ಜೀವನ ಹಿತಕರವಾಗಿರುವುದೆಂದೂ ದೇವರಲ್ಲಿ ನಂಬಿಕೆ ಕಳೆದುಕೊಂಡಾಗ ದುಃಖಕರವಾಗುತ್ತದೆಂಬುದು ಅವನ ಅನಿಸಿಕೆ. "ದೇವರೇ ಜೀವನ, ದೇವರನ್ನರಸುತ್ತ ಜೀವಿಸು, ನಂತರ ನೀನು ದೇವರಿಲ್ಲದೆ ಜೀವಿಸಲಾರೆ" ಎಂಬ ತನ್ನ ಅಂತರಾಳದ ಪ್ರೇರಣೆಯನ್ನವನು ಕೇಳಿದ.

ಅವನು ಸಾಂಪ್ರದಾಯಿಕ ಚರ್ಚಿನ ಧಾರ್ಮಿಕ ವಿಧಿವಿಧಾನಗಳನ್ನನುಸರಿಸಿದ; ಆದರೂ ಅತೃಪ್ತನಾಗುಳಿದ. ಮನುಷ್ಯ ದೇವರ ಸಂಬಂಧ ಜೀವನದ ದೊಡ್ಡ ಸಮಸ್ಯೆಯಾಗಿ, ಅದವನನ್ನು ಚಿತ್ರಹಿಂಸೆಗೊಳಪಡಿಸಿತ್ತು. ಈ ವಿಷಯದ ಬಗ್ಗೆ ದಿಟ್ಟತನದ ಹೇಳಿಕೆಗಳು ಅವನ *Confession* ನಲ್ಲಿ ಕಾಣಸಿಗುತ್ತವೆ. ಪರಿಣಾಮವಾಗಿ ದೇವರು ಮತ್ತು ಮಾನವತೆಗೆ ಸೇವೆ ಸಲ್ಲಿಸುವುದರೊಂದಿಗೆ ಮನುಷ್ಯ ನೈತಿಕವಾಗಿ ಲಾಭ ಪಡೆಯಬಲ್ಲ ಎಂದು ಹೇಳಿದ ಟಾಲ್‌ಸ್ಟಾಯ್.

೧೮೭೮ರ ಅಕ್ಟೋಬರ್‌ನಲ್ಲಿ ಕಳೆದ ತನ್ನ ೫೦ ವರ್ಷಗಳನ್ನು ಅವಲೋಕಿಸಿ ತನ್ನ ದಿನಚರಿಯಲ್ಲೊಂದು ಗುರುತು ಮಾಡಿದ. "ಪ್ರಾಪಂಚಿಕ ಜನರಿದ್ದಾರೆ, ಭಾರವಾಗಿ ರೆಕ್ಕೆ ಇಲ್ಲದ (ನಿರುಪಯೋಗಿಗಳು)ವರು.

ಅವರು ಮನುಷ್ಯರ ನಡುವೆ ಭಯಂಕರ ಗುರುತು ಮೂಡಿಸಿ ಕ್ಷೋಭೆಯುಂಟು

ಮಾಡುತ್ತಾರೆ. ಆದರೆ ಅದೆಲ್ಲವೂ ಭೂಮಿಯ ಮೇಲೆ.... ಸ್ವರ್ಗೀಯ ರೆಕ್ಕೆಯುಳ್ಳವರು ಕೆಲವರಿದ್ದಾರೆ. ಹಾಗೂ ಉದ್ದೇಶಪೂರ್ವಕವಾಗಿ ಮನುಷ್ಯರ ಬಗ್ಗೆ ಪ್ರೀತಿಯಿಂದ – ಧರೆಗಿಳಿಯುತ್ತಾರೆ (ತಮ್ಮ ರೆಕ್ಕೆಗಳನ್ನು ಮಡಚಿ) ಹಾಗೂ ಮನುಷ್ಯರಿಗೆ ಹಾರಲು ಕಲಿಸುತ್ತಾರೆ. ಅವರ ಅವಶ್ಯಕತೆ ಇನ್ನು ಇಲ್ಲವಾದಾಗ ಹಾರಿ ಹೋಗುತ್ತಾರೆ. ಕ್ರಿಸ್ತ".

ಟಾಲ್‌ಸ್ಟಾಯ್ ೫೦ನೇ ವಯಸ್ಸಿನಲ್ಲಿ ತನ್ನ ಹೆಂಡತಿ ತನ್ನಿಂದ ವಿಮುಖಗೊಂಡಿದ್ದಾಳೆಂದೂ, ತನ್ನ ಮಕ್ಕಳು ತನ್ನ ಬಗ್ಗೆ ಉದಾಸೀನರಾಗಿದ್ದಾರೆಂದೂ ತಿಳಿದ. ವಿವರಣೆ ಕೊಡಲಾಗದಂಥ ವಿಷಯ. ಬಹುಶಃ ಅವನು ತೀರಾ ಔನ್ನತ್ಯದಲ್ಲಿದ್ದು, ತನ್ನ ಕುಟುಂಬದ ಮಿತಿಗೆ ಸಿಗದವನಾಗಿದ್ದ. ಈ ಹಂತದಲ್ಲಿ ಟಾಲ್‌ಸ್ಟಾಯ್ ತಾತ್ವಿಕ ಮತಧರ್ಮಶಾಸ್ತ್ರವನ್ನು ಪ್ರಶ್ನಿಸಿದ. "ಕೆಟ್ಟವನನ್ನು ವಿರೋಧಿಸಬೇಡ ಹಾಗೂ ನಿನ್ನ ಶತ್ರುಗಳನ್ನು ಪ್ರೀತಿಸು" ಎಂಬುದರ ಬಗ್ಗೆ ಅವನಿಗೆ ಹೊಸ ಮೆಚ್ಚುಗೆ ಮೂಡಿತ್ತು. ಆಧ್ಯಾತ್ಮಿಕ ತೊಡಕುಗಳನ್ನು ಮೀರಿ ನಿಂತು ಸುಖಿ ಎನಿಸಿದ.

ಝಾರ್ ಎರಡನೇ ಅಲೆಗ್ಸಾಂಡರ್ ಕೊಲೆ ಮಾಡಲ್ಪಟ್ಟು, ಅವನ ಹಂತರಿಕರಿಗೆ ಮರಣದಂಡನೆ ವಿಧಿಸಲಾಗಿತ್ತು. ಟಾಲ್‌ಸ್ಟಾಯ್ ಗಲ್ಲು ಶಿಕ್ಷೆಗೆ ವಿರೋಧಿಯಾಗಿದ್ದ. "ಕೆಟ್ಟವನನ್ನು ವಿರೋಧಿಸಬೇಡ" ಎಂಬ ತನ್ನ ಹೊಸ ನಂಬಿಕೆಯಿಂದ ಒತ್ತಾಯಿಸಲ್ಪಟ್ಟು ಝಾರ್ ಮೂರನೇ ಅಲೆಗ್ಸಾಂಡರ್‌ಗೆ ಪತ್ರವೊಂದನ್ನು ಬರೆದ. ಪತ್ರ ಕೊಲೆಯ ಅಗಾಧತೆಯನ್ನೊಪ್ಪಿ "ನಿಮ್ಮ ಶತ್ರುವನ್ನು ಪ್ರೀತಿಸಿ", ಎಂಬ ವ್ಯಾಖ್ಯುವಿನ ಉದ್ಧೃತಭಾಗವನ್ನು ಹೇಳುತ್ತಾ ಕೆಡಕಿಗೆ ಒಳಿತನ್ನು ಹಿಂತಿರುಗಿಸಿ ಎಂದು ದೊರೆಯನ್ನು ಪ್ರಾರ್ಥಿಸಿದ. ಸಾಹಿತ್ಯ ಲೋಕದಲ್ಲಿ ಚಿರಪರಿಚಿತವಾದ ಟಾಲ್‌ಸ್ಟಾಯ್‌ನ ಸ್ನೇಹಿತ ಸ್ಟ್ರಕೋವ್ ಹಾಗೂ ಚರ್ಚಿನ ಗೌರವಾನ್ವಿತ ಮತ್ತು ಹಿಂದೆ ಮೂರನೇ ಅಲೆಗ್ಸಾಂಡರನ ಗುರುವಾಗಿದ್ದ ಪೊಬೆಡೊಮೊಸ್ಟೆವ್‌ನ ಸಹಾಯದೊಂದಿಗೆ ಪತ್ರವನ್ನು ದೊರೆಗೆ ತಲುಪಿಸಿದ. ದೊರೆ ಆ ಸಲಹೆಯನ್ನು ತಿರಸ್ಕರಿಸಿದ ಹಾಗೂ ಎಲ್ಲಾ ಆರು ಮಂದಿ ಕೊಲೆಗಡುಕರನ್ನೂ ಮರಣದಂಡನೆಗೆ ಗುರಿಪಡಿಸಲಾಯ್ತು.

ಟಾಲ್‌ಸ್ಟಾಯ್ ಡೋಸ್ಟೋಯವ್‌ಸ್ಕಿಯ ಕೃತಿ *House of the Dead* ಅನ್ನು ಓದಿ ಅದರ ಮೇಲೆ ತನ್ನ ಪ್ರಶಂಸೆಯ ಮಳೆಗರೆದ. ಅವನ ಬಗ್ಗೆ ಅವನು ಸಾಧ್ಯವಾಗುವ ಭಾಷೆಗಳಲ್ಲೆಲ್ಲಾ ಒಳ್ಳೆಯ ಮಾತುಗಳನ್ನು ಹೇಳುತ್ತಿದ್ದ. ಅವನು ಕಲೆಯಿಂದ ಧಾರ್ಮಿಕತೆಯತ್ತ ತಿರುಗುವಂತೆ ಕಾಣುತ್ತಿತ್ತು. ಕೆಳಮಟ್ಟದ ನೀತಿ ಹೊಂದಿರುವವರನ್ನು ಅವನು ಕರಿಯ ಜನಗಳೆಂದು ಭಾವಿಸುತ್ತಿದ್ದ.

ಬಡವರ ಕ್ಷಾಮ ಹಾಗೂ ಅನ್ನೈರ್ಮಲ್ಯ ಯಾವಾಗಲೂ ಟಾಲ್‌ಸ್ಟಾಯ್‌ನ ಲಕ್ಷ್ಯವನ್ನು ಸೆಳೆಯುತ್ತಿತ್ತು. ೧೮೮೧ರ ಸುಮಾರಿಗೆ ಟಾಲ್‌ಸ್ಟಾಯ್ ಮಾಸ್ಕೋದ ಕೊಳಚೆ ಪ್ರದೇಶಗಳಿಗೆ ಭೇಟಿನೀಡುವ ಜನಗಣತಿಯ ಅಧಿಕಾರಿಯಾಗಿ ಆಯ್ಕೆ ಮಾಡಲ್ಪಟ್ಟ. ಅವನು ಹಣ ಹಾಗೂ ಪಾನೀಯಗಳನ್ನು ಉಚಿತವಾಗಿ ಹಂಚಿದ.

೧೮೮೬ರಲ್ಲಿ ನಾಲ್ಕು ವರ್ಷದ ಅವನ ಮಗ ಅಲ್ಯೋಶಾನನ್ನು ಕಳೆದುಕೊಂಡ. ಹಿಂದೆ ಇಬ್ಬರು ಮಕ್ಕಳನ್ನು ಕಳೆದುಕೊಂಡ ಅವನಿಗೆ ಇದು ಬಹುಶಃ ಮೂರನೆಯ ಅಗಲಿಕೆಯಾಗಿತ್ತು. ತನ್ನಿಂದ ಅಗಲಿದವರೊಂದಿಗೆ ತನ್ನನ್ನು ಸೇರಿಸುವ ಸಾವು ಒಳ್ಳೆಯದು ಎಂದವನು ಯೋಚಿಸಿದ. ಅದೇ ವರ್ಷ ಅವನು ಸ್ತ್ರೀಯರು ಮಕ್ಕಳಿಗೆ ಜನ್ಮವಿತ್ತು ಹೇಗೆ ಅವರ ಪಾಲನೆ ಮಾಡಬೇಕೆಂಬ ಬಗ್ಗೆ *What Then Must We Do?* ಎಂಬ ಕೃತಿ ರಚಿಸಿದ.

ಅವನು ಬರಹಗಾರನಾಗಿ ಪಡೆದ ಖ್ಯಾತಿ, ಬಡವರು, ನರಳುವವರ ಬಗೆಗಿನ ಅವನ ಸಹಾಯದ ಕೊಡುಗೆಗಳಿಂದ ಬಂದ ಜನಪ್ರಿಯತೆಯಿಂದಾಗಿ ರಾಜ್ಯ ಹಾಗೂ ಚರ್ಚುಗಳೆರಡೂ ಟಾಲ್ಸ್‌ಟಾಯ್‌ಗೆ ವಿರುದ್ಧವಾದವು. ಅವನಿಗೆ ಶಿಕ್ಷೆ ವಿಧಿಸಿದರೆ, ಅದು ಕೇವಲ ಅವನ ನಿರ್ಭೀತ ಅನಿಸಿಕೆಗಳನ್ನು ಪ್ರಸಾರ ಮಾಡಲು ಸಹಾಯ ಮಾಡಿದಂತಾಗುತ್ತದೆಂದು ರಾಜ್ಯ ಹೆದರಿತು.

೧೮೯೨ರಲ್ಲಿ ಕ್ಷಾಮದಿಂದಾಗಿ ರಷ್ಯಾದಲ್ಲಿ ಸಂಕಷ್ಟಗಳು ಶುರುವಾದವು. ಟಾಲ್ಸ್‌ಟಾಯ್ ಬೆಗಿಷೆವ್ಕಾದಲ್ಲಿ ಪರಿಹಾರ ಕಾರ್ಯಕ್ರಮಗಳನ್ನು ನಿರ್ದೇಶಿಸಿದ. ಅವನು ನಿತ್ಯವೂ ೧೩,೦೦೦ ಮಂದಿಗೆ ಆಹಾರವೊದಗಿಸಲು ೨೪೬ ಅಡಿಗೆ ಮನೆಗಳನ್ನೂ ೩೦೦೦ ಮಕ್ಕಳಿಗೆ ಊಟವೊದಗಿಸಲು ೧೨೪ ಅಡಿಗೆ ಮನೆಗಳನ್ನು ಸ್ಥಾಪಿಸಿದ. ಉತ್ತಮ ಉಪಕಾರಿಯಾಗಿ, ಮನುಷ್ಯರ ನಡುವೆ ದೇವರಂತೆ ಸಂಚರಿಸಿದ.

೧೮೯೩ರಲ್ಲಿ The Russian English Literary Society ಅವನನ್ನು ಸಂಘದ ಗೌರವ ಸದಸ್ಯನಾಗಿ ಆಯ್ಕೆ ಮಾಡಿತು. ಅವನು ಸಂತೋಷಗೊಂಡ. ಆ ವರ್ಷ ಆಗಸ್ಟ್‌ನಲ್ಲಿ ಪುಸ್ತಕಗಳು ಹಾಗೂ ಕಥೆಗಳ ಸಂಗ್ರಹವೊಂದನ್ನು ಹೆನ್ರಿ ಜಾರ್ಜ್ ಅವನಿಗೆ ಕಳಿಸಿದ. ಭೂಮಿಯ ಒಡೆತನ ಖಾಸಗಿ ಆಸ್ತಿಯಾಗಿ ಇರುವುದಿಲ್ಲವೆಂದು ಟಾಲ್ಸ್‌ಟಾಯ್‌ಗೆ ಸಂತೋಷವಾಯ್ತು, ಆದರೆ ಹೆನ್ರಿ ಜಾರ್ಜನ, ಭೂಮಿಯ ಮೇಲಿನ ಏಕ ತೆರಿಗೆಯ ಆಲೋಚನೆ ಅವನಿಗೆ ತೃಪ್ತಿದಾಯಕವಾಗಿರಲಿಲ್ಲ.

೧೮೯೬ರಲ್ಲಿ ಇಡೀ ರಾಜ್ಯದ ಆಡಳಿತ ಟಾಲ್ಸ್‌ಟಾಯ್‌ನ ಅನುಯಾಯಿಗಳ ವಿರುದ್ಧವಾಯ್ತು. ನಾಲ್ಕು ಸಾವಿರ ಮಂದಿ ಗಡೀಪಾರು ಮಾಡಲ್ಪಟ್ಟು ಚಿತ್ರಹಿಂಸೆಗೊಳಗಾಗಿ ಗೋಪ್ಯವಾಗಿಡಲ್ಪಟ್ಟರು. ನಾನೂರು ಮಂದಿ ಸಾವಿಗೀಡಾದರು. ಟಾಲ್ಸ್‌ಟಾಯ್ ಅವರಿಗಾಗಿ ಸಹಾಯನಿಧಿ ಕೂಡಿಸಿದ. ವಿಶ್ವವಿದ್ಯಾಲಯದ ಅಧಿಕಾರವರ್ಗದವರಿಂದ ಹಾಗೂ ಅವರ ಅಧಿಕಾರಶಾಹಿ ಪದ್ಧತಿಗಳಿಂದ ಅತೃಪ್ತರಾದ ವಿದ್ಯಾರ್ಥಿಗಳು ಸಹಾಯಕ ಮಧ್ಯಸ್ಥಿಕೆಗಾಗಿ ಟಾಲ್ಸ್‌ಟಾಯ್ ಬಳಿ ಬರುತ್ತಿದ್ದರು. ಎಲ್ಲೇ ಅನ್ಯಾಯವಾದರೂ ಅದವನನ್ನು ಆಳವಾಗಿ ತಟ್ಟುತ್ತಿತ್ತು. ಅವನ *Resurrection* ನ (೧೮೯೯)ವಿಷಯದತ್ತ ನೋಡಿ. ಅಲ್ಲಿ ಕೂಡ ನೀವೊಂದು ಮನಕರಗಿಸುವ ದುಃಖದಾಯಕ ಕಥೆ ಕೇಳುತ್ತೀರಿ, ವಾಸ್ತವವಾಗಿ, ಟಾಲ್ಸ್‌ಟಾಯ್‌ಗೆ

ಅವನ ವಕೀಲ ಮಿತ್ರನಿಂದ ಹೇಳಲ್ಪಟ್ಟ ನ್ಯಾಯಾಲಯದ ದಾವೆಗೆ ಸಂಬಂಧಪಟ್ಟ ಕಥೆ. ಅಲ್ಲಿ ತಬ್ಬಲಿ ಹುಡುಗಿಯೊಬ್ಬಳು ನಿರ್ಭೀತ ತರುಣನೊಬ್ಬನಿಂದ ಅತ್ಯಾಚಾರಕ್ಕೊಳಗಾಗಿ, ಅವಳು ತಾಯಿಯಾಗುವುದರಲ್ಲಿದ್ದಾಗ ಪರಿತ್ಯಕ್ತಳಾಗಿ, ಕ್ರೂರವಿಧಿಯ ಒತ್ತಾಯದಿಂದ ವೇಶ್ಯಾವೃತ್ತಿಗೆ ನೂಕಲ್ಪಡುತ್ತಾಳೆ. ಕಾದಂಬರಿಯ ಆಳಕ್ಕಿಳಿದಂತೆಲ್ಲಾ ನೀತಿವಾದಿ ಹಾಗೂ ಕಲಾವಿದ ಟಾಲ್ಸ್‌ಟಾಯ್‌ನ ನಡುವೆ ಉದ್ರಿಕ್ತಗೊಂಡ ಒಳತೋಟಿಯನ್ನು ಕಾಣಬಹುದು.

ಹೂಗಳ ಸುವಾಸನೆಯಂತೆ ಟಾಲ್ಸ್‌ಟಾಯ್‌ನ ಕೀರ್ತಿಯ ಪರಿಮಳ ದೂರ ದೂರಕ್ಕೆ ಹಬ್ಬಿತು. ಕಡು ಬಡತನ ಹಾಗೂ ವ್ಯಥೆಯಿಂದ ಭಾವೋದ್ರಿಕ್ತವಾದ ರಷ್ಯನ್ನರನ್ನು ಅವನ ಬರಹಗಳು ಉದ್ದೀಪನಗೊಳಿಸಿದವು. ಇದರಿಂದಾಗಿ ಸರ್ಕಾರ ಅವನ ಕೃತಿಗಳ ಮೇಲೆ ನಿಷೇಧಾಜ್ಞೆ ಹೇರಿತು. ಎಲ್ಲ ವಿಧದ ಅಧಿಕಾರ ವರ್ಗದವರೊಂದಿಗೆ ಅವನು ಘರ್ಷಣೆಗಿಳಿಯಬೇಕಾಯ್ತು ಹಾಗೂ ಹೋಲಿ ಸಿನಾಡ್ ಅವನನ್ನು ಚರ್ಚ್‌ನಿಂದ ಬಹಿಷ್ಕರಿಸಿತು.

ಅವನ ವಿಚಿತ್ರ ನೀತಿ ತತ್ವಗಳು ಹಾಗೂ ಧಾರ್ಮಿಕ ವಿಚಾರಗಳ ಬಗ್ಗೆ ತನ್ನ ಕುಟುಂಬದಿಂದ ಯಾವ ರೀತಿಯ ಬೆಂಬಲವೂ ಸಿಗಲಿಲ್ಲ. ತನ್ನ ಕೃತಿಗಳ ಹಕ್ಕಿನ ಬಗೆಗಿನ ಜಗಳ ಕುಟುಂಬದ ಮಾನಸಿಕ ಉದ್ವೇಗವನ್ನು ಹೆಚ್ಚಿಸಿತು. ಅವನ ಬೋಧನೆಯ ಮೇಲಿನ ಕಟುಟೀಕೆಗಳು ಸಹ ಅವನನ್ನು ದುಃಖತಪ್ತನನ್ನಾಗಿಸಿದವು. ಅವನ ರೈತ ಮಿತ್ರ ನೋವಿಕೋವ್ ೧೯೧೦ರ ಅಕ್ಟೋಬರ್‌ನಲ್ಲಿ ಯಾಸ್ನಯಾ ಪೊಲ್ಯಾನಾಕ್ಕೆ ಭೇಟಿಕೊಟ್ಟ. ಅಕ್ಟೋಬರ್ ೨೦ರ ರಾತ್ರಿ ಟಾಲ್ಸ್‌ಟಾಯ್ ಅವನಿಗೆ ಹೇಳಿದ.... ಈ ಮನೆಯಲ್ಲಿ ನಾನು ನರಕದಲ್ಲಿರುವಂತೆ ಬೇಯುತ್ತಿದ್ದೇನೆ, ಎಂಬ ವಿಷಯವನ್ನು ನಾನು ನಿನ್ನಿಂದ ಮುಚ್ಚಿಡುವುದಿಲ್ಲ. ನಾನು ಯಾವಾಗಲೂ ಕಾಡಿಗೋ, ಕಾವಲಾಳಿನ ಗುಡಿಸಿಲಿಗೋ ಅಥವಾ ನಾವು ಪರಸ್ಪರರಿಗೆ ಸಹಾಯ ಮಾಡಬಲ್ಲಂಥ ಹಳ್ಳಿಯ ಬಡ ರೈತನೊಬ್ಬನ ಮನೆಗೋ ಎಲ್ಲಿಯಾದರೂ ಹೊರಟುಹೋಗಬೇಕೆಂಬ ಯೋಚನೆಯನ್ನು ಇಷ್ಟಪಟ್ಟಿದ್ದೇನೆ. ಈ ಮನೆಗೆ ನಾನು ಅನಾವಶ್ಯಕ. ಅವನು ಮನೆಯಿಂದ ಹೊರಟುಹೋಗಿ ತನ್ನನ್ನು ತಾನು ಉಳಿಸಿಕೊಳ್ಳಬೇಕೆಂದು ನಿರ್ಧರಿಸಿದ ಲಿಯೋ ನಿಕೋಲಾಯೇವಿಚ್‌ನಂತಲ್ಲ, ಲಿಯೋಗಿಂತ ಅತಿ ಹೆಚ್ಚಾಗಿ, ಲಿಯೋಗಿಂತ ಆಚೆ ದೂರಕ್ಕೆ.

ತನ್ನ ೮೩ನೆಯ ವಯಸ್ಸಿಗೆ ಅವನು ತನ್ನ ಮನೆ ಬಿಟ್ಟು ಶಮರ್ಡಿನೋ ಕಾನ್ವೆಂಟ್‌ನಲ್ಲಿ ಮಶಾಳ ಭೇಟಿಗೆ ಬಂದ. ಸಶಾ (ಅಲೆಗ್ಸಾಂಡ್ರಾ) ಒಬ್ಬಳಿಗೆ ಮಾತ್ರ ತನ್ನ ತಂದೆಯ ಆಧ್ಯಾತ್ಮಿಕ ದುಡಿಮೆಯ ಬಗ್ಗೆ ಆಸಕ್ತಿ ಇತ್ತು. ಅವಳು ಕಾನ್ವೆಂಟಿಗೆ ಬಂದಳು. ಅಲ್ಲಿಂದ ಟಾಲ್ಸ್‌ಟಾಯ್ ದಕ್ಷಿಣಕ್ಕೆ ಬಂದು, ಅಸ್ಟಾಪೊವೋ ತಲುಪಿ ಅಲ್ಲಿ ಖಾಯಿಲೆ ಬಿದ್ದ. ಅವನು ತೀವ್ರ ಶೀತ ನ್ಯುಮೋನಿಯಾಕ್ಕೆ ತಿರುಗಿ, ಸ್ಟೇಷನ್

ಮಾಸ್ತರನ ಮನೆಯ ಕೋಣೆಯೊಂದಕ್ಕೊಯ್ಯಲ್ಪಟ್ಟ. ಅವನು ಒಳ್ಳೆಯ ವಿಶ್ವಾಸಿ ಸ್ನೇಹಿತ. ಚೆರಟ್ಕೋವ್ ಮತ್ತು ಅವನ ಗಂಡು ಮಕ್ಕಳು, ಹೆಣ್ಣು ಮಕ್ಕಳೆಲ್ಲರೂ ಬಂದರು, ಅವನ ಪತ್ನಿ ಸಹ ಬಂದರೂ ತನ್ನಿರವು ಅವನಿಗರಿವಾಗದಂತೆ ದೂರವೇ ಉಳಿದಳು. ಆರು ಮಂದಿ ವೈದ್ಯರು ಅವನ ಸೇವೆಗೆ ನಿಂತರು. ಇಡೀ ವಿಶ್ವದ ಪತ್ರಿಕಾಪ್ರಪಂಚ ತನ್ನ ಗಮನವನ್ನು ಕತ್ತಲು ಕವಿದ ಅಸ್ಟಾಪ್ರೊವೋ ಮೇಲೆ ಕೇಂದ್ರೀಕರಿಸಿತು. ಅವನ ಅಂತಿಮ ಕ್ಷಣಗಳಲ್ಲಿ ಟಾಲ್ಸ್‌ಟಾಯ್ ಏನನ್ನೋ ಹೇಳಲು ಯತ್ನಿಸಿದ. ಆದರೆ ಅವನ ಮಾತುಗಳು ಅಸ್ಪಷ್ಟವಾಗಿದ್ದವು. ಅಲೆಗ್ಸಾಂಡ್ರಾ "To seek always to seek" ಎಂದಷ್ಟೇ ಕೇಳಲು ಸಾಧ್ಯವಾಯ್ತು.

ಕೆಲದಿನಗಳ ನರಳಿಕೆಯ ನಂತರ ೧೯೧೦ರ ನವೆಂಬರ್ ೭ರಂದು ಅವನ ಜೀವನ ಅಂತ್ಯಗೊಂಡಿತು. ದೇಹವನ್ನು ಯಾಸ್ನಾಯಾಪೊಲ್ಯಾನಕ್ಕೆ ಕೊಂಡೊಯ್ಯಲಾಯ್ತು. ಸಾವಿರಾರು ರೈತರು ಅವನ ಶವಪೆಟ್ಟಿಗೆಯನ್ನು ಹಿಂಬಾಲಿಸಿದರು. ಬಲು ಹಿಂದೆಯೇ ತನ್ನಿಂದಲೇ ಆಯ್ಕೆ ಮಾಡಲ್ಪಟ್ಟ ಆಟದ ಸಮಯದಲ್ಲಿ, ಕೇವಲ ಮಗುವಾಗಿದ್ದ ಅವನ ಸೋದರ ನಿಕೊಲಾಯ್‌ನಿಂದ, ಹಸಿರುಕಡ್ಡಿ ಅಡಗಿಸಿಟ್ಟ ತಾಣದಲ್ಲೇ ಟಾಲ್ಸ್‌ಟಾಯ್‌ನನ್ನು ಹುಗಿಯಲಾಯ್ತು. ಈ ಹಸಿರು ಕಡ್ಡಿಗೆ ತನ್ನದೇ ಆದ ಒಂದು ಕಥೆಯಿತ್ತು. ಎಲ್ಲರೂ ಸಂತೋಷದಿಂದ ಅಣ್ಣ ತಮ್ಮಂದಿರಂತೆ ಒಬ್ಬರನ್ನೊಬ್ಬರು ಪ್ರೀತಿಸಿದಾಗ ಸುವರ್ಣ ಯುಗವೊಂದು ಬರಲಿದೆ ಎಂಬ ರಹಸ್ಯದ ಕೆತ್ತನೆ ಅದರ ಮೇಲಿತ್ತು.

* * * *